ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಶ್ಮಿಕಾ-ವಿಜಯ್ ದಾಂಪತ್ಯ ರಾಗ

ಕನ್ನಡದ ಬೆಡಗಿ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರ ವಿವಾಹ ಮಹೋತ್ಸವ ರಾಜಸ್ಥಾನ ಉದಯಪುರದ ಹೋಟೇಲ್‌ನಲ್ಲಿ ಆಯ್ದ ಗಣ್ಯರ ಸಮ್ಮುಖ ಅದ್ದೂರಿಯಾಗಿ ನೆರವೇರಿತು. ಬೆಳಗ್ಗೆ ಹಿಂದೂ ಸಂಪ್ರದಾಯದಂತೆ ವಿಜಯ್ ದೇವರಕೊಂಡ ಮಾಂಗಲ್ಯ ಧಾರಣೆ ಮಾಡಿದರು. ಸಂಜೆ ಕೊಡವ ಸಂಪ್ರದಾಯದಂತೆ ಮದುವೆ ಶಾಸ್ತ್ರ ನೆರವೇರಿತು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತದ ಸೆಮಿ ಆಸೆ ಜೀವಂತ

ಟಿ20 ವಿಶ್ವಕಪ್ ಸೂಪರ್-8 ಪಂದ್ಯದಲ್ಲಿ ಗುರುವಾರ ಜಿಂಬಾಬ್ವೆ ವಿರುದ್ಧ ಭಾರತ 72 ರನ್‌ಗಳ ಜಯ ಗಳಿಸಿ ಸೆಮಿಫೈನಲ್ ಕನಸನ್ನು ಜೀವಂತವಾಗಿರಿಸಿದೆ. ಅಭಿಷೇಕ್ ಶರ್ಮಾ (55), ಹಾರ್ದಿಕ್ ಪಾಂಡ್ಯ (50), ತಿಲಕ್ ವರ್ಮಾ (44) ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಭಾರತ 4 ವಿಕೆಟ್‌ಗೆ 256 ರನ್ ಪೇರಿಸಿದರೆ, ಜಿಂಬಾಬ್ವೆ 6 ವಿಕೆಟ್‌ಗೆ 186 ರನ್ ಗಳಿಸಲಷ್ಟೇ ಶಕ್ತವಾಯಿತು.

ಸೊಂಪಾದ ಪುಟಗಳು

ಟಿಂಗ್ ಟಿಂಗ್ ಮೋಹಿನಿ ಮತ್ತು ಕೂರುವುದು ಎಂಬ ಸಾಧನೆ
ಶಿಶಿರಕಾಲ
ಶಿಶಿರ್ ಹೆಗಡೆ 6

ಪುನರ್ಜನ್ಮ ಪಡೆದ ಒಂದು ಗೊಂಡಾರಣ್ಯ!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಜಗತ್ತಿನ ಅತ್ಯಂತ ಸುಂದರವಾದ ಉಡುಗೆ ಎಂದರೆ ಅದು ನಮ್ಮ ಮುಖದ ಮೇಲಿರುವ ಕಿರುನಗೆ ಮತ್ತು ಮನಸ್ಸಿನಲ್ಲಿರುವ ವಿನಯ. ಇವಿಲ್ಲದೇ ನೀವು ಎಷ್ಟೇ ದುಬಾರಿ ಅಥವಾ ಡಿಸೈನರ್ ಬಟ್ಟೆ ಧರಿಸಿದರೂ ಪ್ರಯೋಜನವಿಲ್ಲ.

ವಕ್ರತುಂಡೋಕ್ತಿ

ನೀವು ಬಿದ್ದಾಗ ಮೇಲೆತ್ತುವ ಬದಲು, ಫೋಟೋ ತೆಗೆದು ಇನ್‌ಸ್ಟಾಗ್ರಾಮ್‌ಗೆ ಹಾಕ್ತಾನಲ್ಲ ಅವನೇ ನಿಜವಾದ ಫ್ರೆಂಡ್.

ಕ್ಷಿಪಣಿ ನಿರೋಧಕ ತಂತ್ರಜ್ಞಾನ ಸೇರಿ ಹಲವು ರಕ್ಷಣಾ ಒಪ್ಪಂದಕ್ಕೆ ಸಹಿ

ಇಸ್ರೇಲ್ ಜತೆ ಮುಕ್ತ ವ್ಯಾಪಾರ ಒಪ್ಪಂದ

ಟೆಲ್‌ಅವೀವ್: ಇಸ್ರೇಲ್ ಜೊತೆ ರಕ್ಷಣಾ, ವ್ಯಾಪಾರ ಮತ್ತು ಭಯೋತ್ಪಾದನಾ ನಿಗ್ರಹ ಸಂಬಂಧಗಳನ್ನು ಬಲಪಡಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದು, ಎರಡು ದೇಶಗಳ ನಡುವಿನ ಹೊಸ ಮೈತ್ರಿ ಶಕೆಯ ಭಾಗವಾಗಿ ಸದ್ಯದಲ್ಲೇ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಅಂತಿಮ ರೂಪ ಸಿಗಲಿದೆ ಎಂದು ತಿಳಿಸಿದ್ದಾರೆ.

ಜೆರುಸಲೆಮ್‌ನಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ಮಾತುಕತೆ ನಡೆಸಿದ ನಂತರ ಜಂಟಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ, ಭಾರತದ ಭದ್ರತಾ ಹಿತಾಸಕ್ತಿಗಳು, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಗೆ ನಿಕಟ ಸಂಬಂಧ ಹೊಂದಿವೆ ಎಂದರು. ಗಾಜಾ ಸಂಘರ್ಷ ಕೊನೆಗೊಳಿಸುವ ಪ್ರಯತ್ನಗಳಿಗೆ ಭಾರತದ ಬೆಂಬಲವನ್ನು ಪುನರುಚ್ಚರಿಸಿದರು.

ಮಾನವೀಯತೆಯು ಎಂದಿಗೂ ಸಂಘರ್ಷಕ್ಕೆ ಬಲಿಯಾಗಬಾರದು. ಗಾಜಾ ಶಾಂತಿ ಯೋಜನೆಯ ಪ್ರಯತ್ನಗಳನ್ನು ಭಾರತವು ಸಂಪೂರ್ಣವಾಗಿ ಬೆಂಬಲಿಸಿದೆ. ಭವಿಷ್ಯದಲ್ಲಿಯೂ ಸಹ, ನಾವು ಎಲ್ಲಾ ದೇಶಗಳೊಂದಿಗೆ ಮಾತುಕತೆ ಮತ್ತು ಸಹಕಾರವನ್ನು ಮುಂದುವರಿಸುತ್ತೇವೆ ಎಂದು ಮೋದಿ ಹೇಳಿದರು.

ಭಯೋತ್ಪಾದನೆ ವಿರುದ್ಧ ತಮ್ಮ ನಿಲುವನ್ನು ಒತ್ತಿ ಹೇಳಿದ ಇಬ್ಬರೂ ನಾಯಕರು, ಯಾವುದೇ ರೂಪದಲ್ಲಿ, ಯಾವುದೇ ಅಭಿವ್ಯಕ್ತಿಯಲ್ಲಿ ಅದಕ್ಕೆ ಸ್ಥಾನವಿಲ್ಲ ಎಂದು ಘೋಷಿಸಿದರು. ಭಯೋ ತ್ಪಾದನೆ ಮತ್ತು ಅದರ ಬೆಂಬಲಿಗರನ್ನು ಎದುರಿಸು ವಲ್ಲಿ ಭಾರತ ಮತ್ತು ಇಸ್ರೇಲ್ ನಿರಂತರವಾಗಿ ಹೆಗಲಿಗೆ ಹೆಗಲು ಕೊಟ್ಟು ನಿಂತಿವೆ ಮತ್ತು ಅದನ್ನು ಮುಂದುವರಿಸುತ್ತವೆ. ಇಂದಿನ ಅನಿಶ್ಚಿತ ಜಗತ್ತಿನಲ್ಲಿ, ಭಾರತ ಮತ್ತು ಇಸ್ರೇಲ್‌ನಂತಹ ವಿಶ್ವಾಸಾರ್ಹ ಪಾಲುದಾರರ ನಡುವೆ ಬಲವಾದ ರಕ್ಷಣಾ ಪಾಲುದಾರಿಕೆ ಅತ್ಯಗತ್ಯ ಎಂದು ಮೋದಿ ಹೇಳಿದರು.

ಭಾರತಕ್ಕೆ ಕ್ಷಿಪಣಿ ನಿರೋಧಕ ವ್ಯವಸ್ಥೆ

ಉಭಯ ರಾಷ್ಟ್ರಗಳ ನಡುವಿನ ರಕ್ಷಣಾ ಸಂಬಂಧಗಳು ಪಾಲುದಾರಿಕೆಯ ಪ್ರಮುಖ ಆಧಾರಸ್ತಂಭ ಎಂದು ಪ್ರಧಾನಿ ಮೋದಿ ಅವರು ಹೇಳಿದ್ದು ಇಸ್ರೇಲ್‌ನಿಂದ ಐರನ್ ಡ್ರೋಮ್ ತಂತ್ರಜ್ಞಾನ ಸೇರಿದಂತೆ ಪ್ರಮುಖ ರಕ್ಷಣಾ ತಂತ್ರಜ್ಞಾನ ಖರೀದಿ ಸಂಬಂಧ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆ ಇದೆ. ಪ್ರಧಾನಿ ಮೋದಿ ತಮ್ಮ ಭೇಟಿಯ ಭಾಗವಾಗಿ ಇಸ್ರೇಲ್ ನಿರ್ಮಿತ ಕ್ಷಿಪಣಿ ವ್ಯವಸ್ಥೆಗಳಿಗೆ ಪ್ರಮುಖ ಆದೇಶವನ್ನು ಅಂತಿಮಗೊಳಿಸುವ ನಿರೀಕ್ಷೆಯಿದೆ. ಆದರೆ ಒಪ್ಪಂದದ ನಿರ್ದಿಷ್ಟ ವಿವರಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿಲ್ಲ. ರಕ್ಷಣಾ ತಂತ್ರಜ್ಞಾನ ವರ್ಗಾವಣೆಯನ್ನು ಸಕ್ರಿಯಗೊಳಿಸುವ ಚೌಕಟ್ಟು ಒಳಗೊಂಡಂತೆ ಜಂಟಿ ಅಭಿವೃದ್ಧಿ ಮತ್ತು ಮಿಲಿಟರಿ ಹಾರ್ಡ್‌ವೇರ್‌ನ ಜಂಟಿ ಉತ್ಪಾದನೆಯ ಮೂಲಕ ಸಹಯೋಗವನ್ನು ಮತ್ತಷ್ಟು ವಿಸ್ತರಿಸಲು ಎರಡೂ ದೇಶಗಳು ಒಪ್ಪಿಕೊಂಡಿವೆ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪ್ರಶಸ್ತಿ ಸ್ನೇಹಕ್ಕೆ ಅರ್ಪಣೆ

ಇಸ್ರೇಲ್ ದೇಶದ ಅತ್ಯುಚ್ಚ ನಾಗರಿಕ ಗೌರವವಾದ 'ಸ್ಪೀಕರ್ ಆಫ್ ದಿ ಕೆನೆಸೆಟ್ ಮೆಡಲ್' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪ್ರಧಾನಿ ಮೋದಿ, ಈ ಪ್ರಶಸ್ತಿಯನ್ನು ಭಾರತ ಮತ್ತು ಇಸ್ರೇಲ್ ಸ್ನೇಹಕ್ಕೆ ಅರ್ಪಣೆ ಮಾಡುತ್ತೇನೆ ಎಂದು ಹೇಳಿದರು. ಬಳಿಕ ಇಸ್ರೇಲ್ ಪ್ರವಾಸದ ಸಂದರ್ಭದಲ್ಲಿ ಸಿಕ್ಕ ಅದ್ದೂರಿ ಸ್ವಾಗತಕ್ಕೆ ಪ್ರಧಾನಿ ನೆತನ್ಯಾಹು ಅವರಿಗೆ ಧನ್ಯವಾದ ಸಲ್ಲಿಸಿದರು.

ಇಸ್ರೇಲಿಗರು ಕಣ್ಣೀರಿಟ್ಟರು

ಪ್ರಧಾನಿ ಮೋದಿ ಇಸ್ರೇಲ್ ಪ್ರವಾಸದ ಬಗ್ಗೆ ಇಸ್ರೇಲ್ ಪ್ರಧಾನಿ ನೆತನ್ಯಾಹು ಮೆಚ್ಚುಗೆಯ ಮಾತನ್ನಾಡಿದ್ದಾರೆ. ಇದೊಂದು ಅದ್ಭುತ ಭೇಟಿ ಎಂದು ಬಣ್ಣಿಸಿದ್ದಾರೆ. ಈ ಭೇಟಿ ಅಲ್ಪಾವಧಿ ಆಗಿದ್ದರೂ ಫಲಪ್ರದವಾಗಿದೆ. ಇಸ್ರೇಲ್ ಸಂಸತ್ತಿನಲ್ಲಿ ಪ್ರಧಾನಿ ಮೋದಿ ನೀಡಿರುವ ಭಾವನಾತ್ಮಕ ಹೇಳಿಕೆಯ ಬಳಿಕ ಇಸ್ರೇಲ್‌ನಲ್ಲಿ ಕಣ್ಣೀರು ಹಾಕದ ಪ್ರಜೆಗಳೇ ಇಲ್ಲ ಎಂದು ನೆತನ್ಯಾಹು ಹೇಳಿದರು.

56,432 ಹುದ್ದೆಗಳಿಗೆ ಶೇ.50ರ ಮಿತಿಯಲ್ಲಿ ಮೀಸಲು ನಿಗದಿ

ನೇಮಕಾತಿ ಪ್ರಕ್ರಿಯೆ ಸಂಪುಟ ಸಭೆ ಅಸ್ತು

ಬೆಂಗಳೂರು: ಉದ್ಯೋಗಾಕಾಂಕ್ಷಿಗಳ ಹೋರಾಟಕ್ಕೆ ಮಣಿದಿರುವ ರಾಜ್ಯ ಸರಕಾರ 56,432 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಲು ನಿರ್ಧರಿಸಿದೆ. ಖಾಲಿ ಇರುವ ಸರಕಾರಿ ಹುದ್ದೆಗಳ ನೇಮಕಾತಿ ಆಗ್ರಹಿಸಿ ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ಬೃಹತ್ ಹೋರಾಟ ನಡೆಸಿದ್ದರು. ಗುರುವಾರ ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಉದ್ಯೋಗ ನೇಮಕಾತಿಗೆ ಚಾಲನೆ ನೀಡಲು ನಿರ್ಧರಿಸಲಾಗಿದೆ.

ಸಭೆಯ ನಂತರ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಮೀಸಲಾತಿಯನ್ನು ಶೇ.50ರಷ್ಟು ನಿಗದಿಗೊಳಿಸಿ ನೇಮಕಾತಿಗೆ ಚಾಲನೆ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಇನ್ನು ಒಂದು ತಿಂಗಳ ಒಳಗಾಗಿ



ನೇಮಕಕ್ಕೆ ಚಾಲನೆ ನೀಡಲಾಗುತ್ತಿದ್ದು, ಶೇ.56 ಮೀಸಲಾತಿ ಬದಲು ಶೇ.50ರ ಮೀಸಲಾತಿ ಅಡಿಯಲ್ಲೇ ನೇಮಕಾತಿ ಮಾಡಲು ನಿರ್ಧಾರ ಮಾಡಲಾಗಿದೆ. ಹುದ್ದೆ ಭರ್ತಿಗಾಗಿ ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರೆತಿದೆ ಎಂದರು.

ರೋಹಿತ್ ವೇಮುಲಾ ಕಾಯಿದೆಗೆ ಅನುಮೋದನೆ: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರಿತ ದೌರ್ಜನ್ಯ ತಡೆಯುವ ಸಲುವಾಗಿ ರೋಹಿತ್ ವೇಮುಲಾ ಕಾಯಿದೆ ಜಾರಿಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಮುಂದಿನ ಬಜೆಟ್ ಅಧಿವೇಶನದಲ್ಲಿ ಈ ವಿಧೇಯಕ ಮಂಡನೆ ಮಾಡಲು ಸಂಪುಟ ಸಭೆ ನಿರ್ಧರಿಸಿದೆ. ರಾಜ್ಯದಲ್ಲಿ ರೋಹಿತ್ ವೇಮುಲ ಕಾಯಿದೆ ಜಾರಿ ಮಾಡುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಇದರಂತೆ ರೋಹಿತ್ ವೇಮುಲ ಕಾಯಿದೆ ಸಿದ್ದಪಡಿಸಲಾಗಿದ್ದು, ಸಾಕಷ್ಟು ಚರ್ಚೆಯ ಬಳಿಕ ವಿಧೇಯಕಕ್ಕೆ ಸಂಪುಟ ಅನುಮೋದನೆ ನೀಡಿದೆ. ಇದಲ್ಲದೆ, ಮರ್ಯಾದಾ ತಡೆ ಹತ್ಯೆ ವಿಧೇಯಕದ ಬಗ್ಗೆ ಗೃಹ ಇಲಾಖೆ ಅಭಿಪ್ರಾಯ ಪಡೆಯಲು ತೀರ್ಮಾನಿಸಲಾಗಿದೆ ಎಂದರು.

ಕಾವೇರಿ ನೀರು: ಡಿಪಿಆರ್‌ಗೆ ಅನುಮೋದನೆ

ಬೆಂಗಳೂರು ಮತ್ತು ಹೊರವಲಯಕ್ಕೆ ಆರನೇ ಹಂತದ ಕಾವೇರಿ ಕುಡಿಯುವ ನೀರು ಯೋಜನೆ ಜಾರಿಗೆ ಸಿದ್ದಪಡಿಸಿರುವ ಡಿಪಿಆರ್‌ಗೆ ಸಂಪುಟ ಅನುಮೋದನೆ ನೀಡಿದೆ. ಈಗಾಗಲೇ 5ನೇ ಹಂತದ ಮೂಲಕ ನಗರಕ್ಕೆ ಒಟ್ಟು 2225 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದೆ. ಇದರಿಂದ ಸುಮಾರು 1.50 ಕೋಟಿ ಜನರಿಗೆ ಕಾವೇರಿ ನೀರು ಸರಬರಾಜುಗೆ ಅನುಕೂಲವಾಗಲಿದೆ. ಬಿಬಿಎಂಪಿಗೆ ಸೇರ್ಪಡೆಯಾದ ಹೊಸ ಪ್ರದೇಶಗಳ ಕುಡಿಯುವ ನೀರಿನ ಅಗತ್ಯ ಗಮನದಲ್ಲಿಟ್ಟು 6ನೇ ಹಂತ ಯೋಜನೆಯನ್ನು ಜಲಮಂಡಳಿ ರೂಪಿಸಿದೆ. ಇದರಡಿ ಒಟ್ಟು ಆರು ಟಿಎಂಸಿ ನೀರು ಸಿಗಲಿದ್ದು, ಒಟ್ಟು ಅಂದಾಜು ವೆಚ್ಚ 6,939 ಕೋಟಿ ರು.ಗಳಾಗಿವೆ. ಯೋಜನಾ ವೆಚ್ಚ 5,177 ಕೋಟಿ ರು.ಗಳಾಗಿದ್ದು, 130 ಎಕರೆ ಭೂಸ್ವಾಧೀನಕ್ಕಾಗಿ 1,822 ಕೋಟಿ ರು.ವ್ಯಯಿಸಲಾಗುತ್ತಿದೆ. ಯೋಜನೆಯಿಂದ ನಗರದ ಭಾಗಗಳಿಗೆ 4 ಟಿಎಂಸಿ ನೀರು ಸಿಗಲಿದೆ. ಹೊಸದಾಗಿ ರಚನೆಯಾಗಿರುವ ನಾಡಪ್ರಭು ಕೆಂಪೇಗೌಡ ಬಡಾವಣೆ, ಶಿವರಾಮ ಕಾರಂತ ಬಡಾವಣೆ ಸೇರಿದಂತೆ ಇತರೆ ಪ್ರಮುಖ ಪ್ರದೇಶಗಳಿಗೆ ನೀರು ಸಿಗಲಿದೆ. ಇದಲ್ಲದೆ ಗ್ರಾಮೀಣ ಭಾಗಕ್ಕೆ 2 ಟಿಎಂಸಿ ನೀರು ದೊರಕಲಿದ್ದು, ದೇವನಹಳ್ಳಿ, ಹೊಸಕೋಟೆ, ಹುಣಸಮಾರನಹಳ್ಳಿ, ಮಾದನಾಯಕನಹಳ್ಳಿ, ನೆಲಮಂಗಲ, ಚಿಕ್ಕಬಾಣಾವಾರ ಸೇರಿದಂತೆ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಬೇಡಿಕೆ ಯಂತೆ ನೀರು ಲಭ್ಯವಾಗಲಿದೆ.

ದಿ ಕೇರಳ ಸ್ಟೋರಿ ಬಿಡುಗಡೆಗೆ ತಡೆ

ಕೊಚ್ಚಿ: 'ದಿ ಕೇರಳ ಸ್ಟೋರಿ 2: ಗೋಸ್ ಬಿಯಾಂಡ್' ಚಿತ್ರದ ಬಿಡುಗಡೆಗೆ ಕೇರಳ ಹೈಕೋರ್ಟ್ ಗುರುವಾರ ಮಧ್ಯಂತರ ತಡೆಯಾಜ್ಞೆ ನೀಡಿದೆ. ಚಿತ್ರಕ್ಕೆ ಪ್ರಮಾಣಪತ್ರ ನೀಡಿದ ಸೆನ್ಸಾರ್ ಮಂಡಳಿಯ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಸೆನ್ಸಾರ್ ಮಂಡಳಿಯ ಕಾರ್ಯವೈಖರಿಯನ್ನು ಪ್ರಶ್ನಿಸಿದೆ. ಸೆನ್ಸಾರ್ ಮಂಡಳಿ ನಿಯಮಗಳನ್ನು ಪಾಲಿಸಿರುವುದೇ ಎಂದು ಅನುಮಾನ ವ್ಯಕ್ತಪಡಿಸಿದ ನ್ಯಾಯಮೂರ್ತಿ ಬೆಚು ಕುರಿಯನ್ ಥಾಮಸ್ ಅವರು, ಚಿತ್ರವನ್ನು ಫೆಬ್ರವರಿ 27ರಂದು ಬಿಡುಗಡೆ ಮಾಡಲು ಅವಕಾಶ ನೀಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರೇವಣ್ಣ ವಿರುದ್ಧ ಮತ್ತೆ ವಿಚಾರಣೆ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿದ ಆರೋಪ ಸಂಬಂಧ ತಂದೆ, ಶಾಸಕ ಎಚ್. ಡಿ. ರೇವಣ್ಣ ವಿರುದ್ಧದ ವಿಚಾರಣೆಯನ್ನು ಕಾನೂನು ರೀತಿ ಮುಂದುವರಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲ ಯಕ್ಕೆ ಹೈಕೋರ್ಟ್ ಗುರುವಾರ ಸೂಚನೆ ನೀಡಿದೆ. ಪ್ರಕರಣ ಸಂಬಂಧ ಮೈಸೂರು ಜಿಲ್ಲೆಯ ಕೆ. ಆರ್. ಪೇಟೆ ಠಾಣೆಗೆ ಸಂತ್ರಸ್ತೆಯ ಪುತ್ರ ನೀಡಿದ್ದ ದೂರಿನ ಮೇರೆಗೆ ತನಿಖೆ ನಡೆಸಿ ಸಿಐಡಿ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ಡಿಜಿಟಲ್ ವಂಚನೆ: ಮೂವರ ಸೆರೆ

ಸೈಬರ್ ವಂಚನೆ: ಆರು ರಾಜ್ಯದಲ್ಲಿ ಸಿಬಿಐ ದಾಳಿ

ಬೆಂಗಳೂರು: ದೇಶಾದ್ಯಂತ ಸಾರ್ವಜನಿಕರನ್ನು ಬೆಚ್ಚಿಬೀಳಿಸುತ್ತಿರುವ ಡಿಜಿಟಲ್ ಅರೆಸ್ಟ್ ವಂಚನೆ ಜಾಲದ ವಿರುದ್ಧ ಕೇಂದ್ರ ತನಿಖಾ ದಳ ಸಮರ ಸಾರಿದೆ. ಆರು ರಾಜ್ಯಗಳಲ್ಲಿ ಏಕಕಾಲಕ್ಕೆ ಮಿಂಚಿನ ಕಾರ್ಯಾ ಚರಣೆ ನಡೆಸಿರುವ ಅಧಿಕಾರಿಗಳು, ಸುಮಾರು 1.86 ಕೋಟಿ ರುಪಾಯಿ ಮೊತ್ತದ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಪ್ರಮುಖ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಡೀ ಪ್ರಕರಣದ ತನಿಖೆ ಆರಂಭವಾಗಿದ್ದು ಕೇರಳದ ಕೊಟ್ಟಾಯಂ ಜಿಲ್ಲೆಯ ಹಿರಿಯ ನಾಗರಿಕರೊಬ್ಬರಿಗೆ ನಡೆದ ವಂಚನೆಯಿಂದ. ತನಿಖಾ ಸಂಸ್ಥೆಯು ಅತ್ಯಾಧುನಿಕ ಡಿಜಿಟಲ್ ವಿಧಿ ವಿಜ್ಞಾನ ಮತ್ತು ಹಣಕಾಸಿನ ಹರಿವಿನ ವಿಶ್ಲೇಷಣೆಯನ್ನು ನಡೆಸಿ ದಾಗ, ಈ ವಂಚನೆಯ ಜಾಲವು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾಗಿರದೆ ಭಾರತದ ವಿವಿಧ ರಾಜ್ಯ ಗಳಿಗೆ ಹರಡಿರುವುದು ಮತ್ತು ಅಂತರಾಷ್ಟ್ರೀಯ ಸಂಪರ್ಕಗಳನ್ನು ಹೊಂದಿರುವುದು ಬೆಳಕಿಗೆ ಬಂದಿದೆ.

ಬೆಂಗಳೂರು ಸೇರಿ ಆರು ರಾಜ್ಯಗಳಲ್ಲಿ ಸಿಬಿಐ ಶೋಧ: ವಂಚಕರ ಜಾಲವನ್ನು ಭೇದಿಸಲು ಸಿಬಿಐ ಅಧಿಕಾರಿಗಳು ಕರ್ನಾ ಟಕದ ಬೆಂಗಳೂರು, ಕೇರಳದ ಪಾಲಕ್ಕಾಡ್, ಗೋವಾ, ಮಹಾ ರಾಷ್ಟ್ರದ ನಾಗಪುರ, ತೆಲಂಗಾಣದ ಹೈದರಾಬಾದ್ ಮತ್ತು ದೆಹಲಿಯ ಹಲವು ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿದರು. → 4

5ಜಿ ಸಿಮ್ ಹೆಸರಲ್ಲಿ ವಂಚನೆ

ಬೆಂಗಳೂರಿನಲ್ಲಿ ಬಂಧಿತನಾದ ಆರೋಪಿಯು ಜನಸಾಮಾನ್ಯ ರಿಗೆ 5ಜಿಗೆ ಸಿಮ್ ಕಾರ್ಡ್ ಅಪ್‌ಗ್ರೇಡ್ ಮಾಡುವ ಆಮಿಷ ವೊಡ್ಡಿ, ಅವರಿಂದ ಪಡೆದ ಕೆವೈಸಿ ದಾಖಲೆಗಳನ್ನು ಬಳಸಿ ಅಕ್ರಮವಾಗಿ ಸಿಮ್ ಕಾರ್ಡ್‌ಗಳನ್ನು ಸಕ್ರಿಯಗೊಳಿಸುತ್ತಿದ್ದ. ಈ ನಂಬರ್‌ಗಳನ್ನು ವಿದೇಶದಿಂದ ನಡೆಯುವ ಸೈಬರ್ ದಾಳಿಗಳಿಗೆ ಬಳಸಲಾಗುತ್ತಿತ್ತು.

ನಟಿ ಐಶ್ವರ್ಯಾ ಭಾಗಿ ಆರೋಪ

ನಿರ್ದೇಶಕನ ಅಪಹರಿಸಿ ಹಲ್ಲೆ, 11 ಮಂದಿ ಸೆರೆ

ಬೆಂಗಳೂರು: ನಿರ್ದೇಶಕ ಅನಿಶ್‌ನನ್ನು ಅಪಹರಿಸಿ ಚಿನ್ನಾಭರಣ ದೋಚಿದ್ದ ಗ್ಯಾಂಗ್ ಪೊಲೀಸರ ಬಲೆಗೆ ಬಿದ್ದಿದೆ. ಭೀಮಾ ಸಿನಿಮಾ ನಟಿ ಸೇರಿ 11 ಆರೋಪಿ ಗಳನ್ನು ಬಂಧಿಸಲಾಗಿಖದೆ. ಆಡುಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿತ್ತು. ಕೆಲ ಕಿರುಚಿತ್ರಗಳಿಗೆ ನಿರ್ದೇಶನ ನೀಡುತ್ತಿದ್ದ ನಿರ್ದೇಶಕ ಅನಿಶ್ ಇತ್ತೀಚೆಗೆ 'ಜೀವನದ ಭಾಷೆ' ಎನ್ನುವ ಹೊಸ ಸಿನಿಮಾವೊಂದನ್ನು ಶುರು ಮಾಡಿದ್ದರು. ಕಾರಣಾಂತರಗಳಿಂದ ಸಿನಿಮಾ ನಿಲ್ಲಿಸಿ ಮುಂಬೈಗೆ ಶಿಫ್ಟ್ ಆಗಿದ್ದರು. ಬೆಂಗಳೂರಿನಿಂದ ಮುಂಬೈಗೆ ಶಿಫ್ಟ್ ಆಗಿದ್ದ ನಿರ್ದೇಶಕ, ನಟಿ ಐಶ್ವರ್ಯಾಗೆ ತನ್ನ ಕಾರು ಮಾರಾಟದ ಬಗ್ಗೆ ವಿಚಾರ ತಿಳಿಸಿದ್ದರು. ನಟಿಯ ಮೂಲಕ ಮಾಹಿತಿ ಕಲೆ ಹಾಕಿದ್ದ ಆರೋಪಿಗಳು, ಕಾರು ಖರೀದಿ ಮಾಡುವುದಾಗಿ ಹೇಳಿದ್ದರು. ನಟಿಯ ಮೂಲಕ ನಿರ್ದೇಶಕನನ್ನು ಆಡುಗೋಡಿ ಠಾಣಾ ವ್ಯಾಪ್ತಿಯಲ್ಲಿನ ಪ್ರದೇಶವೊಂದಕ್ಕೆ ಕರೆಸಿಕೊಂಡು ಅಪಹರಿಸಿದ್ದರು. ಕಾರಿನಲ್ಲಿ ಅಪಹರಣ ಮಾಡಿದ ಬಳಿಕ ನಿರ್ದೇಶಕನನ್ನು ಬ್ಯಾಡರಹಳ್ಳಿಯ ಮನೆಯೊಂದರಲ್ಲಿ ಇರಿಸಿ, ಕ್ರಿಕೆಟ್ ಸ್ಟಂಪ್, ಹಾಕಿ ಸ್ಟಿಕ್‌ನಿಂದಲೂ ಹಲ್ಲೆ ನಡೆಸಿದ್ದರು. ಬಳಿಕ ಆತನ ಬಳಿಯಿದ್ದ ಚಿನ್ನಾಭರಣ ದೋಚಿಕೊಂಡು, ತುಮಕೂರಿನ ಮಧುಗಿರಿ ಬಳಿ ಬಿಟ್ಟಿದ್ದರು. ಈ ಸಂಬಂಧ ನಿರ್ದೇಶಕ ನೀಡಿದ್ದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ಆಡುಗೋಡಿ ಠಾಣೆಯ ಪೊಲೀಸರು, ನಟಿ ಐಶ್ವರ್ಯಾ ಸೇರಿ ಹನ್ನೊಂದು ಜನ ಆರೋಪಿಗಳನ್ನು ಬಂಧಿಸಿದ್ದಾರೆ.

ಹಣಕಾಸು ವಿವಾದ: ಅಪಹರಣ: ಪ್ರಮುಖ ಆರೋಪಿ ಆಶೀರ್ವಾದ್ ಎಂಬಾತನದ್ದೇ ಅಪಹರಣ ಸಂಚು ಎಂದು ತನಿಖೆಯಲ್ಲಿ ತಿಳಿದು ಬಂದಿದೆ. 5 ಲಕ್ಷ ಹಣದ ವಿಚಾರಕ್ಕೆ ಆಶೀರ್ವಾದ್ ಮತ್ತು ನಿರ್ದೇಶಕನ ನಡುವೆ ಗಲಾಟೆ ನಡೆದಿತ್ತು. ಇದೇ ವಿಚಾರಕ್ಕೆ ಅಪಹರಣ ಮಾಡಿದ್ದಾರೆ ಎಂಬುದು ಗೊತ್ತಾಗಿದೆ. . ದುನಿಯಾ ವಿಜಯ್ ಅಭಿನಯದ ಭೀಮಾ ಸಿನಿಮಾದಲ್ಲಿ ನಟಿಸಿದ್ದ ಐಶ್ವರ್ಯಾ ಜತೆ ಇವರಿಗೆ ಸಂಪರ್ಕವಿತ್ತು. ನಟಿಯ ಮೂಲಕವೇ ಕಾರು ಖರೀದಿ ಮಾಡುತ್ತೇವೆ ಎಂದು ಕರೆ ಮಾಡಿಸಿ ಅಪಹರಣ ಮಾಡಿದ್ದರು ಎನ್ನಲಾಗಿದೆ.

ಲಿಂಗಾಯತ ನಾಯಕರ ಸಮ್ಮಿಲನ

ಬಿಎಸ್‌ವೈ ಹುಟ್ಟುಹಬ್ಬ ಶಿಕಾರಿಪುರದಲ್ಲಿ ಸಂಭ್ರಮ

ಶಿಕಾರಿಪುರ: ರಾಜ್ಯ ರಾಜಕಾರಣದಲ್ಲಿ ಮೇರು ನಾಯಕನಾಗಿ ಮೆರೆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ 84ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದು, ಹುಟ್ಟೂರು ಶಿಕಾರಿಪುರದಲ್ಲಿ ಅದ್ದೂರಿ ಆಚರಣೆಗೆ ಸಕಲ ಸಿದ್ಧತೆಗಳು ನಡೆದಿವೆ. ಈ ಬಾರಿಯ 'ಹುಟ್ಟುಹಬ್ಬ' ಕೇವಲ ಸಂಭ್ರಮಾಚರಣೆಯಾಗಿ

ಉಳಿದಿಲ್ಲ, ಬದಲಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಬಹುದೊಡ್ಡ ರಾಜಕೀಯ 'ಶಕ್ತಿ ಪ್ರದರ್ಶನ'ದ ವೇದಿಕೆಯಾಗಿ ಮಾರ್ಪಟ್ಟಿದೆ. ಕಳೆದ ಬಾರಿ ಬಿಎಸ್‌ವೈ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಿರಲಿಲ್ಲ. ಆದರೆ ಈ ಬಾರಿ ಬೃಹತ್ ಕಾರ್ಯಕ್ರಮ ಆಯೋಜಿಸಲಾಗಿದೆ. ಬಿಎಸ್‌ವೈ ಬೆನ್ನಿಗಿರುವ ಜಾತಿ ಬಲ ಹಾಗೂ ಜನಬೆಂಬಲ ನನ್ನ ಜೊತೆಗೂ ಇದೆ ಎಂಬ ಸ್ಪಷ್ಟ ಸಂದೇಶವನ್ನು ಸ್ವಪಕ್ಷದ ವಿರೋಧಿ ಬಣಕ್ಕೆ ರವಾನಿಸುವುದು ಬಿವೈವಿ ಅವರ ಯೋಜನೆ ಎನ್ನಲಾಗಿದೆ.

ನಾಯಕರ ಸಮ್ಮಿಲನ: ಸಮುದಾಯದ ಒಗ್ಗಟ್ಟು ಮತ್ತು ತಂದೆಯ ವರ್ಚಸ್ಸನ್ನು ಪೂರ್ಣ ಪ್ರಮಾಣದಲ್ಲಿ ಬಳಸಿ ಕೊಳ್ಳಲು ಮುಂದಾಗಿರುವ ಬಿವೈವಿ, ಯಡಿಯೂರಪ್ಪನವರ ಸಮ್ಮುಖದಲ್ಲೇ ಪ್ರಬಲ ಲಿಂಗಾಯತ ನಾಯಕರನ್ನು ಒಂದೇ ವೇದಿಕೆ ಯಲ್ಲಿ ಸೇರಿಸುವ ಪ್ರಯತ್ನದಲ್ಲಿದ್ದಾರೆ. ಯಡಿಯೂರಪ್ಪ ಕುಟುಂಬದ ವತಿಯಿಂದಲೇ ಕೇಂದ್ರದ ವರಿಷ್ಠರಿಗೆ, ರಾಜ್ಯದ ಪ್ರಮುಖ ನಾಯಕರಿಗೆ, ಸಂಘ ಪರಿವಾರದ ಮುಖಂಡರಿಗೆ ಹಾಗೂ ಪ್ರಬಲ ಲಿಂಗಾಯತ ನಾಯಕರಿಗೆ ಅಧಿಕೃತ ಆಹ್ವಾನ ನೀಡಲಾಗಿದೆ. ಪ್ರಸಿದ್ಧ ಸಂಗೀತ ನಿರ್ದೇಶಕ ಅರ್ಜುನ್ ಜನ್ಯಾ ತಂಡದಿಂದ ಸಂಗೀತ ಕಾರ್ಯಕ್ರಮವಿದ್ದು, ಖ್ಯಾತ ನಿರೂಪಕಿ ಅನುಶ್ರೀ ಗಾಯಕಿ ಮಂಗ್ಲಿ, ಹನುಮಂತ ನಾಯ್ಕ, ಗಿಲ್ಲಿ ನಟರಾಜ್, ಕಾವ್ಯ, ವ್ಯಾಸ ರಾಜ್, ನಿಶಾನ್ ರೈ, ಸುನೀಲ್, ಜಸ್ಕರಣ್ ಸಿಂಗ್, ಐಶ್ವರ್ಯ, ಪೃಥ್ವಿಭಟ್ ಮುಂತಾದ ಹೆಸರಾಂತ ಕಲಾವಿದರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ನೇಮಕಾತಿ ತೊಡಕು ನಿವಾರಣೆ ನಿರೀಕ್ಷೆ

ಒಳಮೀಸಲು ಮಸೂದೆ ರಾಜ್ಯಪಾಲರ ಒಪ್ಪಿಗೆ?

ಬೆಂಗಳೂರು: ಬಹುನಿರೀಕ್ಷಿತ ಎಸ್‌ಸಿ ಒಳ ಮೀಸಲಾತಿ (ಪರಿಶಿಷ್ಟ ಜಾತಿಗಳ ಉಪವರ್ಗೀ ಕರಣ) ವಿಧೇಯಕ-2025ಕ್ಕೆ ಮಸೂದೆಗೆ ರಾಜ್ಯ ಪಾಲರು ಅಂಕಿತ ಹಾಕಿದ್ದಾರೆ ಎನ್ನಲಾಗಿದೆ. ಈ ಹಿಂದೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಸಚಿವರ ನಿಯೋಗ ಭೇಟಿಯಾಗಿ ಅಂಕಿತ ಹಾಕುವಂತೆ ಮನವಿ ಮಾಡಿತ್ತು. ಒಳ ಮೀಸಲಾತಿ ಗೊಂದಲದಿಂದ ನೇಮಕಾತಿ ವಿಳಂಬ ವಾಗುತ್ತಿದೆ ಅಂತ ಮನವರಿಕೆ ಮಾಡಿಕೊಟ್ಟಿತ್ತು. ಆಗ ಅಂಕಿತ ಹಾಕುವುದಾಗಿ ಸಚಿವರ ನಿಯೋಗಕ್ಕೆ ರಾಜ್ಯಪಾಲರು ಭರವಸೆ ನೀಡಿದ್ದ ಬೆನ್ನಿಗೇ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ ಎನ್ನಲಾಗಿದೆ.

ಸ್ಪಷ್ಟನೆ ಕೋರಿದ್ದ ರಾಜ್ಯಪಾಲರು: ಕರ್ನಾಟಕ ಅನು ಸೂಚಿತ ಜಾತಿಗಳ ಉಪವರ್ಗೀಕರಣ ವಿಧೇ ಯಕಕ್ಕೆ ರಾಜ್ಯ ಪಾಲರು ಅಂಕಿತ ಹಾಕಲು ನಿರಾಕರಿ ಸಿದ್ದು, ಹಲವು ಸ್ಪಷ್ಟನೆ ಕೋರಿ ವಿಧೇಯಕವನ್ನು ಸರಕಾರಕ್ಕೆ ವಾಪಸ್ ಕಳುಹಿಸಿ ದ್ದರು. ಇದರಿಂದಾಗಿ ರಾಜ್ಯ ಸರಕಾರದ ಒಳಮೀಸಲಾತಿ ಜಾರಿಯ ಆಶಯಕ್ಕೆ ತಾತ್ಕಾಲಿಕ ಧಕ್ಕೆ ಉಂಟಾಗಿತ್ತು. ನ್ಯಾಯ ಮೂರ್ತಿ ನಾಗಮೋಹನ್ ದಾಸ್ ಆಯೋಗದ ಶಿಫಾರಸಿನಂತೆ ಶೇ.6, 6 ಮತ್ತು 5ರ ಅನುಪಾತದಲ್ಲಿ ಕೋಟಾ ನಿಗದಿ ಪಡಿಸಲಾಗಿತ್ತು, ಆದರೆ ರಾಜ್ಯ ಪಾಲರು ಜನವರಿ 9 ರಂದೇ ಈ ಕಡತವನ್ನು ವಾಪಸ್ ಕಳುಹಿಸಿದ್ದರು.

ಸರಕಾರಿ ನೇಮಕಾತಿ ಸ್ಥಗಿತ: ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ನಿರೀಕ್ಷೆ ಹಿನ್ನೆಲೆಯಲ್ಲಿ 2024ರ ಅಕ್ಟೋಬರ್‌ನಿಂದಲೇ ಸರಕಾರ ಎಸ್‌ಸಿ ಒಳಮೀಸಲಾತಿ ವರದಿ ಬರುವವರೆಗೆ ಎಲ್ಲಾ ಸರಕಾರಿ ನೇಮಕಾತಿಗಳನ್ನು (ಹೊಸ ಹುದ್ದೆಗಳು, ಬ್ಯಾಕ್‌ಲಾಗ್ ಹುದ್ದೆಗಳು ಮತ್ತು ಪ್ರಮೋಷನ್‌ಗಳು ಸೇರಿದಂತೆ) ಸ್ಥಗಿತಗೊಳಿಸಿತ್ತು. ಆದರೆ ಸರಕಾರಿ ಆದೇಶಗಳು, ಬಿಲ್ ಮಂಡನೆ ಮತ್ತು ಅನುಮೋದನೆಗಾಗಿ ಇದ್ದ ವಿಳಂಬದಿಂದ ವರದಿ ಸಲ್ಲಿಕೆಯಲ್ಲಿ ವಿಳಂಬವುಂಟಾಗಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -

ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡುವಂತೆ ಶಾಸಕರುಗಳಿಂದ ಹೈಕಮಾಂಡಿಗೆ ಪತ್ರ
ಸುದ್ದಿ



ಪೊಲೀಸರ ಬಾಡಿ ಕೆಮೆರಾ ರೆಕಾರ್ಡ್‌ಗೆ ಸೂಚನೆ

ಪಾಸ್‌ಪೋರ್ಟ್: ಮನೆಗೆ ತೆರಳಿ ವಾಸ್ತವ್ಯ ಪರಿಶೀಲನೆ ಕಡ್ಡಾಯ

ಬೆಂಗಳೂರು: ಪಾಸ್‌ಪೋರ್ಟ್ ಪೊಲೀಸ್ ಪರಿಶೀಲನೆ ನೆಪದಲ್ಲಿ ಸಾರ್ವಜನಿಕರಿಗೆ ಕಿರುಕುಳ ನೀಡುವುದು ಹಾಗೂ ಲಂಚಕ್ಕೆ ಬೇಡಿಕೆ ಇಡುವ ಪ್ರಕರಣಗಳಿಗೆ ಬ್ರೇಕ್ ಹಾಕಲು ರಾಜ್ಯ ಸರಕಾರ ಮಹತ್ವದ ನಿರ್ಣಯವೊಂದನ್ನು ಕೈಗೊಂಡಿದೆ.

ಪಾಸ್‌ಪೋರ್ಟ್ ಪರಿಶೀಲನಾ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ತರುವ ಉದ್ದೇಶದಿಂದ, ಪರಿಶೀಲನೆಗೆ ತೆರಳುವ ಪೊಲೀಸ್ ಸಿಬ್ಬಂದಿಗೆ ಇನ್ನು ಮುಂದೆ ದೇಹದ ಮೇಲೆ ಅಳವಡಿಸಬಹುದಾದ ಕ್ಯಾಮೆರಾಗಳ (ಬಾಡಿ ಕೆಮೆರಾ) ಬಳಕೆಯನ್ನು ಕಡ್ಡಾಯಗೊಳಿಸಿ ಅಧಿಕೃತ ಆದೇಶ ಹೊರಡಿಸಿದೆ. ಇದಲ್ಲದೆ ಅರ್ಜಿದಾರರು ನೀಡಿರುವ ವಸತಿ ವಿಳಾಸಕ್ಕೆ ಅಧಿಕಾರಿಗಳು ಕಡ್ಡಾಯವಾಗಿ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಬೇಕು. ನೆರೆಹೊರೆ



ಯವರು ಹಾಗೂ ಸ್ಥಳೀಯ ನಿವಾಸಿಗಳಿಂದ ಅಗತ್ಯ ಮಾಹಿತಿ ಸಂಗ್ರಹಿಸಬೇಕು. ಯಾವುದೇ ಸನ್ನಿವೇಶದಲ್ಲೂ ಅರ್ಜಿದಾರರನ್ನು ಪೊಲೀಸ್ ಠಾಣೆಗೆ ಕರೆಸಿಕೊಳ್ಳಬಾರದು ಎಂದು ಸ್ಪಷ್ಟ ಸೂಚನೆ ನೀಡಲಾಗಿದೆ. ರಾಜ್ಯ ಡಿಜಿ ಐಜಿಪಿ ಎಂ.ಎ.ಸಲೀಂ ಅವರು ಈ ಆದೇಶ ಹೊರಡಿಸಿದ್ದು, → 4

ವೈವಾಹಿಕ ವ್ಯಾಜ್ಯದಲ್ಲಿ ಆರ್‌ಟಿಐನಡಿ ಮಾಹಿತಿ ನೀಡುವಂತಿಲ್ಲ: ಹೈಕೋರ್ಟ್ ಮಹತ್ವದ ತೀರ್ಪು

ಐಟಿ ವಿವರ ಹೆಂಡ್ತಿಗೂ ಕೊಡುವಂತಿಲ್ಲ...!

ಬೆಂಗಳೂರು: ಆದಾಯ ತೆರಿಗೆ ಪಾವತಿಸುವುದು ವ್ಯಕ್ತಿಯ ಗೌಪ್ಯತೆಯ ವಿಷಯವಾಗಿದ್ದು, ವೈವಾಹಿಕ ವಿವಾದಗಳಲ್ಲಿ ದಂಪತಿಗಳ ಆದಾಯ ತೆರಿಗೆ ಪಾವತಿ ಕುರಿತ ವಿವರ ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ) ಅಡಿ ಯಲ್ಲಿ ಪಡೆಯುವುದಕ್ಕೆ ಅವಕಾಶವಿಲ್ಲ ಹೈಕೋರ್ಟ್ ಹೇಳಿದೆ. ಅಲ್ಲದೆ, ಈ ಸಂಬಂಧ ದಂಪತಿಗಳ ಆದಾಯ ತೆರಿಗೆ ಮತ್ತು ಹಣಕಾಸು ದಾಖಲೆಗಳನ್ನು ಪಡೆಯಲು ಸಮಗ್ರ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಪತಿಯ ಆದಾಯ ತೆರಿಗೆ ಪಾವತಿಗೆ ಸಂಬಂಧಿಸಿದ ವಿವರವನ್ನು ಪತ್ನಿಗೆ ಒದಗಿಸುವಂತೆ ಕೇಂದ್ರ ಮಾಹಿತಿ ಆಯೋಗ ಹೊರಡಿ ಸಿದ್ದ ಆದೇಶ ಪ್ರಶ್ನಿಸಿ, ಆದಾಯ ತೆರಿಗೆ ಇಲಾಖೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದ್ದು,

ಕೇಂದ್ರ ಮಾಹಿತಿ ಆಯೋಗದ ಆದೇಶ ರದ್ದುಪಡಿಸಿದೆ.

ಕೌಟುಂಬಿಕ ಕಲಹ ಪ್ರಕರಣಗಳಲ್ಲಿ ಜೀವನಾಂಶ ಅಥವಾ ನಿರ್ವಹಣಾ ವೆಚ್ಚ ಕುರಿತ ನಿರ್ಧಾರ ತೆಗೆದುಕೊಳ್ಳುವ ಸಂದರ್ಭಗಳಲ್ಲಿ ಪಕ್ಷಗಾರರ ಆದಾಯದ ಕುರಿತ ದಾಖಲೆ ಗಳನ್ನು ಪರಿಶೀಲಿಸದೆ ಮೌಖಿಕ ಹೇಳಿಕೆಗಳನ್ನು ಪರಿಗಣಿಸಲಾಗುವುದಿಲ್ಲ. ಆದ್ದರಿಂದ, ವಿಚಾ ರಣಾ ನ್ಯಾಯಾಲಯಗಳು, ಪ್ರಕರಣದಲ್ಲಿ ಪರಿಣಾಮಕಾರಿ ಆದೇಶ ನೀಡಲು ಎರಡೂ ಪಕ್ಷಗಾರರ ಆರ್ಥಿಕ ಸ್ಥಿತಿಗತಿಯ ಮಾಹಿತಿ ಪಡೆಯಲು ಅವಕಾಶವಿರಲಿದೆ. ಈ ನಿಟ್ಟಿನಲ್ಲಿ ಆದಾಯ ತೆರಿಗೆ ಇಲಾಖೆ ಇಲ್ಲವೇ ಯಾವುದೇ ಇತರೆ ಪ್ರಾಧಿಕಾರದಿಂದ ಮಾಹಿತಿ ಕೋರ ಬಹುದಾಗಿದೆ. ಪತಿ-ಪತ್ನಿಯರ ಆದಾಯಕ್ಕೆ ಸಂಬಂಧಿಸಿ ವಿವಾದಗಳಿದ್ದಲ್ಲಿ ಆದಾಯ ತೆರಿಗೆ ಪಾವತಿ ಮತ್ತು ಹಣಕಾಸು ದಾಖಲೆಗಳು ಸೇರಿದಂತೆ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳಲು ಆದಾಯ ತೆರಿಗೆ ಇಲಾಖೆ, ಬ್ಯಾಂಕ್ ಸೇರಿದಂತೆ ಆರ್ಥಿಕ ವ್ಯವಹಾರಗಳ ಸಂಸ್ಥೆಗಳಿಗೆ ವಿಚಾ ರಣಾ ನ್ಯಾಯಾಲಯ ಸಮನ್ಸ್ ಜಾರಿ ಮಾಡುವ ಅಧಿಕಾರವನ್ನು ಸ್ವಯಂ ಪ್ರೇರಿತ ವಾಗಿ ಬಳಸಿಕೊಳ್ಳಬಹುದಾಗಿದೆ ಎಂದು ಪೀಠ ತಿಳಿಸಿದೆ. ಆದಾಯ ಇಲಾಖೆಯಿಂದ ಪಡೆದ ಮಾಹಿತಿಯನ್ನು ಜೀವನಾಂಶ/ನಿರ್ವಹಣಾ ವೆಚ್ಚ ಪಾವತಿ ವಿಷಯಕ್ಕೆ ಮಾತ್ರ ಬಳಸಿಕೊಳ್ಳಬೇಕು. → 4

ಹೈ ಮಾರ್ಗಸೂಚಿ

ಪತಿ ಅಥವಾ ಪತ್ನಿಯ ಹಣಕಾಸಿಗೆ ಸಂಬಂಧಿ ಸಿದ ಮಾಹಿತಿ ಮತ್ತು ದಾಖಲೆಗಳನ್ನು ಪಡೆಯಬೇಕಾದಲ್ಲಿ ಅವರ ಸಂಗಾತಿಗಳು ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸ ಬೇಕು. ಅರ್ಜಿಯ ಸಂಬಂಧ ಆದಾಯ ತೆರಿಗೆ ಪಾವತಿ ಮಾಡುವ ಮಾಹಿತಿ ಪಡೆದು ಕೊಳ್ಳುವ ಅಗತ್ಯದ ಕುರಿತು ನ್ಯಾಯಾಲಯ ಪರಿಶೀಲನೆ ನಡೆಸಬೇಕು. ಮಾಹಿತಿ ಪಡೆಯಬೇಕಾದ ಅಗತ್ಯವಿದ್ದಲ್ಲಿ ಮುಚ್ಚಿದ ಲಕೋಟೆಯಲ್ಲಿ ವಿವರ ಒದಗಿಸಲು ಆದೇಶ ನೀಡಬೇಕು. ಈ ಸಂಬಂಧ ಪ್ರತಿವಾದಿ (ಪತಿ/ಪತ್ನಿ)ಗೆ ನೋಟಿಸ್ ಜಾರಿ ಮಾಡಿ 14 ದಿನಗಳಲ್ಲಿ ವಿಚಾರಣೆ ಪೂರ್ಣಗೊಳಿಸ ಬೇಕು. ಆದಾಯ ತೆರಿಗೆ ಇಲಾಖೆ ನೇಮಿಸಿರುವ ನೋಡಲ್ ಅಧಿಕಾರಿಗಳ ಮೂಲಕ 21 ದಿನಗಳಲ್ಲಿ ನ್ಯಾಯಾಲಯದ ಆದೇಶಗಳನ್ನು ಪಾಲಿಸಬೇಕು. ಆದಾಯ ತೆರಿಗೆ ಇಲಾಖೆ ಮಾಹಿತಿ ಪಡೆದುಕೊಳ್ಳುವ ಸಂದರ್ಭದಲ್ಲಿ ಗೌಪ್ಯತೆ ಕಾಯ್ದುಕೊಂಡಿರಬೇಕು. ಗೌಪ್ಯತೆ ಕಾಪಾಡುವ ಸಂಬಂಧ ಉಭಯ ಪಕ್ಷಗಾರರಿಂದ ಪ್ರಮಾಣ ಪತ್ರ ಪಡೆದುಕೊಳ್ಳಬೇಕು ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸೆಮಿಫೈನಲ್‌ಗೇರಿದ ದ.ಆಫ್ರಿಕಾ

ಗುರುವಾರ ಸೂಪರ್-8ರ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಭರ್ಜರಿ 9 ವಿಕೆಟ್‌ಗಳ ಜಯ ಗಳಿಸಿದ ದ.ಆಫ್ರಿಕಾ ಟಿ20 ವಿಶ್ವಕಪ್ ಸೆಮಿಫೈನಲ್‌ಗೆ ಜಿಗಿಯಿತು. ಮಾ.1ರಂದು ಭಾರತ-ವಿಂಡೀಸ್ ನಡುವಿನ ಪಂದ್ಯದಲ್ಲಿ ಇನ್ನೊಂದು ತಂಡದ ನಿರ್ಧಾರವಾಗಲಿದೆ.

ಸಮಾಚಾರ ಸಣ್ಣದಲ್ಲ

ಕಾಡುಕೋಣಗಳಿಂದ ಕಾಫಿತೋಟ ನಾಶ

ಚಿಕ್ಕಮಗಳೂರು: ಎನ್.ಆರ್.ಪುರ ತಾಲೂಕು ಹಾಗೂ ಚಿಕ್ಕಮಗಳೂರು ತಾಲೂಕಿನ ಜನ ಕಾಡಾನೆಗಳ ದಾಳಿ ಹಾಗೂ ದಾಂಧಲೆಗೆ ತತ್ತರಿಸಿ ಹೋಗಿರುವ ಬೆನ್ನಲ್ಲೇ, ಈಗ 75ಕ್ಕೂ ಹೆಚ್ಚು ಕಾಡು ಕೋಣಗಳ ಹಿಂಡು ಕಾಫಿ ತೋಟಕ್ಕೆ ಲಗ್ಗೆ ಇಟ್ಟು ಬೆಳೆಯನ್ನು ಸಂಪೂರ್ಣವಾಗಿ ನಾಶ ಮಾಡುತ್ತಿವೆ. ಕೊಪ್ಪ ತಾಲೂಕಿನ ಬಸರಿಕಟ್ಟೆ ಗ್ರಾಮಕ್ಕೆ ಹೋಗುವ ರಸ್ತೆಯ ಕಾಫಿ ತೋಟದಲ್ಲಿ 75ಕ್ಕೂ ಹೆಚ್ಚು ಕಾಡು ಕೋಣಗಳ ಹಿಂಡು ಬೀಡುಬಿಟ್ಟಿದ್ದು, ಸ್ಥಳೀಯರು ಕಂಗಾಲಾಗಿದ್ದಾರೆ. ಕಾಫಿ ತೋಟದಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾಡು ಕೋಣಗಳು ಸಂಚರಿಸುತ್ತಿರುವ ದೃಶ್ಯ ಕಂಡು ಕಾರ್ಮಿಕರು ಕೆಲಸಕ್ಕೆ ತೆರಳಲು ಭಯ ಪಡುತ್ತಿದ್ದಾರೆ. ಸಾರ್ವಜನಿಕರು ಈ ರಸ್ತೆಯಲ್ಲಿ ಸಂಚಾರ ಮಾಡಲು ಜೀವ ಕೈಯಲ್ಲಿ ಹಿಡಿದು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ಕೊಪ್ಪ ತಾಲೂಕಿನ ಮುಂಡೋಳು ಗ್ರಾಮದಲ್ಲಿ 55 ವರ್ಷದ ರೈತ ಶಿವಪ್ಪ ಮೇಲೆ ಕಾಡುಕೋಣ ದಾಳಿ ನಡೆಸಿತ್ತು. ಗಂಭೀರವಾಗಿ ಗಾಯಗೊಂಡ ಶಿವಪ್ಪ ಅವರನ್ನು ಮಣಿಪಾಲ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ. ಕಾಡು ಕೋಣಗಳ ಹಿಂಡು ಗ್ರಾಮಾಂತರ ಪ್ರದೇಶಗಳಲ್ಲಿ, ಹಾಗೂ ಗ್ರಾಮಗಳಿಗೆ ತೆರಳುವ ಪ್ರಮುಖ ರಸ್ತೆಗಳಲ್ಲಿ ನಿರಂತರ ಸಂಚರಿಸುತ್ತಿದೆ. ಇದರಿಂದ ಕಾಫಿ ತೋಟದ ಕಾರ್ಮಿಕರು ಹಾಗೂ ಗ್ರಾಮಸ್ಥರು, ಯಾವ ಸಮಯದಲ್ಲಿ ಯಾರ ಮೇಲೆ ದಾಳಿ ಮಾಡುತ್ತವೋ ಎಂಬ ಜೀವ ಭಯದಲ್ಲೇ ಬದುಕುತ್ತಿದ್ದಾರೆ.

ಸುಲಲಿತ ವಾಣಿಜ್ಯ ಸಂಸ್ಕೃತಿಗೆ ರಾಜ್ಯ ಸರಕಾರ ಸಂಕಲ್ಪ | ಬಾಕಿ ಇರುವ 28 ಸೇವೆಗಳ ತ್ವರಿತ ಅನುಷ್ಠಾನಕ್ಕೆ ಸೂಚನೆ: ಎಂ.ಬಿ.ಪಾಟೀಲ

ರಾಜ್ಯದಲ್ಲಿ ಕೈಗಾರಿಕಾ ಸ್ನೇಹಿ ವಾತಾವರಣ ನಮ್ಮ ಗುರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಸುಲಲಿತ ವಾಣಿಜ್ಯ ಸಂಸ್ಕೃತಿಯನ್ನು ತರಲು ರಾಜ್ಯ ಸರಕಾರವು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದೆ. ಈ ನಿಟ್ಟಿನಲ್ಲಿ ಇನ್ನೂ ಬಾಕಿ ಇರುವ 28 ಸೇವೆಗಳನ್ನು ಸುಗಮಗೊಳಿಸಿ, ಕೈಗಾರಿಕಾ ಸ್ನೇಹಿಯಾಗಿ ಮಾಡಲಾಗುವುದು. ಇದರ ಭಾಗವಾಗಿ ಅಗತ್ಯ ತಿದ್ದುಪಡಿಗಳನ್ನು ತ್ವರಿತವಾಗಿ ಮಾಡಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ನಮಗೆ ನೆರೆಹೊರೆ ರಾಜ್ಯಗಳಿಂದ ತೀವ್ರ ಸ್ಪರ್ಧೆ ಇದೆ. ನಾವು ಅಲ್ಲಿಯ ನೀತಿ ನಿಯಮಾವಳಿಗಳನ್ನೂ ಅಧ್ಯಯನ ಮಾಡಿದ್ದು, ಅದಕ್ಕಿಂತ ಉತ್ತಮವಾದ ಮತ್ತು ಕೈಗಾರಿಕಾ ಸ್ನೇಹಿಯಾದ ವ್ಯವಸ್ಥೆಯನ್ನು ತರಲು ಪಣ ತೊಟ್ಟಿದ್ದೇವೆ. ಏಕಗವಾಕ್ಷಿ ಯೋಜನೆಯಡಿ ಇದುವರೆಗೆ 20 ಇಲಾಖೆಗಳ 115 ಸೇವೆಗಳನ್ನು ಜೋಡಣೆ ಮಾಡಿದ್ದು, ಬಾಕಿ ಇರುವ 28 ಸೇವೆಗಳನ್ನು ಆದ್ಯತಾ ಕ್ಷೇತ್ರಗಳೆಂದು ಪರಿಗಣಿಸಿ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ. ಇದರಲ್ಲಿ ಕಂದಾಯ, ಅರಣ್ಯ, ಗೃಹ, ಪರಿಸರ, ಪ್ರಾಥಮಿಕ ಶಿಕ್ಷಣ, ಅಗ್ನಿಶಾಮಕ ದಳ, ಇಂಧನ ಮುಂತಾದವನ್ನು ಗುರುತಿಸಲಾಗಿದೆ.

ಸಚಿವ ಎಂ.ಬಿ.ಪಾಟೀಲ್ ಗುರುವಾರ ವಿಧಾನಸೌಧದಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿದರು.

ಒಟ್ಟಿನಲ್ಲಿ ಹೂಡಿಕೆದಾರರಿಗೆ ಸಮಯ ವ್ಯರ್ಥವಾಗದಂತೆ, ಅವರನ್ನು ರಾಜ್ಯಕ್ಕೆ ಸೆಳೆಯುವ ಗುರಿ ಇಟ್ಟುಕೊಳ್ಳಲಾಗಿದೆ. ಇದಕ್ಕೆ ಎಲ್ಲ ಇಲಾಖೆಗಳ ಸಹಕಾರ ಮುಖ್ಯ ಎಂದು ಹೇಳಿದರು.

ಐಟಿ ಕ್ಷೇತ್ರದಲ್ಲಿ ನಾವು ಮುಂಚೂಣಿಯಲ್ಲಿದ್ದೆವು. ಈಗ ಎಐ ಬಂದಿರುವುದರಿಂದ ಇದರ ಭವಿಷ್ಯ ಏನಾಗುತ್ತದೆ ಎನ್ನುವುದು ಗೊತ್ತಿಲ್ಲ. ಆದ್ದರಿಂದ ಕೆಐಎಡಿಬಿ ಸೇರಿದಂತೆ ಎಲ್ಲ ಇಲಾಖೆಗಳಲ್ಲೂ ಕೈಗಾರಿಕಾ ಯೋಜನೆಗಳಿಗೆ ತ್ವರಿತ ಅನುಮೋದನೆ ದೊರೆಯುವಂತೆ ನೋಡಿಕೊಳ್ಳಬೇಕಾಗಿದೆ. ವಿದ್ಯುತ್ ಸಂಪರ್ಕ, ಅಗ್ನಿಶಾಮಕ ಇಲಾಖೆ ಅನುಮತಿ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ ಅನುಮತಿಗಳು ತ್ವರಿತವಾಗಿ ಸಿಗುವಂತೆ ಮಾಡಬೇಕು. ಈ ವಿಷಯದಲ್ಲಿ ಉದ್ಯಮಿಗಳಿಗೆ ಸತಾಯಿಸುವುದನ್ನು ತಪ್ಪಿಸಬೇಕು ಎಂದು ಅವರು ಸೂಚಿಸಿದರು.

ಅನುಮತಿ ಸಮಯ ಕಡಿತ: ಗೃಹ ಇಲಾಖೆಯಲ್ಲಿ ಬರುವ ಅಗ್ನಿಶಾಮಕ ದಳದಿಂದ ಎನ್‌ಒಸಿ ಕೊಡಲು ಇದುವರೆಗೂ 60 ದಿನಗಳ ಅವಕಾಶವಿತ್ತು. ಇದನ್ನು ಈಗ 21 ದಿನಕ್ಕೆ ಇಳಿಸಲಾಗಿದೆ. ವಿದ್ಯುತ್ ಸೌಲಭ್ಯಕ್ಕೆ ಬೇಕಾದ ಅನುಮತಿಗೆ ಕಾಲಾವಕಾಶವನ್ನು 25 ದಿನದಿಂದ 10 ದಿನಕ್ಕೆ, ಲಿಫ್ಟ್ ಬಳಕೆಗೆ ಬೇಕಾದ ಅನುಮತಿಗೆ 40 ದಿನದಿಂದ 20 ದಿನಕ್ಕೆ, ಹೊಸನಲ್ಲಿ ಸಂಪರ್ಕಕ್ಕೆ 42 ದಿನದಿಂದ 30 ದಿನಕ್ಕೆ ಇಳಿಸಲು ತೀರ್ಮಾನಿಸಲಾಗಿದೆ. ಕಾರ್ಮಿಕ ಇಲಾಖೆಯು ಕೈಗಾರಿಕಾ ಯೋಜನೆ ಮತ್ತು ಲೈಸೆನ್ಸ್, ಬಾಯ್ಲರ್ ನೋಂದಣಿಗಳನ್ನು ಇನ್ನು ಮುಂದೆ 30 ದಿನಗಳ ಬದಲು 14 ದಿನಗಳಲ್ಲಿ ಕೊಡಲಿದೆ. ಈ ಸಂಬಂಧದ ತಿದ್ದುಪಡಿಗಳಿಗೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಇವು ಸದ್ಯದಲ್ಲೇ ಸಂಪುಟ ಸಭೆಯ ಮುಂದೆ ಚರ್ಚೆಗೆ ಬರಲಿದ್ದು, ಕ್ಷಿಪ್ರಗತಿಯಲ್ಲಿ ಕಾನೂನಿನ ರೂಪ ನೀಡಲಾಗುವುದು ಎಂದು ಅವರು ವಿವರಿಸಿದ್ದಾರೆ.

ಸಭೆಯಲ್ಲಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಜೋಳನ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಕಂದಾಯ ಆಯುಕ್ತರಾದ ಮೀನಾ ನಾಗರಾಜ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಶಿವಶಂಕರ ಸೇರಿದಂತೆ ಬಹುತೇಕ ಎಲ್ಲ ಇಲಾಖೆಗಳ ಕಾರ್ಯದರ್ಶಿಗಳು, ಹಿರಿಯ ಅಧಿಕಾರಿಗಳು ಹಾಜರಿದ್ದರು.

ಯಾವ ಅನುಮತಿಗೆ ಎಷ್ಟು ದಿನ?

ಯಾವ ಸೇವೆ	ಮೊದಲು	ಪ್ರಸ್ತುತ
ಅಗ್ನಿಶಾಮಕ ಎನ್‌ಒಸಿ	60 ದಿನ	21 ದಿನ
ವಿದ್ಯುತ್ ಸಂಪರ್ಕ	25 ದಿನ	10 ದಿನ
ಲಿಫ್ಟ್ ಬಳಕೆ	40 ದಿನ	20 ದಿನ
ಬಾಯ್ಲರ್ ನೋಂದಣಿ	30 ದಿನ	14 ದಿನ

ಡೇಟಾ ಸೆಂಟರ್‌ಗೆ ಪೂರಕ ವಿದ್ಯುತ್

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಕೂಡ ವಿವಿಧ ರೀತಿಯ ಅನುಮತಿಗಳಿಗೆ ಇದುವರೆಗೆ ಇದ್ದ ಕಾಲಾವಧಿಯನ್ನುಅ ಗಣನೀಯವಾಗಿ ಕಡಿತಗೊಳಿಸಲಾಗಿದೆ. ಹಾಗೆಯೇ ಭೂ ಬಳಕೆ ಉದ್ದೇಶ ಪರಿವರ್ತನೆಗೆ ಅನುಮತಿ ನೀಡಲು ಬೆಂಗಳೂರಿನ ಪರಿಮಿತಿಯಲ್ಲಿ ಈವರೆಗೆ 120 ದಿನಗಳ ಕಾಲಾವಕಾಶವಿತ್ತು. ಇನ್ನು ಮುಂದೆ ಇದು 45 ದಿನಗಳಲ್ಲಿ ಆಗಲಿದೆ. ರಾಜ್ಯದ ವಿವಿಧ ಕಡೆ ಒಟ್ಟು 32 ಡೇಟಾ ಸೆಂಟರುಗಳಿವೆ. ಇವುಗಳಿಗೆ ಅಡೆತಡೆ ಇಲ್ಲದೆ ವಿದ್ಯುತ್ ಪೂರೈಕೆ ನಿರ್ಣಾಯಕವಾಗಿದೆ. ಆದ್ದರಿಂದ ಡೇಟಾ ಸೆಂಟರ್ ಕ್ಲಸ್ಟರ್ ಅಭಿವೃದ್ಧಿ ಪಡಿಸಿ, ಇವುಗಳಿಗೆ ಪ್ರತ್ಯೇಕ ಲೈನ್ ಮೂಲಕ ವಿದ್ಯುತ್ ಒದಗಿಸುವ ಅಗತ್ಯವಿದೆ ಎಂದು ಸಚಿವ ಎಂ.ಬಿ.ಪಾಟೀಲ್ ಅಭಿಪ್ರಾಯಪಟ್ಟರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಬೊಕ್ಕಸ ಖಾಲಿಯಾಗಿ ರಾಜ್ಯದ ಅಭಿವೃದ್ಧಿ ಕುಂಠಿತ: ಎಚ್.ಡಿ.ಕುಮಾರಸ್ವಾಮಿ ಆರೋಪ

ಗ್ಯಾರಂಟಿ ಸರಿದೂಗಿಸಲು ಸರಕಾರದಲ್ಲಿ ಹಣವಿಲ್ಲ

ಚಾಮರಾಜನಗರ: ಗ್ಯಾರಂಟಿಗಳಿಗೆ ಹಣ ಸರಿದೂಗಿಸಲು ಕಾಂಗ್ರೆಸ್ ಸರಕಾರ ಪರದಾಡುತ್ತಿದ್ದು, ಇದರಿಂದ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಗುಂಡ್ಲುಪೇಟೆ ತಾಲೂಕಿನ ಕಡಬೂರು ಗ್ರಾಮದಲ್ಲಿ ಶಿವ, ಗಣಪತಿ ದೇವಸ್ಥಾನ ಉದ್ಘಾಟಿಸಿ, ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಸುಳ್ಳು ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದಿದೆ. ಇದೀಗ ಗ್ಯಾರಂಟಿಯಿಂದ ಹೊರೆಯಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಸರಿಯಲ್ಲ ಎಂದು ಕಿಡಿಕಾರಿದರು.

ಖಾಲಿ ಇರುವ ಹುದ್ದೆಗಳನ್ನ ಭರ್ತಿ ಮಾಡುವಲ್ಲಿ ರಾಜ್ಯ ಸರಕಾರ ಸಂಪೂರ್ಣ ವಿಫಲವಾಗಿದೆ. ರಾಜ್ಯದಲ್ಲಿ 2 ಲಕ್ಷಕ್ಕಿಂತ ಹೆಚ್ಚು ಸರಕಾರಿ ಉದ್ಯೋಗಗಳು ಖಾಲಿಯಿದ್ದು, ಅವುಗಳನ್ನು ಭರ್ತಿ ಮಾಡವಲ್ಲಿ ಸರಕಾರ ಎಡವಿದೆ. ಇದರಿಂದಲೇ ಉದ್ಯೋಗ ಆಕಾಂಕ್ಷಿಗಳು ಸರಕಾರದ ವಿರುದ್ಧ ತಿರುಗಿ ಬಿದ್ದು ಧಾರವಾಡದಲ್ಲಿ ದೊಡ್ಡ ಪ್ರತಿಭಟನೆ ನಡೆಸಿದೆ. ಖಾಲಿ ಹುದ್ದೆ ಭರ್ತಿ ಮಾಡುವ ಸಂಬಂಧ ಮುಖ್ಯಮಂತ್ರಿಗಳು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡುವುದಾಗಿ ಹೇಳಿದ್ದಾರೆ ಏನು ತೀರ್ಮಾನವಾ ಗುತ್ತದೆ ಎಂದು ಕಾದು ನೋಡಬೇಕು ಎಂದರು.

ಗುಂಡ್ಲುಪೇಟೆ ತಾಲೂಕಿನ ಕಡಬೂರು ಗ್ರಾಮದಲ್ಲಿ ಶಿವ, ಗಣಪತಿ ದೇವಸ್ಥಾನವನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

ರಾಜ್ಯಾದ್ಯಂತ ಸರಕಾರಿ ಆಸ್ಪತ್ರೆಗಳಲ್ಲಿ 40 ಪರ್ಸೆಂಟ್ ಮೆಡಿಸನ್ ಹಾಗೂ ಎಂಆರ್‌ಐ ಸಿಟಿ ಸ್ಕ್ಯಾನ್ ಸ್ಥಗಿತವಾಗಿದೆ. ಸರಕಾರದ ಬೊಕ್ಕಸ ಖಾಲಿ ಆಗಿದೆ. ದುರಾಡಳಿತ ಹೆಚ್ಚಾಗಿದೆ ಎಂದರು.

> ಬಿಜೆಪಿ ಸರಕಾರದ ಆಡಳಿತದಲ್ಲಿ ಬಿಜೆಪಿ ಸರಕಾರದ ವಿರುದ್ಧ 40% ಕಮಿಷನ್ ಪಡೆಯುತ್ತಾರೆ ಎಂದು ಅಪಪ್ರಚಾರ ನಡೆಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ತಲುಪಿದ್ದಾರೆ.
>
> -ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ನಿಖಿಲ್ ಕುಮಾರಸ್ವಾಮಿ ಮತ್ತೆ ರಾಮನಗರಕ್ಕೆ ರೀ ಎಂಟ್ರಿ ಕುರಿತು ಪ್ರತಿಕ್ರಿಯಿಸಿ, ಕಾಲ ಬಂದಾಗ ಎಲ್ಲ ಉತ್ತರ ಸಿಗಲಿದೆ ಕಾದು ನೋಡಿ ಎಂದು ಹೇಳಿದರು.

ಈ ವೇಳೆ ಶಾಸಕ ಎಚ್.ಎಂ.ಗಣೇಶಪ್ರಸಾದ್, ಹನೂರು ಶಾಸಕ ಮಂಜುನಾಥ್, ಮಾಜಿ ಶಾಸಕ ಬಾಲರಾಜು, ಡಾ.ಕೆ.ಅನ್ನದಾನಿ, ಜೆಡಿಎಸ್ ಮುಖಂಡ ಕಡಬೂರು ಮಂಜುನಾಥ್, ಪುಟ್ಟಸ್ವಾಮಿ ಸೇರಿದಂತೆ ಇತರರು ಹಾಜರಿದ್ದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ
Ph.08472 - 220196 e-mail: midnglb@rediffmail.com/midnglb1@gmail.com
ಐಎಫ್‌ಟಿ.ನಂ.ಕಾನಿಅ/ಸನೀಅಅವಿ/ಕ/ಯೋಶಾ–3/2025–26/5425 ದಿನಾಂಕ : 25.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1,2,3&4)

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 4702–ಆಣೆಕಟ್ಟು, ಪಿಕಪ್, ಬಂದಾರಾ ಪ್ರಧಾನ ಕಾಮಗಾರಿಗಳು, ಮುಖ್ಯ ಮಂತ್ರಿಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ, 4702–ಕೆರೆಗಳ ಆಧುನೀಕರ ಯೋಜನೆ, ವಿಶೇಷ ಘಟಕ ಹಾಗೂ ಗಿರಿಜನ ಉಪ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಗರಿಷ್ಠ ರೂ. 201,54,016.31 ಕನಿಷ್ಠ ರೂ. 3,35,662.95,** 3) ಗುತ್ತಿಗೆದಾರರ ಅರ್ಹತೆ ವಿವರ : 4ನೇ ದರ್ಜೆ ಮೇಲ್ಪಟ್ಟು (ಬಿಡ್‌ನಲ್ಲಿ ಇರುವಂತೆ) 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಕೆ.ಪಿ.ಪಿ. ಪೋರ್ಟಲ್‌ನಂತೆ ಇ.ಎಂ.ಡಿ. **ಮೊತ್ತ ಗರಿಷ್ಠ ರೂ. 3,03,000.00 ಕನಿಷ್ಠ ರೂ. 8,400.00,** 5) ಪ್ರಿ–ಬಿಡ್ ಮೀಟಿಂಗ್ ದಿನಾಂಕ : **10.03.2026 ಸಮಯ 11.00 ರ ವರೆಗೆ,** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : **11.03.2026 ಸಮಯ 11.00 ರ ವರೆಗೆ** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **12.03.2026 ಸಮಯ 17.30ರ** ವರೆಗೆ 8) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ : **13.03.2026 ಸಮಯ 17.30ರ** ವರೆಗೆ, 9) ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ : **16.03.2026 ಸಮಯ 17.30ರ** ವರೆಗೆ, 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ : www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಕಲಬುರಗಿ
ವಾ.ಸಾ.ಸಂ.ಇ.ಕಲಬುರಗಿ/1121/ದೇಶಪಾಂಡೆ ಪಬ್ಲಿಸಿಟಿ/2025–26

ಡಿಸಿ ಕಚೇರಿ ಮುಂದೆ ಹಿಂದೂ ಸಂಘಟನೆಗಳ ಸದಸ್ಯರಿಂದ ಪ್ರತಿಭಟನೆ

ಬಾಗಲಕೋಟೆ ಕಲ್ಲು ತೂರಾಟ: ಬಂಧನಕ್ಕೆ ಆಗ್ರಹ

ಬಾಗಲಕೋಟೆ: ಶಿವಾಜಿ ಜಯಂತಿ ಮೆರವಣಿಗೆ ವೇಳೆ ಕಲ್ಲು ತೂರಾಟಕ್ಕೆ ಸಹಾಯ ಮಾಡಿದವರನ್ನು ಬಂಧಿಸುವಂತೆ ಆಗ್ರಹಿಸಿ ಗುರುವಾರ ಬಾಗಲಕೋಟೆಯಲ್ಲಿ ಹಿಂದೂ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಮಹಿಳೆಯರು ಭಾಗಿಯಾಗಿ ಪಂಕಾ ಮಸೀದಿ ಆಡಳಿತ ಮಂಡಳಿಯ ಸದಸ್ಯರನ್ನು ಬಂಧಿಸುವಂತೆ ಒತ್ತಾಯಿಸಿದರು. ಪಂಕಾ ಮಸೀದಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು. ಪ್ರತಿಭಟನೆಗೆ ಹಳೆ ಬಾಗಲಕೋಟೆಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿತ್ತು. ವ್ಯಾಪಾರಸ್ಥರು ಸ್ವಯಂ ಪ್ರೇರಿತವಾಗಿ ಅಂಗಡಿ ಮುಂಗಟ್ಟುಗಳು ಬಂದ್ ಮಾಡಿ ಸಾಥ್ ಕೊಟ್ಟಿದ್ದರು.

ಪ್ರತಿಭಟನೆಯಲ್ಲಿ ವಿಪಕ್ಷ ಉಪನಾಯಕ ಅರವಿಂದ ಬೆಲ್ಲದ್, ಬಾಗಲಕೋಟೆ ಸಂಸದ ಪಿಸಿ ಗದ್ದಿಗೌಡರ, ಹಂಸನೂರು ಮಠದ ಬಸವಾನಂದ ಸ್ವಾಮೀಜಿ ಭಾಗಿಯಾಗಿದ್ದರು. ರಾಜ್ಯ ಸರಕಾರ ಹಾಗೂ ಜಿಲ್ಲಾಡಳಿತ ಪೊಲೀಸ್ ಇಲಾಖೆ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದರು.

ಶಿವಾಜಿ ಜಯಂತಿ ವೇಳೆ ಕಲ್ಲು ತೂರಲು ಪ್ರಚೋದನೆ ನೀಡಿದವರ ಬಂಧನಕ್ಕೆ ಆಗ್ರಹಿಸಿ ಬಾಗಲಕೋಟೆ ಡಿಸಿ ಕಚೇರಿ ಎದುರು ಹಿಂದೂ ಸಂಘಟನೆ ಪ್ರತಿಭಟನೆ ನಡೆಸಿತು.

ಜಿಲ್ಲಾಡಳಿತಕ್ಕೆ 15 ದಿನಗಳ ಗಡುವು

ಜಿಲ್ಲಾಡಳಿತಕ್ಕೆ 15 ದಿನಗಳ ಗಡುವು ನೀಡಿದ ಹಿಂದೂ ಹಿತರಕ್ಷಣಾ ಸಮಿತಿ ಮಸೀದಿ ಆಡಳಿತ ಮಂಡಳಿಯ ಸದಸ್ಯರನ್ನು ಬಂಧಿಸಬೇಕು ಎಂದು ಆಗ್ರಹಿಸಿದೆ. ಮಸೀದಿಯನ್ನ ಶೀಲ್ಡೌನ್ ಮಾಡಬೇಕು. ತಪ್ಪಿತಸ್ಥರ ವಿರುದ್ಧ ಗೂಂಡಾ ಕಾಯ್ದೆ ಜಾರಿಮಾಡಬೇಕು. ನವನಗರದಲ್ಲಿ ಅಕ್ರಮವಾಗಿ ತಲೆಯೆತ್ತಿರುವ ಮಸೀದಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಅವರಿಗೆ ಮನವಿ ಸಲ್ಲಿಸಿದೆ. 15 ದಿನಗಳ ಒಳಗಡೆ ಈ ಬೇಡಿಕೆ ಈಡೇರದಿದ್ದರೆ ಎರಡನೇ ಹಂತದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ,
ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ,
ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080–26716046 ವೆಬ್‌ಸೈಟ್: http://kppp.karnataka.gov.in
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/42/2025–26 ದಿನಾಂಕ: 25.02.2026

ಕೆ.ಪಿ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA Grants ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಏಕ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ:13.03.2026 ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತದೆ. ಕಾಮಗಾರಿದಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.
DIPR/CP/5893/SHIRDI SAI/2025-26

ಕರ್ನಾಟಕ ಗೃಹ ಮಂಡಳಿ
Karnataka Housing Board
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: KHB/2025-26/SE0351 Dated: 21.02.2026
ಸೂರ್ಯನಗರ 4ನೇ ಹಂತದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸೂರ್ಯನಗರ 4ನೇ ಹಂತ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾ ಸಂಕೀರ್ಣ ನಿರ್ಮಾಣಕ್ಕಾಗಿ ರಚನಾತ್ಮಕ ಸಲಹೆಗಾರರ (Structural Consultant) ನೇಮಕಾತಿಗಾಗಿ KPP ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ.
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 07.03.2026 ಸಂಜೆ 4.00 ಗಂಟೆಯವರೆಗೆ.
ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ./5879/ಆಕಾರ್/2025–26

ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurucity.mrc.gov.in
ಇಮೇಲ್: ka.tumkuru.cc@gmail.com,
ಕಚೇರಿದೂರವಾಣಿ : 2272200, ಸಹಾಯವಾಣಿ : 9449872599
ಸಂಖ್ಯೆ:ತುಮಪಾ/ಆಶಾ/ಸಿಆರ್–08/2025–26 ದಿನಾಂಕ:23–02–2026

ಟೆಂಡರ್/ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್2000ರ ನಿಯಮದಂತೆ ಈ ಕೆಳಕಂಡ ವಿವಿಧ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಮಾಹಿತಿಯನ್ನು kppp.gov.inನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
1.	ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತಿಯಾಗುವ ಬಯೋಮೆಡಿಕಲ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಕಾಮಗಾರಿ	58.36
2.	ತುಮಕೂರು ಮಹಾನಗರ ಪಾಲಿಕೆ ಮಾಲಿಕತ್ವದ 3ಟಿಪಿಡಿ ಸಾಮಾರ್ಥ್ಯದ ಬಯೋಮಿಥನೇಷನ್ ಘಟಕವನ್ನು ಪಿಪಿಪಿ ಮಾದರಿಯಲ್ಲಿ ದುರಸ್ಥಿಪಡಿಸಿ ನಿರ್ವಹಿಸುವ ಕುರಿತು ಪ್ರಸ್ತಾವನೆ ಸಲ್ಲಿಸಲು	–
3.	ತುಮಕೂರು ಮಹಾನಗರ ಪಾಲಿಕೆ ಮಾಲಿಕತ್ವದ ನಾಯಿಗಳ ಸಂರಕ್ಷಣ ಕೇಂದ್ರವನ್ನು ಪಿಪಿಪಿ ಮಾದರಿಯಲ್ಲಿ ನಿರ್ವಹಿಸಲು ಪ್ರಸ್ತಾವನೆ ಸಲ್ಲಿಸಲು	

ಅಲ್ಪಾವಧಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ
1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ:24.02.2026**
2. ಟೆಂಡರ್ ಸಲ್ಲಿಸುವ ಕೊನೆ **ದಿನಾಂಕ: 3–3–2026 ಸಾಯಂಕಾಲ 4.30 ಗಂಟೆವರೆಗೆ.**
3. ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 4–3–2026 ಸಾಯಂಕಾಲ 4.45 ಗಂಟೆಗೆ**

ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರಪಾಲಿಕೆ
ತುಮಕೂರು.
DIPR/TUM/RO-285/25-26/Oysters

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇ–ಪ್ರೋ/2025–26 ದಿನಾಂಕ:25.02.2026

ಕೆ.ಪಿ.ಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಸನ್ 2025–26 ನೇ ಸಾಲಿನ ಮಹಾನಗರ ಪಾಲಿಕೆ ಅನುದಾನದಲ್ಲಿನ 04 ಸಿವ್ಹಿಲ್ ಕಾಮಗಾರಿಗಳು ಮತ್ತು 02 ಸೇವೆಯ ಕಾಮಗಾರಿಗಳು ಟೆಂಡರ್ ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಕೆ.ಪಿ.ಪಿ ಪೋರ್ಟಲ್ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.
ಸೂಚನೆ: 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.inಪೋರ್ಟಲ್‌ನಲ್ಲಿ ಮಾತ್ರ ನಮೂದಿಸಲಾಗುವುದು.
2) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 11.03.2026**

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/757/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ,
ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ,
ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080–26716046 ವೆಬ್‌ಸೈಟ್: http://kppp.karnataka.gov.in
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಜೆಇ–1/ಟೆಂಡರ್/41/2025–26 ದಿನಾಂಕ: 25.02.2026

ಕೆ.ಪಿ.ಪಿ.ಪಿ. ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ನೋಟೀಸ್ (ಏಕ–ಲಕೋಟೆ)

ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Agriculture 2435-00-101-0-33/17/2025-26 & Deposit Grants ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಏಕಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **05.03.2026** ರ **ಸಂಜೆ 4.00** ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.
ವಾಸಾಸಂಇ/ವಾಪ್ರ/5891/ಎಸ್‌ಎಸ್‌ಸಿ/2025–26

ಐಟಿ ಪಾವತಿ ವಿವರ ಗೌಪ್ಯತೆಯ ವಿಷಯ

← ಮೊದಲ ಪುಟದಿಂದ

ಆದಾಯ ತೆರಿಗೆ ಇಲಾಖೆ ಮುಚ್ಚಿದ ಲಕೋಟೆಯನ್ನು ಪತಿ–ಪತ್ನಿಯರ ಸಮ್ಮುಖ ದಲ್ಲಿ ತೆಗೆದು ಪರಿಶೀಲನೆ ಮಾಡಬೇಕು. ಮೂರನೇ ವ್ಯಕ್ತಿಗೆ ಗೊತ್ತಾಗದಂತೆ ನಿರ್ವಹಣೆ ಮಾಡಬೇಕು. ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಬಾರದು ಎಂದು ಷರತ್ತು ಒದಗಿಸಬೇಕು. ನ್ಯಾಯಾಲಯ ಎಲ್ಲ ದಾಖಲೆಗಳನ್ನು ಪಕ್ಷಗಾರರಿಗೆ ನೀಡುವುದಕ್ಕೆ ನಿರಾಕರಿಸಬಹುದು. ಆದರೆ, ಪರಿಶೀಲನೆ ಮತ್ತು ಅದಕ್ಕೆ ಸಂಬಂಧಿಸಿದ ಟಿಪ್ಪಣಿಗಳನ್ನು ಮಾತ್ರ ಒದಗಿಸಬಹುದಾಗಿದೆ. ನಿರ್ವಹಣಾ ವೆಚ್ಚ ಪಾವತಿಯನ್ನು ಹೊರತುಪಡಿಸಿ ಅನ್ಯ ಉದ್ದೇಶಗಳಿಗೆ ಬಳಸಿ ಮಾಹಿತಿ ದುರುಪಯೋಗ ಪಡಿಸಿಕೊಳ್ಳುವುದನ್ನು ಕಾನೂನು ಪ್ರಕ್ರಿಯೆಯ ದುರುಪಯೋಗ ಎಂದು ಪರಿಗಣಿಸಬೇಕು. ಈ ಮಾರ್ಗಸೂಚಿಗಳು ಲಿಂಗ ತಟಸ್ಥವಾಗಿದ್ದು, ಗಂಡನ ಮಾಹಿತಿ ಕೋರಿ ಪತ್ನಿ ಸಲ್ಲಿಸುವ ಮತ್ತು ಪತ್ನಿ ಮಾಹಿತಿ ಕೋರಿ ಪತಿ ಸಲ್ಲಿಸುವ ಅರ್ಜಿಗಳಿಗೆ ಸಮಾನವಾಗಿ ಅನ್ವಯಿಸಲಿದೆ ಎಂದು ಹೈಕೋರ್ಟ್ ತನ್ನ ಮಾರ್ಗಸೂಚಿ ನಿರ್ದೇಶನದಲ್ಲಿ ತಿಳಿಸಿದೆ.

ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಬಾರದು ಎಂದು ಷರತ್ತು ಒದಗಿಸಬೇಕು. ನ್ಯಾಯಾಲಯ ಎಲ್ಲ ದಾಖಲೆಗಳನ್ನು ಪಕ್ಷಗಾರರಿಗೆ ನೀಡುವುದಕ್ಕೆ ನಿರಾಕರಿಸಬಹುದು. ಆದರೆ, ಪರಿಶೀಲನೆ ಮತ್ತು ಅದಕ್ಕೆ ಸಂಬಂಧಿಸಿದ ಟಿಪ್ಪಣಿಗಳನ್ನು ಮಾತ್ರ ಒದಗಿಸಬಹುದಾಗಿದೆ. ನಿರ್ವಹಣಾ ವೆಚ್ಚ ಪಾವತಿಯನ್ನು ಹೊರತುಪಡಿಸಿ ಅನ್ಯ ಉದ್ದೇಶಗಳಿಗೆ ಬಳಸಿ ಮಾಹಿತಿ ದುರುಪಯೋಗ ಪಡಿಸಿಕೊಳ್ಳುವುದನ್ನು ಕಾನೂನು ಪ್ರಕ್ರಿಯೆಯ ದುರುಪಯೋಗ ಎಂದು ಪರಿಗಣಿಸಬೇಕು. ಈ ಮಾರ್ಗಸೂಚಿಗಳು ಲಿಂಗ ತಟಸ್ಥವಾಗಿದ್ದು, ಗಂಡನ ಮಾಹಿತಿ ಕೋರಿ ಪತ್ನಿ ಸಲ್ಲಿಸುವ ಮತ್ತು ಪತ್ನಿ ಮಾಹಿತಿ ಕೋರಿ ಪತಿ ಸಲ್ಲಿಸುವ ಅರ್ಜಿಗಳಿಗೆ ಸಮಾನವಾಗಿ ಅನ್ವಯಿಸಲಿದೆ ಎಂದು ಹೈಕೋರ್ಟ್ ತನ್ನ ಮಾರ್ಗಸೂಚಿ ನಿರ್ದೇಶನದಲ್ಲಿ ತಿಳಿಸಿದೆ.

ಪಾಸ್‌ಪೋರ್ಟ್: ಮನೆಗೆ ತೆರಳಿ ವಾಸ್ತವ್ಯ ಪರಿಶೀಲನೆ ಕಡ್ಡಾಯ

← ಮೊದಲ ಪುಟದಿಂದ

ಪೊಲೀಸರು ಪರಿಶೀಲನೆಗಾಗಿ ಮನೆಗೆ ಭೇಟಿ ನೀಡುವ ಕನಿಷ್ಠ 24 ಗಂಟೆಗಳ ಮೊದಲು ಅರ್ಜಿದಾರರಿಗೆ ಎಸ್‌ಎಂಎಸ್ ಅಥವಾ ಫೋನ್ ಕರೆ ಮೂಲಕ ಮುಂಚಿತವಾಗಿ ಕಡ್ಡಾಯವಾಗಿ ಮಾಹಿತಿ ನೀಡಬೇಕು. ಪರಿಶೀಲನಾ ಪ್ರಕ್ರಿಯೆ ಆರಂಭದಿಂದ ಹಿಡಿದು ಅದು ಪೂರ್ಣಗೊಳ್ಳುವವರೆಗೂ ಸಿಬ್ಬಂದಿ ಕಡ್ಡಾಯವಾಗಿ ತಮ್ಮ ಸಮವಸ್ತ್ರದ ಮೇಲೆ 'ಬಾಡಿ ವಾರ್ನ್ ಕ್ಯಾಮೆರಾ'ವನ್ನು ಆನ್ ಮಾಡಿರಬೇಕು. ಇಡೀ ಪ್ರಕ್ರಿಯೆ ಪಾರದರ್ಶಕವಾಗಿ ರೆಕಾರ್ಡ್ ಆಗಬೇಕು ಎಂದು ಸೂಚಿಸಿದ್ದಾರೆ.

ಸಾಕ್ಷ್ಯಾಧಾರಗಳಿಲ್ಲದೆ ವ್ಯತಿರಿಕ್ತ ವರದಿಗಳನ್ನು ಸಲ್ಲಿಸುವುದನ್ನು ನಿಷೇಧಿಸಲಾಗಿದೆ. ಲಂಚದ ಬೇಡಿಕೆ, ಅನಗತ್ಯ ವಿಳಂಬ, ಕಿರುಕುಳ ಅಥವಾ ದುರುದ್ದೇಶಪೂರ್ವಕ ವರ್ತನೆ ನಡೆಸಿದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಲಾಗಿದೆ. ಅರ್ಜಿದಾರರಿಗೆ ಅನನುಕೂಲ ಉಂಟು ಮಾಡುವ ಯಾವುದೇ ಕ್ರಮಕ್ಕೂ ಅವಕಾಶ ಇರಬಾರದು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ. ವಿಭಾಗೀಯ ಉಪ ಪೊಲೀಸ್ ಆಯುಕ್ತರು ಮಾರ್ಗಸೂಚಿಗಳ ಪಾಲನೆಯನ್ನು ವೈಯಕ್ತಿಕವಾಗಿ ಮೇಲ್ವಿಚಾರಣೆ ನಡೆಸಿ ಮುಖ್ಯ ಕಚೇರಿಗೆ ಸಾಪ್ತಾಹಿಕ ವರದಿ ಸಲ್ಲಿಸಬೇಕು. ಸೂಚಿಸಿದ ನಿಯಮಗಳಲ್ಲಿ ಯಾವುದೇ ವಿನಾಯಿತಿ ಅಗತ್ಯವಿದ್ದರೆ ಮುಂಚಿತವಾಗಿ ಅನುಮೋದನೆ ಪಡೆಯಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸೈಬರ್ ವಂಚನೆ: 6 ರಾಜ್ಯದಲ್ಲಿ ಸಿಬಿಐ ದಾಳಿ

← ಮೊದಲ ಪುಟದಿಂದ

ಈ ಕಾರ್ಯಾಚರಣೆಯು ಸೈಬರ್ ವಂಚನೆಗೆ ಪೂರಕವಾಗಿರುವ 'ಮ್ಯೂಲ್' ಬ್ಯಾಂಕ್ ಖಾತೆಗಳ ಜಾಲ ಮತ್ತು ಅಕ್ರಮವಾಗಿ ಪಡೆದ ಸಿಮ್ ಕಾರ್ಡ್‌ಗಳ ಮೂಲವನ್ನು ಗುರಿಯಾಗಿಸಿಕೊಂಡಿತ್ತು. ದಾಳಿಯ ವೇಳೆ ಹಲವಾರು ಡಿಜಿಟಲ್ ಸಾಧನಗಳು, ಡೆಬಿಟ್ ಕಾರ್ಡ್‌ಗಳು ಮತ್ತು ಬ್ಯಾಂಕ್ ಖಾತೆಗಳ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತ ಮೂವರು ಆರೋಪಿಗಳು ವಂಚನೆ ಜಾಲದ ಬೇರೆ ಬೇರೆ ವಿಭಾಗಗಳನ್ನು ನಿರ್ವಹಿಸುತ್ತಿದ್ದರು. ಗೋವಾದ ಹೋಟೆಲೊಂದರಲ್ಲಿ ಬಂಧಿತನಾದ ಆರೋಪಿಯು ನಕಲಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿದ್ದ ಹಾಗೂ ವಂಚನೆಯ ಹಣವನ್ನು ಕ್ರಿಪ್ಟೋ ಕರೆನ್ಸಿ ಮೂಲಕ ವರ್ಗಾಯಿಸಲು ಸಹಕರಿಸುತ್ತಿದ್ದ. ನಾಗಪುರದಲ್ಲಿ ಬಂಧಿತನಾದ ಮತ್ತೊಬ್ಬ ಆರೋಪಿಯು ಶೆಲ್ ಕಂಪನಿಗಳ ಮೂಲಕ ವಂಚನೆಯ ಹಣದ ವಹಿವಾಟು ನಡೆಸುತ್ತಿದ್ದ.

ನಾಡಿನ ಸರ್ವತೋಮುಖ ಬೆಳವಣಿಗೆಯನ್ನೇ ಜೀವನದ
ಗುರಿಯಾಗಿಸಿಕೊಂಡ ರಾಜಕಾರಣಿ, ಅನ್ನದಾತರ ಬದುಕಲ್ಲಿ ಹಸಿರು
ಕ್ರಾಂತಿಯ ಹೊಮ್ಮಿಸಲು 'ಕೃಷಿ ಬಜೆಟ್' ಮಂಡಿಸಿದ ರೈತ ನೇತಾರ
ಬೈಸಿಕಲ್ ಯೋಜನೆ ತಂದು ಮಕ್ಕಳ ಭವಿಷ್ಯಕ್ಕೆ ವಿದ್ಯಾ
ಸಾರಥಿಯಾದವರು ಹಾಗೂ ಮಾತ್ರ ಹೃದಯದ ಮುಖ್ಯಮಂತ್ರಿಯಾಗಿ
ಕರ್ನಾಟಕದ ಇತಿಹಾಸದಲ್ಲಿ ಆದರ್ಶದ ಅಧ್ಯಾಯ ಬರೆದು ಜನರ
ಹೃದಯದಲ್ಲಿ ಶಾಶ್ವತ ಪ್ರೀತಿಯ ನೆಲೆ ಪಡೆದ ಮತ್ತು
ಕೇಂದ್ರ ಬಿಜೆಪಿ ಚುನಾವಣಾ ಸಮಿತಿ ಸದಸ್ಯರಾದ
ಸನ್ಮಾನ್ಯ ಶ್ರೀ
ಬಿ.ಎಸ್.ಯಡಿಯೂರಪ್ಪ
ರವರಿಗೆ
ಜನುಮದಿನದ ಶುಭಾಶಯಗಳು
ಶುಭ ಕೋರುವವರು
ಶ್ರೀ ಸಿ. ಮುನಿರಾಜು
ರಾಜ್ಯ ಕಾರ್ಯದರ್ಶಿ, ಬಿಜೆಪಿ, ಕರ್ನಾಟಕ
ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ
ಮಾಜಿ ಅಧ್ಯಕ್ಷರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಮತ್ತು
ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ

ವಿಶ್ವವಾಣಿ

ಸಂಪಾದಕೀಯ

ಅಮೆರಿಕ ಅಧ್ಯಕ್ಷರ ಹುಸಿಸಂಭ್ರಮ

ತಮ್ಮ ಎರಡನೇ ಅಧಿಕಾರಾವಧಿಯ ಮೊದಲ ವರ್ಷವು ಪೂರ್ಣಗೊಂಡ ಸಂಭ್ರಮದಲ್ಲಿ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, 'ಈ ಮೊದಲು ಸ್ಥಗಿತಗೊಂಡಿದ್ದ ದೇಶದ ಆರ್ಥಿಕ ಪ್ರಗತಿಯನ್ನು ಸರಿಪಡಿಸಿರುವೆ, ಗಡಿಗಳು ಈಗ ಸುರಕ್ಷಿತವಾಗಿವೆ, ಪೊಲೀಸ್ ಪಡೆ ಹಿಂದೆಂದಿಗಿಂತಲೂ ಬಲಿಷ್ಠವಾಗಿದೆ. ಕಾನೂನುಬದ್ಧ ದಾಖಲೆ ಹೊಂದಿರುವ ವಲಸಿಗರಷ್ಟೇ ದೇಶವನ್ನು ಪ್ರವೇಶಿಸಿರುವುದರಿಂದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಹೆಚ್ಚೆಚ್ಚು ಅಮೆರಿಕನ್ನರು ಉದ್ಯೋಗಸ್ಥರಾಗಿದ್ದಾರೆ' ಎಂದು ಹೆಮ್ಮೆಯಿಂದ ಬೆನ್ನು ತಟ್ಟಿಕೊಂಡಿದ್ದಾರೆ. 'ಮೇಕ್ ಅಮೆರಿಕ ಗ್ರೇಟ್ ಅಗೇನ್' ಎಂಬ ಘೋಷವಾಕ್ಯದೊಂದಿಗೇ ಗದ್ದುಗೆಯನ್ನು ಅಪ್ಪಿದ ಟ್ರಂಪ್ ಅವರು, ಅದು ಸಾಕಾರಗೊಳ್ಳುವ ಹಾದಿಯಲ್ಲಿದೆ ಎಂಬುದನ್ನು ಹೀಗೆ ಸಮರ್ಥಿಸಿಕೊಂಡಿರಲಿಕ್ಕೂ ಸಾಕು. ಅಷ್ಟಕ್ಕೂ, ತನ್ನ ದೇಶದ ಮತ್ತು ದೇಶಸ್ಥರ ಹಿತವನ್ನು ಕಾಯುವುದು ಯಾವುದೇ ರಾಷ್ಟ್ರನಾಯಕನ ಆದ್ಯತೆಯಾಗಬೇಕು. ಹಾಗೆಂದ ಮಾತ್ರಕ್ಕೆ ಮಿಕ್ಕ ರಾಷ್ಟ್ರಗಳ ಹಿತವನ್ನು ಬಲಿಕೊಡಬೇಕು ಎಂದೇನೂ ಇಲ್ಲವಲ್ಲ? ತಮ್ಮ ಮಹತ್ವಾಕಾಂಕ್ಷೆಯ 'ಸಸಿ'ಗೆ ನೀರೆರೆಯಲು ಟ್ರಂಪ್ ಅವರು ಸಾಕಷ್ಟು ರಾಷ್ಟ್ರಗಳ 'ಪ್ರಗತಿ ವೃಕ್ಷ'ಕ್ಕೆ ಕೊಡಲಿಪೆಟ್ಟು ನೀಡಲು ಮುಂದಾಗಿದ್ದನ್ನು ಇಡೀ ಜಗತ್ತೇ ಕಂಡಿದೆ. ಹೀಗಿರುವಾಗ ಟ್ರಂಪ್ ಈ ಸಂಭ್ರಮದ ವೇಳೆ ಕೊಂಚ ಆತ್ಮಾವಲೋಕನವನ್ನೂ ಮಾಡಿಕೊಂಡರೆ ಒಳಿತು. 'ನಾನೊಬ್ಬನೇ ಉದ್ಧಾರವಾಗಬೇಕು' ಎಂಬುದು ಸ್ವಾರ್ಥ ಚಿಂತನೆಯಾದರೆ, 'ನನ್ನ ಜತೆಗಿರುವವರನ್ನೂ ಉದ್ಧರಿಸಬೇಕು' ಎಂಬುದು ಆದರ್ಶ ನಾಯಕತ್ವ ಎನಿಸಿಕೊಳ್ಳುತ್ತದೆ. ಇದು ರಾಷ್ಟ್ರವೊಂದರ ವಿಷಯದಲ್ಲೂ ಅನ್ವಯವಾಗುವ ಮಾತು. ಟ್ರಂಪ್ ಅವರು ಅಮೆರಿಕವನ್ನು ಮತ್ತೊಮ್ಮೆ ಮಹತ್ತರವಾಗಿಸಲಿ, ಅದಕ್ಕೆ ಯಾರದ್ದೇನೂ ಅಭ್ಯಂತರವಿಲ್ಲ. ಆದರೆ ಅದರ ನೆರವೇರಿಕೆಗೆ ಮಿಕ್ಕ ರಾಷ್ಟ್ರಗಳನ್ನು ಅವರು ಪಾತಾಳಕ್ಕೆ ಅಮುಕಲು ಯತ್ನಿಸದಿದ್ದರೆ ಸಾಕು...!

ಸೊಂಪಾದಕೀಯ

'ಚರ್ಚ್' ಆಸ್ಪದ ಸಂಗತಿ

ಆಸ್ತಿಕರು ಮತ್ತು ನಾಸ್ತಿಕರು ನಮ್ಮ ಸಮಾಜದಲ್ಲಿ ಕಾಮನ್. ಬಹುತೇಕ ಜನ ದೇವರ ಮೇಲೆ ಎಷ್ಟೇ ನಂಬಿಕೆ ಇಟ್ಟಿದ್ದರೂ, ಭಗವಂತನ ಭಯದಿಂದ ಬದುಕುತ್ತಿರುವ ಭಕ್ತರ ಸಂಖ್ಯೆ ಎಷ್ಟೇ ದೊಡ್ಡದಿದ್ದರೂ, 'ಅಯ್ಯೋ, ದೇವರೆಲ್ಲಿದ್ದಾನೆ? ದೇವರು ಗೀವರು ಎಲ್ಲಾ ಸುಳ್ಳು' ಅನ್ನೋ ಜನರೂ ನಮ್ಮ ನಡುವೆ ಇದ್ದಾರೆ. ಆದರೆ ಇವೆಲ್ಲದರ ನಡುವೆ, 'ಪ್ರತಿಯೊಬ್ಬ ಮನುಷ್ಯನಲ್ಲೂ ದೇವರಿದ್ದಾನೆ' ಅಂತ ದೊಡ್ಡೋರು ಹೇಳಿದ ಮಾತನ್ನೇ ತಪ್ಪಾಗಿ ತಿಳಿದುಕೊಂಡು 'ನಾನೇ ದೇವರು' ಅನ್ನೋ ಹುಂಬರೂ ಇಲ್ಲಿದ್ದಾರೆ. ಅಂಥದ್ದೇ ಕೆಟಗರಿಗೆ ಸೇರಿದ ಟಾಮ್ ಮ್ಯಾಥ್ಯೂ ಎಂಬ ವ್ಯಕ್ತಿಯೊಬ್ಬನ ಕಥೆಯಿದು. ಸುಮಾರು ಎರಡು ವರ್ಷದ ಹಿಂದೆ ಈತ ಬೆಂಗಳೂರಿನ ಚರ್ಚ್ ಒಂದಕ್ಕೆ ನುಗ್ಗಿ ಗೇಟು ಮುರಿದು, ಪೀಠೋಪಕರಣಗಳನ್ನು ಧ್ವಂಸ ಮಾಡಿ 'ಐ ಆಮ್ ಗಾಡ್' ಎಂದು ಕೂಗಾಡಿದ. ಬೆಳಗಿನ ಜಾವ ಅಲ್ಲಿನ ಸೆಕ್ಯುರಿಟಿ ಗಾರ್ಡ್ ಅನ್ನು ಎಬ್ಬಿಸಿ ದಾಂಧಲೆಯನ್ನೂ ಎಬ್ಬಿಸಿದ. ಅಂದಹಾಗೆ, ಈತ ಅದಕ್ಕೂ ಮುನ್ನ ಸಾಕಷ್ಟು ಬಾರಿ 'ನಾನೇ ದೇವರು, ಐ ಆಮ್ ಗಾಡ್' ಅಂತ ಹೇಳಿಕೊಂಡು ಕಿತಾಪತಿ ಕೆಲಸ ಮಾಡಿದ್ದನಂತೆ. ಚರ್ಚಿಗೆ ಹೋಗಿ ಗಲಾಟೆ ಮಾಡಿದ ವೇಳೆ ಈತ ಕುಡಿದಿದ್ದನಂತೆ. ಹಾಗಾಗಿ ಪರಮಾತ್ಮ ನನ್ನೊಳಗೇ ಇರುವಾಗ ಬೇರೆ ಯಾವ ದೇವರಿದ್ದಾನೆ ಅನ್ನೋ ಆತ್ಮವಿಶ್ವಾಸ ಇದ್ದರೂ ಇರಬಹುದು. ಈತ ಇದಕ್ಕೂ ಮುನ್ನ ಇಂಥದೇ ಕುಚೇಷ್ಟೆಗಳನ್ನು ಮಾಡಿದ್ದರೂ ಚರ್ಚಿನ ಫಾದರ್ ಇವನಿಗೆ ಬುದ್ಧಿ ಹೇಳಿಲ್ಲ ಅನ್ಸುತ್ತೆ. ಅಥವಾ ಆ ಫಾದರ್, 'ಯಾರು ದೇವರು ಅನ್ನೋದ್ರ ಬಗ್ಗೆ ಅನುಮಾನ ಇದ್ದರೆ ಆತ ಬಹಿರಂಗವಾಗಿ ಚರ್ಚಿಗೆ ಬರಲಿ' ಅಂತ ಕರೆ ಕೊಟ್ಟಿದ್ದನ್ನು, 'ಬಹಿರಂಗವಾಗಿ ಚರ್ಚಿಗೆ ಬರಲಿ' ಅಂತ ತಪ್ಪಾಗಿ ಅರ್ಥೈಸಿಕೊಂಡು ಈತ ಚರ್ಚಿಗೆ ನುಗ್ಗಿರುವ ಸಾಧ್ಯತೆಯೂ ಇದೆ. ಆದರೆ, ಈ ಪ್ರಕರಣದ ನಂತರವೂ ದೇವರು ಯಾರು ಅಂತ ಡಿಸೈಡ್ ಆದ ಬಗ್ಗೆ ಮಾತ್ರ ಯಾವುದೇ ಮಾಹಿತಿ ಬರಲಿಲ್ಲ ಎಂಬುದು ಗಮನಾರ್ಹ!

ಸಂಪಾದಕರ ಸದ್ಯಶೋಧನೆ

ಶಾವು ಎಂಬ ಆನೆ ನೆನಪು

ನಾನು ದಕ್ಷಿಣ ಆಫ್ರಿಕಾಕ್ಕೆ ಬಂದಾಗಲೆಲ್ಲ ವನ್ಯಜೀವಿ ಇತಿಹಾಸ ದಂತಕಥೆ 'ಶಾವು' ಬಗ್ಗೆ ಒಬ್ಬರಾದರೂ ಪ್ರಸ್ತಾಪಿಸದೇ ಹೋಗುವುದಿಲ್ಲ. ಇಡೀ ದೇಶದಲ್ಲಿ ಶಾವು ಬಗ್ಗೆ ಅತ್ಯಂತ ಗೌರವದ ಮತ್ತು ವಿಶೇಷವಾದ ಸ್ಥಾನವಿದೆ. ಆಫ್ರಿಕಾದ ಕಾಡುಗಳಲ್ಲಿ ಅಲೆದಾಡಿದ ಅತ್ಯಂತ ಬೃಹತ್ ಮತ್ತು ಭವ್ಯವಾದ ಆನೆಗಳಲ್ಲಿ ಶಾವು ಕೂಡ ಒಂದು. ಸನ್ ಸಿಟಿಯ 'ದ ಪ್ಯಾಲೇಸ್ ಆಫ್ ದಿ ಲಾಸ್ಟ್ ಸಿಟಿ' ಹೋಟೆಲ್ ಮುಂಭಾಗದಲ್ಲಿರುವ ಅದರ ಬೃಹತ್ ಕಂಚಿನ ಪ್ರತಿಮೆಯು ಇಂದಿಗೂ ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. 'ಶಾವು' ಎಂಬ ಹೆಸರು ಆಫ್ರಿಕಾದ ಸ್ಥಳೀಯ ಭಾಷೆಯಿಂದ ಬಂದಿದೆ ಎಂಬುದು ಗಮನಾರ್ಹ. ಇದು ಆನೆಯ ಭವ್ಯತೆ ಮತ್ತು ಅದರ ಶಾಂತ ಸ್ವಭಾವವನ್ನು ಸೂಚಿಸುತ್ತದೆ. ದಕ್ಷಿಣ ಆಫ್ರಿಕಾದ ಪ್ರಸಿದ್ಧ ಕೃಗರ್ ನ್ಯಾಷನಲ್ ಪಾರ್ಕ್‌ನಲ್ಲಿ ಜೀವಿಸಿದ್ದ ಈ ಆನೆಯು 'ಗ್ರೇಟ್ ಟಸ್ಕರ್ಸ್' (ಬೃಹತ್ ದಂತದ ಆನೆಗಳು) ಎಂಬ ಗುಂಪಿಗೆ ಸೇರಿತ್ತು. ಅಂದರೆ, ನೆಲಕ್ಕೆ ತಾಗುವಷ್ಟು ಉದ್ದವಾದ ಮತ್ತು ಭಾರವಾದ ದಂತಗಳನ್ನು ಹೊಂದಿರುವ ಅಪರೂಪದ ಆನೆಗಳಲ್ಲಿ ಶಾವು ಅಗ್ರಗಣ್ಯವಾಗಿತ್ತು. ಶಾವು ಕೇವಲ ಒಂದು ಆನೆಯಾಗಿರಲಿಲ್ಲ, ಅದು ಪ್ರಕೃತಿಯ ಒಂದು ಅದ್ಭುತವಾಗಿತ್ತು. ಶಾವುವಿನ ದಂತಗಳು ವಿಶ್ವದ ಅತಿ ಉದ್ದದ ದಂತಗಳಲ್ಲಿ ಒಂದಾಗಿದ್ದವು. ಅದರ ಒಂದು ದಂತವು ಸುಮಾರು ಮೂರು ಮೀಟರ್‌ಗಿಂತಲೂ ಹೆಚ್ಚು ಉದ್ದವಿತ್ತು. ಅದರ ದಂತಗಳ ತೂಕವೇ ತಲಾ ಇಪ್ಪತ್ತರಿಂದ ಎಂಬತ್ತು ಕೆಜಿ ಇತ್ತು. ಆನೆ ನಡೆಯುವಾಗ ಅದರ ದಂತಗಳು ನೆಲವನ್ನು ಸ್ಪರ್ಶಿಸುತ್ತಿದ್ದವು, ಇದು ಆನೆಗಳ ಲೋಕದಲ್ಲಿ ಅತ್ಯಂತ ಅಪರೂಪದ ಲಕ್ಷಣ. ಸಾಮಾನ್ಯ ಆಫ್ರಿಕನ್ ಆನೆಗಳಿಗಿಂತ ಶಾವು ಎತ್ತರವಾಗಿತ್ತು ಮತ್ತು ಬಲಿಷ್ಠವಾಗಿತ್ತು. ಅದರ ಭವ್ಯ ನೋಟವು ಕಾಡಿನ ಇತರ ಪ್ರಾಣಿಗಳಲ್ಲಿ ಗೌರವ ಮೂಡಿಸುವಂತಿತ್ತು. ಶಾವು ತನ್ನ ಜೀವಿತಾವಧಿಯ ಬಹುಭಾಗವನ್ನು ಕೃಗರ್ ನ್ಯಾಷನಲ್ ಪಾರ್ಕ್‌ನಲ್ಲಿ ಕಳೆಯಿತು. ಸಾಮಾನ್ಯವಾಗಿ ದೊಡ್ಡ ದಂತಗಳನ್ನು ಹೊಂದಿರುವ ಆನೆಗಳು ಬೇಟೆಗಾರರ ಕಣ್ಣಿಗೆ ಸುಲಭವಾಗಿ ಬೀಳುತ್ತವೆ. ಆದರೆ ಶಾವು ಅದೃಷ್ಟವಶಾತ್ ಬೇಟೆಗಾರರಿಂದ ತಪ್ಪಿಸಿಕೊಂಡು ದೀರ್ಘಕಾಲ ಬದುಕಿತು. ಅಷ್ಟು ದೊಡ್ಡ ಗಾತ್ರವಿದ್ದರೂ ಶಾವು ಅತ್ಯಂತ ಶಾಂತ ಸ್ವಭಾವದ ಆನೆಯಾಗಿತ್ತು. ಪ್ರವಾಸಿಗರ ವಾಹನಗಳು ಹತ್ತಿರ ಬಂದರೂ ಅದು ಎಂದಿಗೂ ಆಕ್ರಮಣಕಾರಿಯಾಗಿ ವರ್ತಿಸುತ್ತಿರಲಿಲ್ಲ. ತನ್ನ ಹಿಂಡಿನ ಮೇಲೆ ಶಾವುಗೆ ಅಪಾರ ಹಿಡಿತವಿತ್ತು. ಯುವ ಆನೆಗಳಿಗೆ ಇದು ಒಂದು ಮಾರ್ಗದರ್ಶಿಯಂತೆ ಕಾಣುತ್ತಿತ್ತು. ಸನ್ ಸಿಟಿಯ ಸಂಸ್ಥಾಪಕ ಸೋಲ್ ಕೆರ್ಜ್ನರ್ ಅವರು 'ದ ಪ್ಯಾಲೇಸ್ ಆಫ್ ದಿ ಲಾಸ್ಟ್ ಸಿಟಿ'ಯನ್ನು ನಿರ್ಮಿಸುವಾಗ, ಆಫ್ರಿಕಾದ ನೈಜ ಅಸ್ಮಿತೆಯನ್ನು ಬಿಂಬಿಸುವ ಸ್ಮಾರಕವೊಂದು ಇರಬೇಕೆಂದು ಬಯಸಿದ್ದರು. ಆಗ ಅವರಿಗೆ ನೆನಪಾಗಿದ್ದೇ ಈ 'ಶಾವು'. ಆಫ್ರಿಕಾದ ವನ್ಯಜೀವಿಗಳ ರಾಜನಂತಿದ್ದ ಶಾವುವಿನ ಪ್ರತಿಮೆಯನ್ನು ಅರಮನೆಯ ಮುಂಭಾಗದಲ್ಲಿ ಸ್ಥಾಪಿಸಲು ಅವರು ನಿರ್ಧರಿಸಿದರು. ಸನ್ ಸಿಟಿಯಲ್ಲಿರುವ ಶಾವುವಿನ ಪ್ರತಿಮೆಯು ಕೇವಲ ಒಂದು ಕಲೆಯಲ್ಲ, ಅದು ತಾಂತ್ರಿಕ ಸಾಹಸವೂ ಹೌದು. ಈ ಪ್ರತಿಮೆಯನ್ನು ಶಾವುವಿನ ನಿಜವಾದ ಅಳತೆಗನುಗುಣವಾಗಿ ನಿರ್ಮಿಸಲಾಗಿದೆ. ಅದರ ಎತ್ತರ, ದಂತಗಳ ಉದ್ದ ಮತ್ತು ಚರ್ಮದ ಮೇಲಿನ ಸುಕ್ಕುಗಳನ್ನು ಕೂಡ ಅತ್ಯಂತ ನಿಖರವಾಗಿ ಮರುಸೃಷ್ಟಿಸಲಾಗಿದೆ. ಶಾವು ಬದುಕಿದ್ದಾಗ ಅದರ ಫೋಟೋಗಳು ಮತ್ತು ಅಳತೆಗಳನ್ನು ಅಭ್ಯಸಿಸಿ ಈ ಕೃತಿಯನ್ನು ಸಿದ್ಧಪಡಿಸಲಾಯಿತು. ಈ ಪ್ರತಿಮೆಯನ್ನು ಕಂಚಿನಿಂದ ಮಾಡಲಾಗಿದೆ. ಇದನ್ನು ಹಂತ ಹಂತವಾಗಿ ಎರಕ ಹೊಯ್ದು ನಂತರ ಜೋಡಿಸಲಾಯಿತು. ಪ್ರತಿಮೆಯ ತೂಕವು ಹಲವಾರು ಟನ್‌ಗಳಷ್ಟಿದೆ. ಶಾವುವಿನ ಪ್ರತಿಮೆಯು ಕೇವಲ ಅಲಂಕಾರಕ್ಕಾಗಿ ಅಲ್ಲ, ಅದರ ಹಿಂದೆ ಪ್ರಮುಖ ಸಂದೇಶಗಳಿವೆ. ಆನೆಗಳ ದಂತಕ್ಕಾಗಿ ನಡೆಯುವ ಅಕ್ರಮ ಬೇಟೆಯ ವಿರುದ್ಧ ಜಾಗೃತಿ ಮೂಡಿಸಲು ಈ ಪ್ರತಿಮೆ ಒಂದು ಸಂಕೇತವಾಗಿದೆ. ಅಷ್ಟು ಸುಂದರವಾದ ಜೀವಿಗಳನ್ನು ನಾವು ಕಳೆದುಕೊಳ್ಳಬಾರದು ಎಂಬ ಎಚ್ಚರಿಕೆಯನ್ನು ಇದು ನೀಡುತ್ತದೆ. ಆಫ್ರಿಕಾದ ಕಾಡುಗಳು ಎಷ್ಟು ಶ್ರೀಮಂತವಾಗಿವೆ ಮತ್ತು ಅಲ್ಲಿನ ಜೀವಿಗಳು ಎಷ್ಟು ಭವ್ಯವಾಗಿವೆ ಎಂಬುದನ್ನು ಈ ಪ್ರತಿಮೆ ಜಗತ್ತಿಗೆ ಸಾರುತ್ತದೆ. ಇಂದು ಸನ್ ಸಿಟಿಗೆ ಭೇಟಿ ನೀಡುವ ಪ್ರತಿಯೊಬ್ಬ ಪ್ರವಾಸಿಗನೂ ಶಾವುವಿನ ಪ್ರತಿಮೆಯ ಮುಂದೆ ನಿಂತು ಫೋಟೋ ತೆಗೆದುಕೊಳ್ಳದೆ ಹಿಂತಿರುಗುವುದಿಲ್ಲ. ಆ ಪ್ರತಿಮೆಯ ಕೆಳಗೆ ನಿಂತಾಗ ಮನುಷ್ಯ ಎಷ್ಟು ಚಿಕ್ಕವನಾಗಿ ಕಾಣುತ್ತಾನೆ ಎಂಬುದು ಆನೆಯ ಬೃಹತ್ ಗಾತ್ರದ ಅರಿವು ಮಾಡಿಕೊಡುತ್ತದೆ. ಶಾವು 1980ರ ದಶಕದ ಕೊನೆಯಲ್ಲಿ ಸ್ವಾಭಾವಿಕ ಕಾರಣಗಳಿಂದ ಮೃತಪಟ್ಟಿತು. ಆದರೆ ಅದರ ದಂತಗಳನ್ನು ಇಂದಿಗೂ ಸಂರಕ್ಷಿಸಿಡಲಾಗಿದೆ. ಶಾವು ಸತ್ತರೂ ಸನ್ ಸಿಟಿಯ ಪ್ರತಿಮೆಯ ರೂಪದಲ್ಲಿ ಅದು ಇಂದಿಗೂ ಅಮರವಾಗಿದೆ. ಆಫ್ರಿಕಾದ ಕಾಡುಗಳಲ್ಲಿ ಅಲೆದಾಡಿದ ಅತಿ ದೊಡ್ಡ ಆನೆಗಳ ಪರಂಪರೆಯನ್ನು ಈ ಸ್ಮಾರಕವು ಪ್ರತಿನಿಧಿಸುತ್ತದೆ. ಶಾವು ಇಡೀ ವಿಶ್ವದ ಪ್ರಕೃತಿ ಪ್ರೇಮಿಗಳ ಪಾಲಿನ ದಂತಕಥೆಯೇ ಸರಿ.

ಟಿಂಗ್ ಟಿಂಗ್ ಮೋಹಿನಿ ಮತ್ತು ಕೂರುವುದು ಎಂಬ ಸಾಧನೆ



ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಬರವಣಿಗೆಯಲ್ಲಿ ಆಸಕ್ತಿಯಿರುವ ಓದುಗರು 'ಲೇಖನ ಬರೆಯುವುದು ಹೇಗೆ, ಅದರ ತಯಾರಿ, ವಿಷಯದ ಆಯ್ಕೆ, ರೂಪರೇಷೆ ಇವೆಲ್ಲ ಹೇಗೆ' ಎಂದು ಕೇಳುವುದಿದೆ. 2 ವರ್ಷದ ಹಿಂದೆ 'ವಿಶ್ವವಾಣಿ ಕ್ಲಬ್ ಹೌಸ್'ನಲ್ಲಿ ಒಬ್ಬರು ವಿಶ್ವೇಶ್ವರ ಭಟ್ಟರಿಗೆ ಹೀಗೆ ಪ್ರಶ್ನಿಸಿದ್ದರು. ಅದಕ್ಕೆ ಭಟ್ಟರು, ''ಲೇಖನ ಬರೆಯಲು ಕಲಿಯಬೇಕೆಂದರೆ ಮೊದಲು 4–5 ತಾಸು ಕೂರುವುದು ಕಲಿಯಬೇಕು'' ಎಂದಿದ್ದರು. ನಾನು 'ಶಿಶಿರಕಾಲ' ಅಂಕಣ ಬರೆಯಲು ಆರಂಭಿಸಿ ಸಾಕಷ್ಟು ವರ್ಷಗಳೇ ಆದವು. ಈಗ ನನಗೆ ಆ ಪ್ರಶ್ನೆ ಕೇಳಿದರೆ ಅದೇ ಸಿದ್ಧ ಉತ್ತರ– ಮೊದಲು ಕೆಲಹೊತ್ತು ಕೂರಲು ಕಲಿಯಬೇಕು. ಪ್ರತಿವಾರ, ಮಳೆಯಾಗಲಿ, ಚಳಿಯಾಗಲಿ, ಮನೆಯಲ್ಲಿ ನೆಂಟರಿರಲಿ, ನೆಂಟರ ಮನೆಯಲ್ಲಿರಲಿ, ಯಾವುದೇ ಸ್ಥಿತಿಯಲ್ಲಿರಲಿ. ಬರೆಯುವ ಗಳಿಗೆ ಬಂತೆಂದರೆ, ರಾವಣ ಆತ್ಮಲಿಂಗವನ್ನು ಹುಡುಗನ ಕೈಲಿ ಕೊಟ್ಟು ಸಂಧ್ಯಾವಂದನೆಗೆ ಕೂರುವಂತೆ, ಎಲ್ಲ ಪಕ್ಕಕ್ಕಿಟ್ಟು ಇದ್ದಲ್ಲಿಯೇ ಕೂರಬೇಕು. ನಂತರದಲ್ಲಿ ಯೋಚಿಸುವುದು, ಬರೆಯುವುದು ಇತ್ಯಾದಿ.

ಬದಲಾದ ದಿನಮಾನದಲ್ಲಿ 4–5 ತಾಸು ಏಕಾಗ್ರತೆಯಿಂದ ಒಂದೇ ಕೆಲಸ ಮಾಡುವುದು ಸುಲಭವಲ್ಲ, ಗೆಳೆಯನ ಫೋನ್ ಬರುತ್ತದೆ, ಇನ್ಯಾರದೋ ಮೆಸೇಜ್ 'ಟಿಂಗ್' ಎನ್ನುತ್ತದೆ, ಆಫೀಸಿನ ಅಪೂರ್ಣ ಕೆಲಸವೊಂದು ನೆನಪಾಗುತ್ತದೆ, ಬ್ರೇಕಿಂಗ್ ನ್ಯೂಸ್ ಕಾಣಿಸುತ್ತದೆ, ಸಂಬಂಧಿಕರು ಮನೆಗೆ ಬರುತ್ತಾರೆ, ಅದರ ಮಧ್ಯೆ ಮೊಬೈಲ್‌ನಲ್ಲಿನ ಅಪ್ಲಿಕೇಷನ್‌ಗಳಿಂದ ಅಸಂಖ್ಯ 'ನೋಟಿಫಿಕೇಷನ್'ಗಳು, ನಿಮ್ಮ ಫೋಟೋಗೆ ಯಾರದ್ದೋ ಕಮೆಂಟು, ಯಾರಿಗೆ ಯಾರದ್ದೋ ಕುಹಕ, ಖುಷಿ, ಬೇಸರ, ಸುದ್ದಿ, ಕಂಗ್ರಾಜುಲೇಷನ್ಸ್ ಇತ್ಯಾದಿ. ಇದೆಲ್ಲ ಪೂರೈಸಿ ಮುಗಿಯಿತು ಎಂಬುದೇ ಇಲ್ಲ. ಸುತ್ತಲೂ ನೂರೆಂಟು ಚಿತ್ತಚಾಂಚಲ್ಯ ಪ್ರಚೋದಕಗಳು. ಬರೆಯಲು ಭಾಷೆ, ಜ್ಞಾನ, ಆಸಕ್ತಿ ಇರುವವರಿಗೆ ಕೂರಲು ಗೊತ್ತಿಲ್ಲವೆಂದರೆ ಅವರು ಬರಹಗಾರರಾಗುವುದಿಲ್ಲ. ಸ್ವರ–ರಾಗ ಪ್ರಜ್ಞೆ ಇರುವವರಿಗೆಲ್ಲ ಸಂಗೀತ ಪೂರ್ಣ ಒಲಿಯುವುದಿಲ್ಲ, ಹೀಗೆ ಅದೆಷ್ಟೋ ಜನರು ಎಲ್ಲ ಇದ್ದೂ ಬಯಸಿದ ಸಾಧನೆ ಸಾಧ್ಯವಾಗುವುದಿಲ್ಲ. ಕಾರಣ, ಅವರು ಕೂರಲು ಕಲಿತಿರುವುದಿಲ್ಲ. ಏನನ್ನೋ ಸಾಧಿಸಬೇಕೇ? ಮೊದಲು ಕೂರಲು ಕಲಿಯಬೇಕು.

ನಿಮಗೆ ಫ್ರೆಂಚ್ ಬರಹಗಾರ ವಿಕ್ಟರ್ ಹ್ಯೂಗೋ ಕಥೆ ಹೇಳಬೇಕು. ಆತ ಫ್ರಾನ್ಸ್‌ನ ಮಟ್ಟಿಗೆ ರವೀಂದ್ರನಾಥ್ ಟ್ಯಾಗೋರ್ ಇದ್ದಂತೆ. ಫ್ರೆಂಚರ ಬ್ಯಾಂಕ್ ನೋಟಿನಲ್ಲಿ ಅವನ ಫೋಟೋವನ್ನು ಕಾಣಬಹುದು ಎಂದರೆ ಅವನೆಷ್ಟು ದೊಡ್ಡ ಬರಹಗಾರ ಎಂದು ಅಂದಾಜಿಸಿ! ಫ್ರೆಂಚ್ ಸಾಹಿತ್ಯದ ಅತ್ಯುತ್ಕೃಷ್ಟ ಕೃತಿಗಳ ಸಾಲಿನಲ್ಲಿ ಮೊದಲೆರಡು ಕೃತಿಗಳು ಇವನವು. ಅದು ಹ್ಯೂಗೋ ಬರವಣಿಗೆಯ ಔನ್ನತ್ಯದ ಸಮಯ. ಈಗಾಗಲೇ ಬರೆದ ಒಂದು ಪುಸ್ತಕ ಮಾರಾಟವಾಗಿತ್ತು, ಮುಂದಿನದಕ್ಕೆ ಪಬ್ಲಿಷರ್ ಅವನಿಗೆ ಹಣ ಕೊಟ್ಟು ಗಡುವು ನೀಡಿದ್ದರು. ಒಂದೂವರೆ ವರ್ಷ ಕಳೆದರೂ ಹ್ಯೂಗೋನಿಗೆ ಒಂದು ಪುಟವನ್ನೂ ಬರೆಯಲಾಗಲಿಲ್ಲ. ಆತ ಖ್ಯಾತನಾಗಿದ್ದುದರಿಂದ ಪಾರ್ಟಿ–ಪ್ರವಾಸ ಹೆಚ್ಚಾಗಿತ್ತು. ಮಿಗಿಲಾಗಿ, ಬರೆಯಲೆಂದು ಕೂರಲು ಆತ ಎಷ್ಟೇ ಯತ್ನಿಸಿದರೂ ಸಾಧ್ಯವಾಗುತ್ತಿರಲಿಲ್ಲ. ಚಂಚಲ ಮನಸ್ಸು, ಏನು ಮಾಡಿದರೂ ಅರ್ಧ ಗಂಟೆ ಕೂರಲಾಗುತ್ತಿರಲಿಲ್ಲ. ತಿಂಗಳುಗಳು ಕಳೆದರೂ ಒಂದು ಪುಟ ಬರೆಯಲಾಗಲಿಲ್ಲ. 6 ತಿಂಗಳು ಗಡುವನ್ನು ವಿಸ್ತರಿಸಿದ ಪ್ರಕಾಶಕರು, ಮುಗಿಸಿ ಕೊಡದಿದ್ದರೆ ಮುಂಗಡ ಹಣವನ್ನು ಮರಳಿಸಬೇಕೆಂದರು. ಹ್ಯೂಗೋ ಅಷ್ಟೂ ಹಣವನ್ನು ಖಾಲಿ ಮಾಡಿಬಿಟ್ಟಿದ್ದ. ಆದರೆ ಅವನಿಗೆ ಬರೆಯಲೆಂದು ಕೂರಲು ಸಾಧ್ಯವಾಗುತ್ತಲೇ ಇಲ್ಲ. ಕೊನೆಗೊಮ್ಮೆ, ಬರೆಯುವ ಕೋಣೆ ಹೊಕ್ಕು ಪ್ಯಾಂಟ್ ಬಿಚ್ಚಿ ಬಾಗಿಲಿನಿಂದ ಹೊರಗೆಸೆದ. ಬಾಗಿಲ ಹಿಂದೆ ನಿಂತು ಮನೆಗೆಲಸದವನನ್ನು ಕರೆದು, ''ಅಲ್ಲಿ ನನ್ನ ಅಂಡರ್‌ವೇರ್, ಪ್ಯಾಂಟ್ ಎಸೆದಿರುವೆ. ಅದನ್ನು ತೆಗೆದುಕೊಂಡು ಹೋಗಿ ಎಲ್ಲಾದರೂ ಇಡು. ಇನ್ನು 6 ತಾಸು ನಾನೆಷ್ಟೇ ಕೇಳಿದರೂ, ಏನೇ ಕಾರಣ ಹೇಳಿದರೂ ಅವನ್ನು ಮರಳಿಸಬಾರದು. ಮರಳಿಸಿದರೆ ನಿನ್ನ ಸಂಬಳ ಕಟ್. ನನ್ನ ಮಾತಿನಂತೆ ನಡೆದುಕೊಂಡರೆ ನಿನಗೆ ತಿಂಗಳ ಬೋನಸ್'' ಎಂದ. ಈ ಉಪಾಯ ಫಲಿಸಿತು. ಈ ರೀತಿ ಪ್ರತಿದಿನ ಮಾಡುವುದು ಹ್ಯೂಗೋಗೆ ಅಭ್ಯಾಸವಾಯಿತು. ಪರಿಣಾಮ ಆರೇ ತಿಂಗಳಲ್ಲಿ The Hunchback of Notre-Dame ಎಂಬ 1000 ಪುಟಗಳ ಕಾದಂಬರಿಯನ್ನು ಮುಗಿಸಿದ. ಅದು ಫ್ರೆಂಚ್ ಸಾಹಿತ್ಯದ 'ಮಾಸ್ಟರ್ ಪೀಸ್' ಎನಿಸಿಕೊಂಡಿತು!

ಹರ್ಮನ್ ಮೆಲ್ವಿಲ್ಲೆ ಎಂಬ ಅಮೆರಿಕನ್ ಬರಹಗಾರನಿಗೂ 'ಕೂತಲ್ಲಿ ಕೂರಲಾಗದ' ಸಮಸ್ಯೆ. ಹೆಂಡತಿ ಬೆಳಗ್ಗೆ ಕೆಲಸಕ್ಕೆ ಹೋಗುವಾಗ, ತನ್ನ ಕಾಲಿಗೆ ಚೈನ್ ಕಟ್ಟಿ ಹೋಗುವಂತೆ ಆತ ಹೇಳುತ್ತಿದ್ದನಂತೆ. ಬರವಣಿಗೆಯ ಟೇಬಲ್, ಟಾಯ್ಲೆಟ್ ಮುಟ್ಟುವಷ್ಟು ಉದ್ದದ ಚೈನು. ಬರೆಯುವುದೊಂದನ್ನು ಬಿಟ್ಟು ಇನ್ನೇನನ್ನು ಮಾಡಲಿಕ್ಕೂ ಅಸಾಧ್ಯ ಮಾಡಿಕೊಂಡು ಕೂರುವುದು. 'ಮೊಬಿ ಡಿಕ್' ಎಂಬ ಪ್ರಸಿದ್ಧ ಕಾದಂಬರಿಯನ್ನು ಆತ ಬರೆದಿದ್ದು ಹೀಗೆಯೇ!

ನನಗಂತೂ ಇಂಥ ನಡವಳಿಕೆಗಳು ಅತಿ ಎನಿಸುವುದಿಲ್ಲ. ಸೃಜನಶೀಲ ವ್ಯಕ್ತಿಗೆ ಕೂತಲ್ಲಿ ಕೂರುವುದು ಸುಲಭವಲ್ಲ. ಕೂರುವುದು ಎಂದರೆ ಜಾಡ್ಯವಲ್ಲ, ಒಂದೇ ಕಾರ್ಯದಲ್ಲಿ ಏಕಾಗ್ರತೆಯಿಂದ ಮಗ್ನವಾಗುವುದು, ಪೂರೈಸುವುದು. ಸಮಸ್ಯೆಯೆಂದರೆ, ಸೃಜನಶೀಲತೆ ಹೆಚ್ಚಿದಂತೆ ಮನಸ್ಸು ಇನ್ನೂ ಮರ್ಕಟವಾಗುತ್ತದೆ. ಅದರಲ್ಲೂ ಮೊಬೈಲ್ ಜತೆಗಿದ್ದರೆ ಏಕಾಗ್ರತೆ ಕಷ್ಟ. ವಿಶ್ವಾಮಿತ್ರನಂತೆ ಕೂರಬೇಕೆಂದುಕೊಂಡರೂ ಇಂಟರ್‌ನೆಟ್, ಸೋಷಿಯಲ್ ಮೀಡಿಯಾ ಎಂಬ ಮೇನಕೆಯರ ಕಾಟ!

ಸ್ವಲ್ಪ ಗ್ರಹಿಸಿದರೆ, ದಿನಗಳೆದಂತೆ ನಮ್ಮೆಲ್ಲರ ಏಕಾಗ್ರತೆ (Attention Span) ಕಡಿಮೆಯಾಗುತ್ತಿರುವುದು ನಮಗೇ ಗೊತ್ತಾಗುತ್ತದೆ. ನಮ್ಮ ತಾಳ್ಮೆ ಕ್ಷೀಣಿಸುತ್ತಲೇ ಇದೆ. ಕೆಲ ಅಂಕಿ–ಅಂಶಗಳು ಇದನ್ನು ಪುಷ್ಟೀಕರಿಸುತ್ತವೆ. ಅದರಲ್ಲೂ, ಮೊಬೈಲ್ ಬಳಸುವಾಗಿನ ಮನಸ್ಸಿನ ಚಂಚಲತೆಯನ್ನು, ಅದು ಬೀರುವ ಪರಿಣಾಮವನ್ನು ಗ್ಲೋರಿಯಾ ಮಾರ್ಕ್ ಎಂಬ ಮನಃಶಾಸ್ತ್ರಜ್ಞೆ ಹೀಗೆ ವಿವರಿಸುತ್ತಾಳೆ: ''ನಮ್ಮ ಮನಸ್ಸು ಬಿಳಿಯ ಬೋರ್ಡ್ ಇದ್ದಂತೆ, ನೀವೇನು ನೋಡುತ್ತೀರೋ, ಅನುಭವಿಸುತ್ತೀರೋ ಅದು ಆ ಕ್ಷಣಕ್ಕೆ ಚಿತ್ರವಾಗಿ ಮನಸ್ಸಿನಲ್ಲಿ ಮೂಡುತ್ತದೆ. ತಕ್ಷಣ ಇನ್ನೊಂದು ವಿಷಯಕ್ಕೆ ಗಮನ ತೆರೆದುಕೊಂಡಾಗ ಆ ಹಳೆಯ ಚಿತ್ರ ಅಳಿಸಿ ಹೊಸ ಚಿತ್ರರೂಪಕಗಳು ಆ ಬೋರ್ಡಿನ ಮೇಲೆ ಮೂಡುತ್ತವೆ. ಇದು ನೀವು ಒಂದು ವಿಡಿಯೋದಿಂದ ಇನ್ನೊಂದಕ್ಕೆ ಹೋದಾಗ, ರೀಲ್ಸ್ ನೋಡುವಾಗ ಹೀಗೆ ಪ್ರತಿಬಾರಿ ವಿಷಯಾಂತರವಾದಾಗ ಆ ಬೋರ್ಡ್‌ನ ಮೇಲೆ ಚಿತ್ರ ರೂಪುಗೊಳ್ಳಬೇಕು. ಆದರೆ ಇದರ ವೇಗ ಹೆಚ್ಚಿದಂತೆ ಆ ಬೋರ್ಡ್ ವಿಷಯಾಂತರವಾದಾಗ ಪೂರ್ಣ ಸ್ವಚ್ಛವಾಗುವುದಿಲ್ಲ, ಹಳೆಯ ಚಿತ್ರದ ಅಚ್ಚು ಅಲ್ಲಿ ಇನ್ನೂ ಇರುತ್ತದೆ. ಆ ಅಳಿದುಳಿದ ಚಿತ್ರದ ಮೇಲೆ ಇನೊಂದು ಚಿತ್ರ ಬಿಡಿಸಿದರೆ ಏನಾಗುತ್ತದೆ? ಎರಡೂ ಚಿತ್ರಗಳು ವಿರೂಪಗೊಳ್ಳುತ್ತವೆ. ನಮ್ಮ ಮಿದುಳು ಅಷ್ಟೊಂದು ವಿಷಯಾಂತರವನ್ನು ಗ್ರಹಿಸುವಷ್ಟು ಬೆಳೆದಿಲ್ಲ, ಅದಕ್ಕೆ ಅಷ್ಟೊಂದು ವಿಷಯವನ್ನು ಏಕಕಾಲಕ್ಕೆ ಸಂಸ್ಕರಿಸಿ ಗೊತ್ತಿಲ್ಲ, ಹಾಗಾಗಿ ನಿರಂತರ ಗೊಂದಲದಲ್ಲಿರುತ್ತದೆ. ಇದು ಉಳಿದೆಲ್ಲ ಕಾರ್ಯಗಳಿಗೆ ಕೆಟ್ಟದಾಗಿ ಬಾಧಿಸುತ್ತದೆ''.

ಕಾರಣಗಳೇನೇ ಇರಲಿ ಏಕಾಏಕಿ, ಅದರಲ್ಲಿಯೂ ಕೋವಿಡ್ ನಂತರದಲ್ಲಿ ನಮ್ಮೆಲ್ಲರ ಏಕಾಗ್ರತೆ ದಿನಗಳೆದಂತೆ ಕಡಿಮೆಯಾಗುತ್ತಿದೆ. ಇವೆಲ್ಲದಕ್ಕೂ ಸೋಷಿಯಲ್ ಮೀಡಿಯಾ, ಮೊಬೈಲ್, ಟಿವಿ ಕಾರಣ ಎಂದೆಲ್ಲ ಪುಕಾರಿದೆ. ಆದರೆ ಇದು 'ಮೊಟ್ಟೆ ಮೊದಲೋ, ಕೋಳಿ ಮೊದಲೋ?' ಎಂಬ ಪ್ರಶ್ನೆಯಂತೆ. ಇವುಗಳಿಂದ ನಾವು ಹಾಗೆ ಆಗಿದ್ದೋ ಅಥವಾ ನಮ್ಮ ಚಂಚಲತೆಯ ಅವಶ್ಯಕತೆಗೆ ಪೂರಕವಾಗಿ ಇವೆಲ್ಲ ಹೀಗೆ ಬೆಳೆದು ನಿಂತವೋ? ಸುಮ್ಮನೆ ನಮ್ಮೆಲ್ಲರ ದೈನಂದಿನ ವ್ಯವಹಾರಗಳನ್ನೇ ಗ್ರಹಿಸಿ. ಇಂದಿನ ಬದುಕಿನಲ್ಲಿ ಏಕಾಗ್ರತೆ ಅದೆಷ್ಟು ಕಷ್ಟವಲ್ಲವೇ? ನಾವು ಇಂದಿನ ಮಕ್ಕಳಿಗೆ ಏಕಾಗ್ರತೆಯೇ ಇಲ್ಲ ಎನ್ನುವುದಿದೆ. ಆದರೆ ನಮ್ಮಲ್ಲೆಷ್ಟು ಏಕಾಗ್ರತೆ ಉಳಿದುಕೊಂಡಿದೆ?

ನಾವು ಹೇಗೆ ಬದಲಾಗುತ್ತೇವೆಯೋ ಅದಕ್ಕನುಗುಣವಾಗಿ ನಮ್ಮ ವ್ಯವಸ್ಥೆಯನ್ನು ಬದಲಿಸಿಕೊಳ್ಳುವ, ಪೂರೈಸಿಕೊಳ್ಳುವ ವಿಶೇಷತೆ ಮನುಷ್ಯ ಸಮಾಜದ್ದು. ಈಗೀಗ ಅಲ್ಪ ಲಕ್ಷ್ಯ, ಚಿತ್ತಚಾಂಚಲ್ಯಕ್ಕೆ ಅನುಗುಣವಾಗಿಯೇ ನಮ್ಮ ಸುತ್ತಲಿನದೆಲ್ಲ ಬದಲಾಗುತ್ತಿದೆ. ಇಂದಿನ ಪುಸ್ತಕಗಳು ಚಿಕ್ಕದಾಗುತ್ತಿವೆ. ಪುಟಗಟ್ಟಲೆ ಸುದ್ದಿ ಯಾರು ಓದುತ್ತಾರೆ, ಹಾಗಾಗಿಯೇ ಇಂದು ಬೈಟ್‌ನ್ಯೂಸ್– ಸುದ್ದಿ ತುಣುಕುಗಳು. ಏನನ್ನೋ ಕಲಿಯಬೇಕೆಂದರೆ 'ಮೈಕ್ರೋ ಲರ್ನಿಂಗ್' ಎಂಬ ಹೊಸತೊಂದು ಪರಿಕಲ್ಪನೆ ಬಂದಿದೆ. ಒಂದೆರಡು ನಿಮಿಷದ ವಿಡಿಯೋ ನೋಡಿ ಏನನ್ನೋ ಕಲಿಯುವುದು. ಯಾರಿಗೂ ಪುರುಸೊತ್ತಿಲ್ಲದ ಕಾರಣ ಇದಕ್ಕೆಲ್ಲ ಸಾಕಷ್ಟು ಗ್ರಾಹಕರು. ಮೊದಲೆಲ್ಲ ಹೊಸತೊಂದು ಭಾಷೆಯನ್ನು ಕಲಿಯುವುದೆಂದರೆ ಅದಕ್ಕೆ ಯೂನಿವರ್ಸಿಟಿಗೆ ಹೋಗಬೇಕಿತ್ತು, ವರ್ಷಾನುಗಟ್ಟಲೆ ಕಲಿಯಬೇಕಿತ್ತು. ಈಗ ಹಾಗಲ್ಲ– ಭಾಷೆ ಕಲಿಯಲೆಂದೇ ಮೊಬೈಲ್‌ನಲ್ಲಿ ಆಟಗಳಿವೆ. ಇಂದು ಯಾರಿಗೂ ಯಾವುದೇ ರಿಪೋರ್ಟ್ ಓದಿ ಅರ್ಥಮಾಡಿಕೊಳ್ಳುವಷ್ಟು ವ್ಯವಧಾನವಿಲ್ಲ. ಜಾಹೀರಾತುಗಳು ಕೂಡ ಚಿಕ್ಕದಾಗುತ್ತಿವೆ. ಏಕೆಂದರೆ, ಉದ್ದವಾದರೆ ಅದು ಕೂಡ ಪರಿಣಾಮ ಬೀರುವುದಿಲ್ಲ. ಚಲನಚಿತ್ರಗಳ ಜಾಗವನ್ನು ಶಾರ್ಟ್ ಫಿಲಂ, ರೀಲ್ಸ್ ಕಬಳಿಸುತ್ತಿವೆ. ಚಲನಚಿತ್ರದಲ್ಲೂ ಅಷ್ಟೇ. ಮೊದಲೆಲ್ಲ ಯಾವುದೇ ನಟನ ಒಂದೇ ಕೋನದ ಕ್ಲೋಸಪ್, ವಿಡಿಯೋ 30–40 ಸೆಕೆಂಡ್ ಇರುತ್ತಿತ್ತು. ಹಳೆಯ ಚಲನಚಿತ್ರಗಳನ್ನು ನೋಡಿದರೆ ಒಂದೊಂದು ಸೀನ್ 2–3 ನಿಮಿಷ. ಆದರೆ ಈಗ ಹಾಗಲ್ಲ. 3 ತಾಸಿನ ಚಲನಚಿತ್ರ ಎಂದರೆ ಅರ್ಧಕ್ಕರ್ಧ ಜನ ಅದನ್ನು ಕೇಳಿಯೇ ಹೋಗುವುದಿಲ್ಲ, ಅಷ್ಟೇ ಅಲ್ಲ, ಪ್ರತಿ ಸೀನ್ ಉದ್ದವಿದ್ದರೂ ನಮಗೆ ಚಲನಚಿತ್ರ ರುಚಿಸುವುದಿಲ್ಲ. ಇಂದಿನ ಯಾವುದೇ ಚಲನಚಿತ್ರದಲ್ಲಿ ಒಂದು ಸೀನ್ ಹೆಚ್ಚೆಂದರೆ 30–40 ಸೆಕೆಂಡ್ ಮಾತ್ರ. ಹಾಲಿವುಡ್‌ನ ಅವೆಂಜರ್, ಸ್ಪೈಡರ್ ಮ್ಯಾನ್ ಮೊದಲಾದ ಅತಿರಂಜಿತ ಸಿನಿಮಾಗಳಲ್ಲಿ ಪ್ರತಿ ಟೇಕ್ 2–3 ಸೆಕೆಂಡ್ ಮಾತ್ರ. ಅಷ್ಟೇ ವೇಗದಲ್ಲಿ ಸ್ಕ್ರೀನ್ ಫ್ರೇಮ್ ಬದಲಾಗುತ್ತಿರುತ್ತದೆ. ಹಾಗಿಲ್ಲವೆಂದರೆ ಚಲನಚಿತ್ರ ಸಪ್ಪೆಯೆನಿಸುತ್ತದೆ, ಬಬಲ್‌ಗಮ್‌ನಂತೆ ಎಳೆದಿದ್ದಾರೆ ಎನಿಸತೊಡಗುತ್ತದೆ.

ಮನುಷ್ಯನ ಮನಸ್ಸು ಅಲ್ಲಾವುದ್ದೀನನ ಭೂತದಂತೆ, ಅದಕ್ಕೆ ಸುಮ್ಮನೆ ಕುಳಿತುಕೊಳ್ಳಲು ಬಿಡುವಂತಿಲ್ಲ. ಬಿಟ್ಟರೆ ಅದು ನಮ್ಮನ್ನೇ ತಿಂದುಬಿಡುತ್ತದೆ. ಬುದ್ಧಿವಂತ ಮನಸ್ಸು ನಿರಂತರ ಹೊಸತು, ಪ್ರಚೋದನೆ ಬಯಸುತ್ತದೆ. ಮೊಬೈಲ್ ನಿಮಿಷಕ್ಕೊಮ್ಮೆ 'ಟಿಂಗ್' ಎಂದು ಬಡಿದುಕೊಂಡಾಗಲೆಲ್ಲ ಮನಸ್ಸು ಅತ್ತ ತಿರುಗುತ್ತದೆ ಎಂಬುದು ಪುಕಾರು. ಆದರೆ ಮೊಬೈಲ್, ಇಂಟರ್ನೆಟ್ ಮಾತ್ರ ಇದೆಲ್ಲದಕ್ಕೂ ಕಾರಣವೇ? ಮೊಬೈಲ್ ಬಳಕೆ ನಮ್ಮ ಹತೋಟಿಯಲ್ಲಿ ಇದೆಯೇ ಇಲ್ಲವೇ ಎಂದು ತಿಳಿದುಕೊಳ್ಳುವುದು ಹೇಗೆ? ತಿಳಿಯುವುದು ಬಹಳ ಸುಲಭ. ನಾವೊಂದು ಕೆಲಸದಲ್ಲಿ ತೊಡಗಿರುವಾಗ ಕಾರಣವೇ ಇಲ್ಲದೆ ಮೊಬೈಲ್ ಕೈಗೆತ್ತಿಕೊಳ್ಳುತ್ತಿದ್ದೀರಿ ಎಂದರೆ ನಿಮಗೆ ಮೊಬೈಲ್ ಒಂದು ಸಮಸ್ಯೆ ಎನ್ನುವುದರಲ್ಲಿ ಸಂದೇಹವೇ ಇಲ್ಲ, ಅಲ್ಲಿ ಯಾರೋ ಸಂದೇಶ ಕಳುಹಿಸಿರಬೇಕಿಲ್ಲ, ಫೋನ್ ಮಾಡಿರಬೇಕಿಲ್ಲ. ಕಾರಣವೇ ಇಲ್ಲದೆ ಮೊಬೈಲ್ ಕೈಸೇರಿ ಕೆಲವು ನಿಮಿಷದ ನಂತರ ಅದರ ಅರಿವು ನಿಮಗೆ ಬರುತ್ತಿದೆ ಎಂದರೆ ಮೊಬೈಲ್ ನಿಮ್ಮ ಸೃಜನಶೀಲತೆಯನ್ನು ಕೊಲ್ಲುತ್ತಿದೆ ಎಂದರ್ಥ. ಒಮ್ಮೆ ಹೀಗೆ ಅನೈಚ್ಛಿಕವಾಗಿ ಮೊಬೈಲ್ ಹಿಡಿದುಕೊಂಡರೆ, ಮಾಡುತ್ತಿದ್ದ ಕೆಲಸಕ್ಕೆ ಮರಳಲು ಸುಮಾರು 27 ನಿಮಿಷ ಬೇಕಾಗುತ್ತದೆಯಂತೆ. ಜತೆಗೆ, ಮರಳಿದ ಮನಸ್ಸು ಮೊದಲಿನಂತಿರುವುದಿಲ್ಲ. ಇಲ್ಲಿ ಮೊಬೈಲ್ ಒಂದು ಮಾಧ್ಯಮವಷ್ಟೇ. ಮನಸ್ಸಿನ ಅಮಿತ ಜ್ಞಾನ ಬಯಕೆಗಳಿಗೆ ಮಿತಿಯಿಲ್ಲದ ಮಾಹಿತಿಯ ಲಭ್ಯತೆ. ಅದಕ್ಕೆ ಮೊಬೈಲ್ ಒಂದು ಸಾಧನ ಮಾತ್ರ.

ಈ ಚಂಚಲತೆ ಎಲ್ಲರಿಗೂ ಸಮಸ್ಯೆಯಲ್ಲ, ಆದರೆ ಏನೋ ಸಾಧಿಸಬೇಕು ಎನ್ನುವವರಿಗೆ ಇದು ಖಂಡಿತ ದೊಡ್ಡ ಸಮಸ್ಯೆ. ಇದನ್ನು ಗುರುತಿಸುವುದು ಅವರವರಿಗಷ್ಟೇ ಸಾಧ್ಯ. ಇದನ್ನು ಬೇಗ ಗುರುತಿಸಿದಷ್ಟೂ ಒಳ್ಳೆಯದು. ಏಕೆಂದರೆ ಈ ಅಭ್ಯಾಸ ರೂಢಿಯಾಗಿಬಿಟ್ಟರೆ ಕ್ರಮೇಣ ಆ ತಪ್ಪಿತಸ್ಥ ಭಾವ ಕಾಡುವುದೂ ನಿಂತುಬಿಡುತ್ತದೆ. ನಿಮ್ಮ ಜತೆ ಯಾರೋ ಮಾತಾಡುತ್ತಿದ್ದಾಗ ನೀವು ಅಕಾರಣ ಮೊಬೈಲ್ ಎತ್ತಿಕೊಂಡಿರಿ ಎಂದರೆ ಅದು ಸಮಸ್ಯೆಯ ಸೂಚಕ, ನಮ್ಮನ್ನು ಮೊಬೈಲ್ ನಿಯಂತ್ರಿಸುತ್ತಿದೆ ಎಂದೇ ಅರ್ಥ. ಸಮಯ, ಸಂಬಂಧ, ವ್ಯವಹಾರ ಇವೆಲ್ಲದಕ್ಕೆ ಮೊಬೈಲ್, ಇಂಟರ್ನೆಟ್ ಇವೆಲ್ಲವೂ ಬೇಕು. ಆದರೆ ಇವೆಲ್ಲವನ್ನು ಹಾಳುಮಾಡಲಿಕ್ಕೂ ಅವಷ್ಟೇ ಸಾಕು. ಪರಿಹಾರಕ್ಕೆ ಒಂದೇ ಮಾರ್ಗ– ಮೊದಲು ಈ ಸಮಸ್ಯೆ ನಮ್ಮಲ್ಲಿದೆಯೇ? ಮೊಬೈಲ್, ಇಂಟರ್ನೆಟ್ ಇವೆಲ್ಲ ನಮ್ಮನ್ನು ನಿರಂತರ ಕೆರಳಿಸುತ್ತಿವೆಯೇ? ಎಂದು ಪ್ರಶ್ನಿಸಿಕೊಳ್ಳಬೇಕು. ಸಮಸ್ಯೆಯನ್ನು ಗ್ರಹಿಸಿದರೆ ಅರ್ಧ ಬಗೆಹರಿಸಿದಂತೆ.

ದಿನಕ್ಕೆ ಒಂದಿಷ್ಟು ಹೊತ್ತಾದರೂ ಯಾವೆಲ್ಲ ಪ್ರಚೋದಕಗಳಿವೆಯೋ ಅದರಿಂದ ದೂರವಿರಬೇಕು. ನಾನಿಲ್ಲದಿದ್ದರೂ ಈ ಜಗತ್ತು ಹೀಗೆಯೇ ಇರುತ್ತಿತ್ತು ಎಂದುಕೊಂಡು ಸುಮ್ಮನೆ ಒಂದಿಷ್ಟು ಹೊತ್ತು ವಾಕಿಂಗ್‌ಗೆ ಹೋಗಿಬಿಡಬೇಕು, ಪೇಂಟಿಂಗ್ ಮಾಡಬೇಕು, ಹಾಡಬೇಕು, ಧ್ಯಾನದಲ್ಲಿ ತೊಡಗಬೇಕು. ಒಬ್ಬರೇ ಒಂದಿಷ್ಟು ಹೊತ್ತು ಏನೋ ಒಂದರಲ್ಲಿ ಅರೆಕ್ಷಣ ವಿಚಲಿತರಾಗದೆ ಮಾಡಬೇಕು. ಇದು ಬದುಕಿನ ಹೊಸ ಆಯಾಮವನ್ನು ತೆರೆಯುತ್ತದೆ. ಆದರೆ ಇದು ಸುಲಭವಲ್ಲ, ನಮ್ಮ ಸುತ್ತಲಿನ ಸಮಾಜ, ಸಂಬಂಧ, ವ್ಯವಹಾರ ಇದ್ಯಾವುದೂ ಇದನ್ನು ಒಪ್ಪುವುದಿಲ್ಲ, ಎಲ್ಲರೂ ನೀವು ನಿರಂತರ ಇದೆಲ್ಲದಕ್ಕೆ ಅಂಟಿಕೊಂಡೇ ಇರುತ್ತೀರಿ ಎಂಬಂತೆಯೇ ವ್ಯವಹರಿಸುತ್ತಾರೆ. ಸೋಷಿಯಲ್ ಮೀಡಿಯಾ ಅಪ್ಲಿಕೇಷನ್ ಅನ್ನು ಡಿಲೀಟ್ ಮಾಡಬಹುದು, ಬೇಕೆನಿಸಿದಾಗಲಷ್ಟೇ ಇನ್‌ಸ್ಟಾಲ್ ಮಾಡಿಕೊಳ್ಳಬಹುದು ಅಥವಾ ಹೋಮ್ ಸ್ಕ್ರೀನ್‌ನಿಂದ ಸೋಷಿಯಲ್ ಮೀಡಿಯಾ ಅಪ್ಲಿಕೇಷನ್ ತೆಗೆದು ಕಾಣದಂತೆ ಇಡಬಹುದು, ನೋಟಿಫಿಕೇಷನ್ ಬಾರದಂತೆ ಸೈಲೆಂಟ್ ಮಾಡಬಹುದು– ಹೀಗೆ ನೂರೆಂಟು ಮಾರ್ಗಗಳಿವೆ. ಆದರೆ ಅದೆಲ್ಲದಕ್ಕಿಂತ ಮೊದಲು, 'ಇದೊಂದು ಸಮಸ್ಯೆ' ಎಂಬುದು ನಮಗೆ ಮನದಟ್ಟಾಗಬೇಕು. ಆಗ ಮಾತ್ರ ಕೂತಲ್ಲಿ ಕೂರಲು, ನಿಂತಲ್ಲಿ ನಿಲ್ಲಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಬದುಕಿನ ಅರಿವೇ ಆಗದಂತೆ ಬದುಕಲು ಇಂದು ನೂರೆಂಟು ಸಲಕರಣೆ, ಮಾರ್ಗ, ಗದ್ದಲಗಳಿವೆ. ನೋಡನೋಡುತ್ತಲೇ, 'ಹ್ಯಾಪಿ ದಿವಾಲಿ', 'ಹ್ಯಾಪಿ ನ್ಯೂ ಇಯರ್' ಎನ್ನುತ್ತಲೇ ಬದುಕು ಮುಗಿದುಹೋಗುತ್ತದೆ, ಗೊತ್ತೇ ಆಗುವುದಿಲ್ಲ.

ಲಕ್ಷಾಂತರ ಯುವಜನರು ಸರಕಾರಿ ನೌಕರಿಗೆ ಯತ್ನಿಸುವುದೇಕೆ?

ದುಡಿಯಬಹುದಾಗಿದ್ದ ಅಮೂಲ್ಯ ವರ್ಷಗಳನ್ನು ಯುವಜನರು ಪರೀಕ್ಷೆಗಳ ತಯಾರಿಗೆ ವ್ಯಯಿಸುತ್ತಾರೆ. ಆಗ ಅವರ ಖರ್ಚುಗಳನ್ನು ಒಂದೋ ಪೋಷಕರು ವಹಿಸಬೇಕು, ಇಲ್ಲವೇ ಅವರವರೇ ಪಾರ್ಟ್ ಟೈಮ್ ಉದ್ಯೋಗ ಮಾಡುತ್ತಾ ನಿರ್ವಹಿಸಬೇಕು. ಇಷ್ಟಾಗಿಯೂ ಸರಕಾರಿ ಕೆಲಸ ಮರೀಚಿಕೆಯಾದರೆ, ಆಗ ಊರಿಗೆ ಮರಳುವುದು ಅವರಿಗೆ ಕಷ್ಟವಾಗಬಹುದು.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
keshavaprasadb@gmail.com

ಭಾರತದಲ್ಲಿ ಪ್ರತಿ ವರ್ಷ ಸರಕಾರಿ ಹುದ್ದೆಗಳಿಗೆ ನಾನಾ ಪರೀಕ್ಷೆಗಳು ನಡೆಯುತ್ತವೆ. ಯೂನಿಯನ್ ಪಬ್ಲಿಕ್ ಸರ್ವೀಸ್ ಕಮೀಶನ್ (ಯುಪಿಎಸ್‌ಸಿ), ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ), ಸ್ಟೇಟ್ ಲೆವೆಲ್ ಪಬ್ಲಿಕ್ ಸರ್ವೀಸ್ ಕಮಿಷನ್ಸ್ (ಪಿಎಸ್‌ಸಿ) ಪರೀಕ್ಷೆಗಳು ಸಾಮಾನ್ಯ. ಆದರೆ ಸರಕಾರಿ ಹುದ್ದೆಗಳಲ್ಲಿ ಇರುವವರೆಷ್ಟು ಮಂದಿ? ಎಷ್ಟು ಜನರಿಗೆ ಸಿಕ್ಕಿಲ್ಲ?

ಕಾರ್ಮಿಕ ಇಲಾಖೆಯ ಪ್ರಕಾರ, ಭಾರತದಲ್ಲಿ 2023–24ರ ವೇಳೆಗೆ 64 ಕೋಟಿ 33 ಲಕ್ಷ ಉದ್ಯೋಗಿಗಳಿದ್ದಾರೆ. ಆದರೆ ಕೇಂದ್ರ ಮತ್ತು ರಾಜ್ಯ ಸರಕಾರಿ ಉದ್ಯೋಗಿಗಳ ಸಂಖ್ಯೆ ಅಂದಾಜು 1.4 ಕೋಟಿ. ಆದ್ದರಿಂದ ಉದ್ಯೋಗ ಸೃಷ್ಟಿಯಲ್ಲಿ ಖಾಸಗಿ ವಲಯ, ವ್ಯಾಪಾರ, ವೃತ್ತಿ, ಕೃಷಿ – ವ್ಯವಸಾಯಗಳ ಪಾತ್ರವನ್ನು ಗಮನಿಸಬಹುದು. ಆದರೂ ಲಕ್ಷಾಂತರ ಯುವಜನರು ಸರಕಾರಿ ನೌಕರಿಗೆ ಶತಾಯಗತಾಯ ಯತ್ನಿಸುವುದೇಕೆ?!

ಕರ್ನಾಟಕದಲ್ಲಿ 2014ರ ಫೆಬ್ರವರಿಯಲ್ಲಿ ಅಂಚೆ ಇಲಾಖೆಯ 248 ಪೋಸ್ಟ್‌ಮನ್ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಬರೋಬ್ಬರಿ 1 ಲಕ್ಷದ 30 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದರು! ಅಂದರೆ ಪ್ರತಿ 1 ಹುದ್ದೆಗೆ 525 ಜನರ ಪೈಪೋಟಿ. ಬೆಂಗಳೂರಿನಿಂದ 40,000, ಮೈಸೂರು ಮತ್ತು ಧಾರವಾಡದಿಂದ ತಲಾ 12,000 ಮಂದಿ ಅರ್ಜಿ ಹಾಕಿದ್ದರು.

ಅಂಚೆಯಣ್ಣನ ಕೆಲಸ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 3 ಗಂಟೆಯ ತನಕ ಅಂಚೆ ಪತ್ರಗಳ ಬಟವಾಡೆ. ಮಾಸಿಕ 17–20 ಸಾವಿರ ರುಪಾಯಿಗಳ ವೇತನ. 10ನೇ ತರಗತಿ ಶಿಕ್ಷಣ ಸಾಕು. ಪೋಸ್ಟ್‌ಮನ್‌ಗೆ ಎರಡು ವರ್ಷಕ್ಕೊಮ್ಮೆ ಹೊಸ ಸೈಕಲ್, ಪ್ರತಿ ವರ್ಷ ಹೊಸ ಸಮವಸ್ತ್ರ ಮತ್ತು ಪಾದರಕ್ಷೆ, ಹಬ್ಬಗಳ ಆಚರಣೆ ಅಥವಾ ಮೋಟಾರು ವಾಹನ ಖರೀದಿಗೆ ಬಡ್ಡಿ ರಹಿತ ಸಾಲ ನೀಡುವ ಆಫರ್ ಇತ್ತು. ಹಾಗಾದರೆ ಪೋಸ್ಟ್‌ಮನ್ ಹುದ್ದೆಗೆ ಯಾಕೆ ಈ ಪರಿಯಲ್ಲಿ ಬೇಡಿಕೆ? ''ಒತ್ತಡವಿಲ್ಲದ ಕೆಲಸ, ಹೆಚ್ಚಿನ ವಿದ್ಯಾಭ್ಯಾಸವೂ ಬೇಡ. ಒಂದು ವೇಳೆ ಮೂರು ಡಿಪಾರ್ಟ್ಮೆಂಟಲ್ ಪರೀಕ್ಷೆಗಳನ್ನು 10 ವರ್ಷದೊಳಗೆ ಪೂರ್ಣಗೊಳಿಸಿದರೆ ಗ್ರೂಪ್–ಬಿ ಆಫೀಸರ್ ಕೂಡ ಆಗುವ ಸಾಧ್ಯತೆ ಇರುತ್ತದೆ'' ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದ್ದರು. ಇದು ಕೇವಲ ಕರ್ನಾಟಕದ ಕಥೆಯಲ್ಲ, ಹಲವಾರು ರಾಜ್ಯಗಳಲ್ಲಿ ಇದೇ ಪರಿಸ್ಥಿತಿ ಇದೆ.

ಹರಿಯಾಣ ಕೌಶಲ್ ರೋಜ್‌ಗಾರ್ ನಿಗಮದಲ್ಲಿ 2024ರಲ್ಲಿ ಕಸ ಗುಡಿಸುವುದು, ನೆಲ ಒರೆಸುವುದು, ತ್ಯಾಜ್ಯ ನಿರ್ವಹಣೆ ಮಾಡುವವರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಯಿತು. ಅವುಗಳಿಗೆ ಬರೋಬ್ಬರಿ 3 ಲಕ್ಷ 95 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದರು. ಈ ಕೆಲಸಗಳಿಗೆ ಹೆಚ್ಚಿನ ವಿದ್ಯಾರ್ಹತೆಯೇನೂ ಬೇಡ. ಆದರೆ 46,000 ಮಂದಿ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರು ಅರ್ಜಿ ಸಲ್ಲಿಸಿದ್ದರು. 1 ಲಕ್ಷದ 17 ಸಾವಿರ ಮಂದಿ 12ನೇ ತರಗತಿಯವರೆಗೆ ಓದಿದ್ದರು. ತಿಂಗಳಿಗೆ ಸುಮಾರು 15,000 ರುಪಾಯಿ ಸಂಬಳದ ಆಫರ್ ಇತ್ತು. ಜತೆಗೆ ಇದೂ ಗುತ್ತಿಗೆ ಆಧರಿತ ಕೆಲಸ. ಕಾಯಂ ಸರಕಾರಿ ಹುದ್ದೆಯೂ ಆಗಿರಲಿಲ್ಲ.

ಏಕೆ ಹೀಗೆ ಮಾಡಿದ್ರಿ? ಎಂಬ ಪ್ರಶ್ನೆಗೆ ಅರ್ಜಿದಾರರು ನಾನಾ ಉತ್ತರಗಳನ್ನು ಹೇಳಿದ್ದರು. ತೀವ್ರವಾದ ನಿರುದ್ಯೋಗ, ಇತರ ಅವಕಾಶಗಳ ಕೊರತೆ, ಸರಕಾರಿ ಹುದ್ದೆಯ ಆಸೆಗಳನ್ನು ಮುಂದಿಟ್ಟಿದ್ದರು.

ರಾಜಸ್ಥಾನದಲ್ಲಿ 53,749 ಜವಾನರ ಹುದ್ದೆಗೆ 24 ಲಕ್ಷದ 76 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದರು. 10ನೇ ತರಗತಿ ಸಾಕಿದ್ದರೂ, ಪಿಎಚ್‌ಡಿ, ಎಂಬಿಎ, ಕಾನೂನು ಪದವೀಧರರು ಇದ್ದರು! ಭಾರಿ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಕೆಯಾದ್ದರಿಂದ ವೆಬ್‌ಸೈಟ್ ಕ್ರ್ಯಾಶ್ ಆಗಿತ್ತು. ರೈಲ್ವೆ ಇಲಾಖೆಯಲ್ಲೂ ಅಷ್ಟೇ. ಕೆಲವು ಸಾವಿರ ಹುದ್ದೆಗಳಿಗೆ ಕೋಟ್ಯಂತರ ಅರ್ಜಿಗಳು ಸಲ್ಲಿಕೆಯಾಗುತ್ತವೆ. 2025–2026ರಲ್ಲಿ ಆರ್‌ಆರ್‌ಬಿ ಎನ್‌ಟಿಪಿಸಿ ನೇಮಕಾತಿಯಲ್ಲಿ 8,868 ಹುದ್ದೆಗಳಿಗೆ 1 ಕೋಟಿ 20 ಲಕ್ಷ ಮಂದಿ ಅರ್ಜಿ ಸಲ್ಲಿಸಿದ್ದರು. ಆರ್‌ಆರ್‌ಬಿ ಗ್ರೂಪ್–ಡಿ ಹುದ್ದೆಗಳಿಗೆ 1 ಕೋಟಿ 21 ಲಕ್ಷದ 68 ಸಾವಿರ ಮಂದಿ ಅಪ್ಲಿಕೇಶನ್ ಹಾಕಿದ್ದರು. 2018ರಲ್ಲಿ 1 ಲಕ್ಷ ರೈಲ್ವೆ ಉದ್ಯೋಗಗಳಿಗೆ 2.5 ಕೋಟಿ ಮಂದಿ ಅರ್ಜಿ ಹಾಕಿದ್ದರು. ಈ ಪಟ್ಟಿಗೆ ಮತ್ತಷ್ಟು ಸೇರಿಸಬಹುದು, ಇರಲಿ.

ಉದ್ಯೋಗದಲ್ಲಿ ಸ್ಥಿರತೆ ಮತ್ತು ಭದ್ರತೆಯ ದೃಷ್ಟಿಯಿಂದ ಸರಕಾರಿ ಕೆಲಸಕ್ಕೆ ಸರಿಸಾಟಿ ಬೇರಾವುದೂ ಇಲ್ಲ. ನಿರ್ದಿಷ್ಟ ಅವಧಿಯ ಕೆಲಸ, ಪ್ರತಿಷ್ಠೆ, ವರ್ಕ್–ಲೈಫ್ ಬ್ಯಾಲೆನ್ಸ್ ಇರುತ್ತದೆ ಎಂಬುದೂ ಸರಕಾರಿ ಹುದ್ದೆ ಪಡೆಯಲು ಮುಖ್ಯ ಕಾರಣವಾಗಿದೆ. ಖಾಸಗಿ ವಲಯದಲ್ಲಿ ನಿಸ್ಸಂದೇಹವಾಗಿ ಇಂಥ ಜಾಬ್ ಸೆಕ್ಯುರಿಟಿ ಇರುವುದಿಲ್ಲ. ಪೋಷಕರೂ ಸರಕಾರಿ ಹುದ್ದೆಯಲ್ಲಿರುವ ಅಳಿಯ ಬೇಕೆನ್ನುತ್ತಾರೆ. ವೈವಾಹಿಕ ವಿಚಾರದಲ್ಲಿ ಸರಕಾರಿ ಉದ್ಯೋಗಿಗೆ ಅಡ್ವಾಂಟೇಜ್ ಜಾಸ್ತಿ. ಹಳೆಯ ಪಿಂಚಣಿ ಯೋಜನೆ ಇದ್ದಾಗ ಸರಕಾರಿ ನೌಕರಿ ಇನ್ನಷ್ಟು ಆಕರ್ಷಕವಾಗಿತ್ತು. ನಿವೃತ್ತರಾದ ಮೇಲೆ ಕೂಡ ಸಮೃದ್ಧ ಮತ್ತು ಖಾತರಿಯ ಪಿಂಚಣಿ ಸಿಗುತ್ತಿತ್ತು. ಈಗ ಬಹುತೇಕ ಕಡೆ ಹಳೆಯ ಪಿಂಚಣಿ ಸ್ಕೀಮ್ ಇಲ್ಲದಿದ್ದರೂ, ಸರಕಾರಿ ಹುದ್ದೆಯ ಆಕರ್ಷಣೆ ಕಡಿಮೆಯಾಗಿಲ್ಲ. ಹಣದುಬ್ಬರ ಏರಿದಾಗಲೆಲ್ಲ ಟಿಎ–ಡಿಎ ಕೂಡ ಹೆಚ್ಚುತ್ತಿರುತ್ತದೆ. ಬ್ಯಾಂಕ್‌ಗಳೂ ಸಾಲ ವಿತರಣೆಯ ವೇಳೆ, ಸರಕಾರಿ ಉದ್ಯೋಗಿಗಳಿಗೆ ಮೊದಲ ಮಣೆ ಹಾಕುತ್ತವೆ. ಎನ್‌ಪಿಎಸ್ ಯೋಜನೆಯ ಪಿಂಚಣಿ ಇದ್ದೇ ಇರುತ್ತದೆ. ಜತೆಗೆ ಇತರ ಬೆನಿಫಿಟ್‌ಗಳ ಗೊಂಚಲೇ ಸಿಗುತ್ತವೆ. ಈ ಎಲ್ಲ ಕಾರಣಗಳಿಂದಾಗಿ ಸಕ್ಸಸ್ ರೇಟ್ 1 ಪರ್ಸೆಂಟಿಗಿಂತಲೂ ಕಡಿಮೆ ಇದ್ದರೂ, ಲಕ್ಷಾಂತರ ಮಂದಿ ಸರಕಾರಿ ನೌಕರಿ ಗಿಟ್ಟಿಸಿಕೊಳ್ಳಲು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ವರ್ಷಗಟ್ಟಲೆ ತಯಾರಿ ಮಾಡುತ್ತಾರೆ. ಇದು ಹಣಕಾಸು ವೆಚ್ಚ, ಶ್ರಮ, ಸವಾಲುಗಳ ಸರಮಾಲೆಯನ್ನೇ ತಂದಿಡುತ್ತದೆ. ಇನ್ನು ಯಾವೆಲ್ಲ ಇಲಾಖೆಗಳಲ್ಲಿ ಲಂಚಾವತಾರ ಇರುತ್ತದೆ ಎಂಬುದನ್ನು ವಿವರಿಸಬೇಕಿಲ್ಲ.

ಇಲ್ಲೊಂದು ಕಟುವಾಸ್ತವ ಇದೆ. ಮೊದಲನೆಯದಾಗಿ ರಾಜಕಾರಣಿಗಳೇನೋ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕೋಟ್ಯಂತರ ಉದ್ಯೋಗಗಳನ್ನು ಸೃಷ್ಟಿಸುವ ಭರವಸೆಗಳನ್ನು ನೀಡಬಹುದು. ಆದರೆ ಯಾವುದೇ ಪಕ್ಷ ಅಧಿಕಾರದಲ್ಲಿ ಇದ್ದರೂ, ಸರಕಾರಿ ಉದ್ಯೋಗಗಳಿಗೆ ಮಿತಿ ಇದ್ದೇ ಇರುತ್ತದೆ. ಇದು ಅತೀವ ವೆಚ್ಚದಾಯಕವಾದ್ದರಿಂದ ಆರ್ಥಿಕ ಇಲಾಖೆಯ ಅನುಮೋದನೆ ಸುಲಭವಾಗಿ ಸಿಗುವುದಿಲ್ಲ. ಯುಪಿಎಸ್‌ಸಿ ಮತ್ತು ಎಸ್‌ಎಸ್‌ಸಿ ವ್ಯವಸ್ಥೆಯಲ್ಲಿ ಸಕ್ಸೆಸ್ ರೇಟ್ 1 ಪರ್ಸೆಂಟ್‌ಗಿಂತಲೂ ಕಡಿಮೆ. ಅನೇಕ ಮಂದಿ 3–7 ವರ್ಷಗಳ ಕಾಲ ಮರಳಿ ಯತ್ನವನ್ನು ಮಾಡುತ್ತಿರುತ್ತಾರೆ. ಇದರಿಂದ ಅನುಭವಿ ಅರ್ಜಿದಾರರ ಬ್ಯಾಕ್‌ಲಾಗ್ ಸೃಷ್ಟಿಯಾಗುತ್ತದೆ. ಆಗ ಹೊಸಬರಿಗೆ ಮತ್ತಷ್ಟು ಕಷ್ಟವಾಗುತ್ತದೆ.

ಎರಡನೆಯದಾಗಿ ಯುವಜನರು ದುಡಿಯಬಹುದಾಗಿದ್ದ ಅಮೂಲ್ಯ 7–8 ವರ್ಷಗಳನ್ನು ಪರೀಕ್ಷೆಗಳಿಗೆ ತಯಾರಿಗೆ ವ್ಯಯಿಸುತ್ತಾರೆ. ಆಗ ಅವರ ಖರ್ಚುಗಳನ್ನು ಒಂದೋ ಪೋಷಕರು ವಹಿಸಬೇಕು, ಇಲ್ಲವೇ ಅವರವರೇ ಪಾರ್ಟ್ ಟೈಮ್ ಜಾಬ್‌ಗಳನ್ನು ಮಾಡುತ್ತಾ ನಿರ್ವಹಿಸಬೇಕು. ಇಷ್ಟೆಲ್ಲ ಕಸರತ್ತುಗಳ ನಡುವೆಯೂ ದುರದೃಷ್ಟವಶಾತ್ ಸರಕಾರಿ ಕೆಲಸ ಮರೀಚಿಕೆಯಾದರೆ, ಆಗ ಊರಿಗೆ ಮರಳುವುದು, ನೆಂಟರಿಗೆ ಮುಖ ತೋರಿಸುವುದೂ ಕಷ್ಟವಾಗುವಷ್ಟು ಕೀಳರಿಮೆ, ಖಿನ್ನತೆ ಉಂಟಾಗುವ ಸಾಧ್ಯತೆಯೂ ಇರುತ್ತದೆ. ಸಮಾಜ ಎಲ್ಲಿ ತನ್ನನ್ನು ಒಬ್ಬ ವಿಫಲ ವ್ಯಕ್ತಿ ಎಂಬಂತೆ ಅವಮಾನಿಸುತ್ತದೆಯೋ ಎಂಬ ಸಾಮಾಜಿಕ ಒತ್ತಡವೂ ಎದುರಾಗಬಹುದು. ನೇಮಕಾತಿ ಪ್ರಕ್ರಿಯೆಗಳೂ ವರ್ಷಗಟ್ಟಲೆ ಸಮಯ ತೆಗೆದುಕೊಳ್ಳಬಹುದು. ಪ್ರಿಲಿಮ್ಸ್–ಮೇನ್ಸ್ ಪರೀಕ್ಷೆಗಳು, ಸಂದರ್ಶನ, ದಾಖಲೆಗಳ ಪರಿಶೀಲನೆಗಳ ಬಳಿಕ ಫಲಿತಾಂಶ ಸಿಗುತ್ತದೆ. ಕೆಲವೊಮ್ಮೆ ಪ್ರಶ್ನೆಪತ್ರಿಕೆ ಸೋರಿಕೆ, ನೇಮಕಾತಿಯಲ್ಲಿ ಭ್ರಷ್ಟಾಚಾರ ಕೂಡ ನಡೆಯಬಹುದು. ಸರಕಾರಗಳೂ ಕಾಯಂ ಉದ್ಯೋಗಗಳನ್ನು ಕಡಿಮೆ ಮಾಡುತ್ತಾ, ಗುತ್ತಿಗೆ ಆಧಾರಿತ ನೇಮಕವನ್ನು ಹೆಚ್ಚಿಸಿವೆ. ಉದ್ಯೋಗಗಳ ಕೊರತೆಯಿಂದಾಗಿ ಉನ್ನತ ಶಿಕ್ಷಣ ಪಡೆದವರೂ ಕ್ಲರಿಕಲ್ ಜಾಬ್ ಮಾಡಬೇಕಾಗಿ ಬರಬಹುದು. ಈ ಎಲ್ಲ ಕಾರಣಗಳಿಂದಾಗಿ ಸರಕಾರಿ ನೌಕರಿ ಎಂದರೆ ಸ್ವರ್ಗಸದೃಶ ಎಂಬ ವೈಭವೀಕರಣವನ್ನು ಪೋಷಕರು ಮತ್ತು ಸಮಾಜ ಕೈಬಿಡುವುದು ಸೂಕ್ತ.

ಒಂದು ವೇಳೆ ಸರಕಾರಗಳು ಭಾರಿ ಸಂಖ್ಯೆಯಲ್ಲಿ ಹುದ್ದೆಗಳನ್ನು ಸೃಷ್ಟಿಸಿ, ನೇಮಕ ಮಾಡಿದರೆ ಏನಾಗುತ್ತದೆ? ವೆನಿಜುವೆಲಾದಲ್ಲಿ ಹಿಂದೊಮ್ಮೆ ಅಲ್ಲಿನ ಅಧ್ಯಕ್ಷ ಹ್ಯೂಗೊ ಚಾವೆಸ್ ಭಾರಿ ಸಂಖ್ಯೆಯಲ್ಲಿ ಸರಕಾರಿ ಹುದ್ದೆಗಳನ್ನು ಸೃಷ್ಟಿಸಿದ್ದರು. ಈಗ ಅಮೆರಿಕದ ಜೈಲುಪಾಲಾಗಿರುವ ನಿಕೋಲಸ್ ಮಡುರೊ ಕೂಡ ಅದನ್ನು ಮುಂದುವರಿಸಿದ್ದರು. ಇದರಿಂದ ವೆನಿಜುವೆಲಾದ ಆರ್ಥಿಕತೆ ದಿವಾಳಿಯಾಗಿತ್ತು. ಹಾಗಾದರೆ ಸರಕಾರಿ ಉದ್ಯೋಗಗಳು ಯಥಾರ್ಥವಾಗಿ ಯಾವಾಗ ಹೆಚ್ಚುತ್ತವೆ? ಈಗಿನ ಮುಕ್ತ ಮಾರುಕಟ್ಟೆ ಆಧರಿತ ಆರ್ಥಿಕತೆಯ ಸಂದರ್ಭದಲ್ಲಿ, ದೇಶದ ಇಕಾನಮಿ ಅಭಿವೃದ್ಧಿಯಾದಾಗ ಸರಕಾರಿ ಹುದ್ದೆಗಳೂ ಹೆಚ್ಚುತ್ತವೆ. ಆದರೆ ಇದಕ್ಕೆ ಸಾರ್ವಜನಿಕ ವೆಚ್ಚದ ಜತೆಗೆ ಖಾಸಗಿ ಬಂಡವಾಳ ಹೂಡಿಕೆಯೂ ಹೆಚ್ಚಬೇಕು. ಸರಕಾರವು ಉದ್ಯೋಗ ಸೃಷ್ಟಿ, ಆರ್ಥಿಕ ಪ್ರಗತಿಗೆ ಅಗತ್ಯವಿರುವ ನೀತಿಗಳನ್ನು ಜಾರಿಗೊಳಿಸಬೇಕು. ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು. ಆದ್ದರಿಂದಲೇ ಇನ್ಫೋಸಿಸ್ ಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ, ಭಾರತದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಮೊದಲಾದ ಗಣ್ಯರು, ''ಪ್ರತಿಯೊಬ್ಬರಿಗೂ ಉದ್ಯೋಗ ಸೃಷ್ಟಿಸುವುದು ಸರಕಾರದ ಕೆಲಸವಲ್ಲ, ಉದ್ಯಮಿಗಳು ಉದ್ಯೋಗಗಳನ್ನು ಸೃಷ್ಟಿಸುವಂತೆ ವ್ಯವಸ್ಥೆಯನ್ನು, ಅನುಕೂಲಗಳನ್ನು ಕಲ್ಪಿಸಿಕೊಡುವುದು ಸರಕಾರದ ಕೆಲಸ'' ಎನ್ನುತ್ತಾರೆ.

ಆದ್ದರಿಂದ ಸೆಲೆಕ್ಟಿವ್ ಆಗಿ ಸರಕಾರದ ನೇಮಕಾತಿಗಳನ್ನು ಪ್ರಶ್ನಿಸುವುದು ನ್ಯಾಯಸಮ್ಮತವಾದರೂ, ವಿಶಾಲಾರ್ಥದಲ್ಲಿ ಇದಕ್ಕೊಂದು ಭಿನ್ನ ಆಯಾಮ ಇರುವುದನ್ನು ಮನನ ಮಾಡಿಕೊಳ್ಳಬೇಕು. ಹಾಗಾದರೆ ಸರಕಾರಗಳ ಪಾತ್ರವೇನು? ನೀತಿಗಳಲ್ಲಿ ಸುಧಾರಣೆಯ ಮೂಲಕ ಖಾಸಗಿ ವಲಯದ ಉದ್ದಿಮೆ, ಸ್ಟಾರ್ಟಪ್, ರಫ್ತು, ವಿದೇಶಿ ನೇರಹೂಡಿಕೆಗೆ ಉತ್ತೇಜಿಸುವುದು, ಮೂಲಸೌಕರ್ಯ ಕಲ್ಪಿಸುವುದು. ಉದ್ಯೋಗ ಸೃಷ್ಟಿಯಲ್ಲಿ ಸರಕಾರಿ–ಖಾಸಗಿ ವಲಯದ ಬ್ಯಾಲೆನ್ಸ್ ಮುಂತಾದವು ಅಗತ್ಯ. ನೀವು ಎಂಪ್ಲಾಯೀಸ್ ಪ್ರಾವಿಡೆಂಡ್ ಫಂಡ್ ಆರ್ಗನೈಸೇಷನ್‌ನ ಮಾಸಿಕ ಪೇರೋಲ್ ಅಂಕಿ–ಅಂಶಗಳನ್ನು ಗಮನಿಸಿದರೆ, ಖಾಸಗಿ ವಲಯದ ಔಪಚಾರಿಕ ಉದ್ಯೋಗಗಳು ಹೆಚ್ಚುತ್ತಿರುವುದನ್ನು ಗಮನಿಸಬಹುದು. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಗುಜರಾತ್, ಹರಿಯಾಣ, ದಿಲ್ಲಿ, ಉತ್ತರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು 'ಇಪಿಎಫ್‌ಒ'ದ ಪೇರೋಲ್ ಡೇಟಾ ಹೆಚ್ಚಳಕ್ಕೆ ಗಣನೀಯ ಕೊಡುಗೆ ಸಲ್ಲಿಸಿವೆ. 20 ಅಥವಾ ಹೆಚ್ಚು ಉದ್ಯೋಗಿಗಳನ್ನು ಒಳಗೊಂಡಿರುವ ಖಾಸಗಿ ಸಂಸ್ಥೆಗಳು ಇಪಿಎಫ್‌ಒದಲ್ಲಿ ನೋಂದಣಿಯಾಗಬೇಕು. ಹೀಗಾಗಿ ಖಾಸಗಿ ಉದ್ಯೋಗಾವಕಾಶಗಳು ಹೆಚ್ಚುತ್ತಿರುವುದನ್ನು ಇಪಿಎಫ್‌ಒ ಡೇಟಾಗಳು ಬಿಂಬಿಸಿವೆ.

ಸ್ವಾತಂತ್ರ್ಯಪೂರ್ವದಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಕೃಷಿ ಪ್ರಮುಖವಾಗಿತ್ತು. ಸ್ವಾತಂತ್ರ್ಯನಂತರ ಉತ್ಪಾದನಾ ಕ್ಷೇತ್ರ ಚೇತರಿಸಿಕೊಂಡಿತು. 1991ರ ಆರ್ಥಿಕ ಸುಧಾರಣೆ ಬಳಿಕ ಐಟಿ–ಹಣಕಾಸು ಮತ್ತು ಹೆಲ್ತ್‌ಕೇರ್ ವಲಯಗಳಲ್ಲೂ ಕೆಲಸಗಳು ಹೆಚ್ಚಿದವು. 21ನೇ ಶತಮಾನದಲ್ಲಿ ಟೆಕ್ ಕ್ರಾಂತಿಯಿಂದ ಭಾರತವು 'ಗ್ಲೋಬಲ್ ಐಟಿ ಹಬ್' ಆಗಿದೆ. ಈಗ ಡಿಜಿಟಲೀಕರಣದಿಂದ ನ್ಯೂ–ಏಜ್ ಸ್ಕಿಲ್‌ಗಳು ಉದ್ಯೋಗ ಸೃಷ್ಟಿಸುತ್ತಿವೆ!

ಭಟ್ಟರ್ ಸ್ನಾಚ್

- **ರವೀಂದ್ರ ಶಾಬಾದಿ, ಧಾರವಾಡ**
ಭಟ್ರೇ, ನಮ್ಮ ಮುಜರಾಯಿ ಮಂತ್ರಿ ಯಾರು ಅಂತ ಗೊತ್ತಾ?
- **ಕಂಡಕಂಡ ದೇವಸ್ಥಾನಗಳಿಗೆ ಹೋಗೋದನ್ನು ನೋಡಿ ಅನೇಕರು ಡಿಕೆಶಿ ಅಂತ ಭಾವಿಸಿದ್ದರಂತೆ!**

- **ಸಂದೀಪ ಯಾವಗಲ್, (ಇಮೇಲ್ ಮೂಲಕ)**
ಭಟ್ರೇ, ಸಿದ್ದರಾಮಯ್ಯನವರು ಬದಲಾಗ್ತಾರಾ?
- **ಇಷ್ಟು ವಯಸ್ಸಾದ ಬಳಿಕ ಬದಲಾಗಲಾರರು ಅನಿಸುತ್ತೆ!**

- **ಮಲ್ಲಿಕಾ, (ಇಮೇಲ್ ಮೂಲಕ)**
ಭಟ್ರೇ, ರೆಡ್ಡಿ-ರಾಮುಲು ಇಬ್ಬರೂ ತಬ್ಬಿಕೊಳ್ಳುವಷ್ಟು ಸ್ನೇಹಿತರಾಗಿದ್ದಾರಂತೆ?
- **ಅವರಿಬ್ಬರೂ ತಬ್ಬಿಕೊಂಡರೆ ಅದು ಸ್ನೇಹ ಅಲ್ಲ!**

- **ಸಂತೋಷ ಗುರುಪಾದ, ಹಾವೇರಿ**
ಭಟ್ರೇ, ನನಗೊಂದು ಗೌರವ ಡಾಕ್ಟರೇಟ್ ಬೇಕಾಗಿದೆ, ಎಲ್ಲಿ ಸಿಗಬಹುದು?
- **'ಗೌರವ ಡಾಕ್ಟರೇಟ್‌ಗೆ ಇಲ್ಲಿ ಸಂಪರ್ಕಿಸಿ' ಎಂದು ಲೋಕಭವನದಲ್ಲಿ ಸದ್ಯದಲ್ಲಿಯೇ ಬೋರ್ಡ್ ಹಾಕ್ತಾರಂತೆ!**

- **ಶಿವಾಜಿ ಮೌನೇಶ, ಬೆಂಗಳೂರು**
ಭಟ್ರೇ, ಸ್ವಾಮೀಜಿಗಳು ಮನುಷ್ಯರಾ, ದೇವರಾ?
- **ಪಾದಪೂಜೆ ಮಾಡಿಸಿಕೊಳ್ಳುವಾಗಲೆಲ್ಲ ತಾನು ದೇವರು ಅಂತ ಸಾಣೇಹಳ್ಳಿ ಸ್ವಾಮೀಜಿ ಭಾವಿಸಿದ್ದರಂತೆ!**

- **ಸಿ.ಕೃಷ್ಣ, ಕಿರ್ಲೋಸ್ಕರ್ ನಗರ**
ಭಟ್ರೇ, ಈಗ ಮನೆಯಲ್ಲಿ ಯಾವ ವಿಷಯಕ್ಕೆ ಜಗಳ ಆಗುವುದಿಲ್ಲ?
- **ರಿಮೋಟ್‌ಗಾಗಿ!**

- **ನಿರ್ಮಲಾ ಶ್ರೀಧರ, ಭದ್ರಾವತಿ**
ಭಟ್ರೇ, ದೇವರಿಲ್ಲದಿದ್ದರೂ ಪರವಾಗಿಲ್ಲ ಎಂದು ಯಾರಾದರೂ ಹೇಳ್ತಾರಾ?
- **ಹೇಳಬಹುದು, ಆದರೆ 'ವೈ-ಫೈ ಇಲ್ಲದಿದ್ದರೆ ಪರವಾಗಿಲ್ಲ' ಎಂದು ಹೇಳುವವರನ್ನು ನಾನು ನೋಡಿಲ್ಲ!**

- **ನಾಗರಾಜ ದೀಕ್ಷಿತ, ಹರಿಹರ**
ಭಟ್ರೇ, ಗುಂಡು ಹಾಕಿದ್ರೆ ಔಟ್ ಆಗಬೇಕು ಅಂತಾನಲ್ಲ?
- **ಪೆದ್ದ, ನಾಟ್ ಔಟ್ ಆಗಬೇಕು!**

- **ಚಂದ್ರು, ಬ್ರಹ್ಮಾವರ**
ಭಟ್ರೇ, ರಾಹುಲ್ ಗಾಂಧಿಯನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲವಲ್ಲ?
- **ಮೋದಿಯವರೊಬ್ಬರನ್ನು ಬಿಟ್ಟು!**

- **ವಿ.ಕೆ.ಶರತ್, ಮಂಡ್ಯ**
ಭಟ್ರೇ, ಆಗಾಗ ವಕ್ಕರಿಸುತ್ತಾನೆ ಅಂದ್ರೆ ಏನು?
- **ಪ್ರಕಾಶ ರಾಜ್ ಕುರಿತು ಹಾಗೆ ಹೇಳಿದ್ನಾ ಅಂತ ವಿಚಾರಿಸಬೇಕಿತ್ತು!**

- **ಪಿ.ಚೈತ್ರ, ಬೆಂಗಳೂರು**
ಭಟ್ರೇ, ನೀವು ಇಷ್ಟೊಂದು ಸುತ್ತುತ್ತೀರಲ್ಲ, ನಿಮಗೆ ಯಾರು ಸ್ಫೂರ್ತಿ?
- **'ತಿರುಗಿ ಕೆಟ್ಟೋರಿಲ್ಲ' ಎಂಬ ಅನುಭವದ ನುಡಿ!**

ಪುನರ್ಜನ್ಮ ಪಡೆದ ಒಂದು ಗೊಂಡಾರಣ್ಯ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಇಂದಿನ 'ಆಧುನಿಕ' ಯುಗದಲ್ಲಿ, ಅರಣ್ಯಗಳ ವಿಚಾರಕ್ಕೆ ಬಂದಾಗ, ಎಲ್ಲಿ ಕಂಡರೂ ಅರಣ್ಯ ನಾಶ, ಮರಗಳ ನಾಶ, ನೆಡುತೋಪು ನಾಶಗಳೇ ಕಾಣಿಸುತ್ತಿವೆ. ದಟ್ಟವಾದ ಅರಣ್ಯವನ್ನು ತೆಳುಮಾಡುವುದು, ತೆಳುವಾದ ಅರಣ್ಯವನ್ನು ಬೋಳು ಮಾಡುವುದು, ಹೊಲ ಗದ್ದೆಗಳ ಅಂಚಿನಲ್ಲಿರುವ ಅರಣ್ಯ ಪ್ರದೇಶವನ್ನು ಸಾಗುವಳಿಗೆ ಒಳಪಡಿಸುವ ಮೂಲಕ ಅಲ್ಲಿನ ಜೀವ ವೈವಿಧ್ಯವನ್ನು ನಾಶಮಾಡುವುದು ಮೊದಲಾದ ಚಟುವಟಿಕೆಗಳು ಬಹಳ ಮಾಮೂಲು ಎನಿಸುವ ಸುದ್ದಿಗಳಾಗಿವೆ. ನಮ್ಮ ರಾಜ್ಯದ ಸುದ್ದಿಗಳನ್ನೇ ಗಮನಿಸಿದರೆ, ಕೆರೆಗಳ ಸುತ್ತಲಿನ ಬಫರ್ ಜೋನ್ ಅನ್ನು ಸರಕಾರದ ಇಲಾಖೆಗಳೇ ಕಡಿಮೆ ಮಾಡಿ, ಆ ಮೂಲಕ ಕೆರೆಗಳ ಅಂಚಿನಲ್ಲಿ ಬೆಳೆದಿರುವ ಗಿಡ ಮರಗಳು, ಹುಲ್ಲು ಸಸ್ಯಗಳು, ಕುರುಚಲು ಕಾಡನ್ನು ನಾಶಮಾಡಲು ಅನುಮತಿ ನೀಡುವ ಕೆಲಸ ನಡೆಯುತ್ತಿದೆ. ಅತ್ತ, ಪರಿಸರ ಸೂಕ್ಷ್ಮ ಜಾಗ ಎನಿಸಿರುವ, ವಿಶ್ವಪರಂಪರೆಯ ತಾಣದ ಭಾಗವಾಗಿರುವ ಆಗುಂಬೆಯ ಸುತ್ತಲಿರುವ ನಿತ್ಯಹರಿದ್ವರ್ಣ ಕಾಡನ್ನು ನಾಶಮಾಡಲು ಸುರಂಗ ತೋಡುವ ಪ್ರಸ್ತಾಪವನ್ನು ಪಕ್ಷಭೇದವಿಲ್ಲದೇ ರಾಜಕೀಯ ನಾಯಕರು ಬೆಂಬಲಿಸುತ್ತಿರುವಂತೆ ಕಾಣಿಸುತ್ತಿದೆ. ಆಗುಂಬೆಯ ಸುತ್ತಲಿನ ದಟ್ಟ ಅರಣ್ಯವನ್ನು ನಾಶ ಮಾಡಿದರೆ, ಮುಂದಿನ ದಶಕಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಪರಿಸರದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಬಹುದು ಎಂಬ ವಿಚಾರದ ಸ್ಥೂಲ ಅರಿವಿದ್ದರೂ, ಅಲ್ಲಿನ ಅರಣ್ಯ ನಾಶಕ್ಕೆ ಪ್ರಬಲವಾದ ನೆಪಗಳನ್ನು ಮುಂದೊಡ್ಡಿ, ಕೋಟಿಗಟ್ಟಲೆ ಅಂದಾಜು ವೆಚ್ಚದ 'ಕಾಮಗಾರಿ'ಗಳನ್ನು ಜಾರಿಗೆ ತರುವ ಪ್ರಯತ್ನ ನಡೆಯುತ್ತಿದೆ. ಈಗ ನಮ್ಮಲ್ಲಿ ಉಳಿದುಕೊಂಡಿರುವ ಅರಣ್ಯ, ಹುಲ್ಲುಗಾವಲು, ಕುರುಚಲು ಕಾಡು, ಬೆಟ್ಟಗುಡ್ಡಗಳ ಕಲ್ಲುಬಂಡೆಗಳ ನಡುವಿನ ಪರಿಸರ ಇವುಗಳನ್ನು ರಕ್ಷಿಸುವುದರ ಕುರಿತು 'ಪಠ್ಯ ಪುಸ್ತಕಗಳಲ್ಲಿ' ಪಾಠಗಳನ್ನು ಸೇರಿಸುವ ಕೆಲಸವಾಗುತ್ತಿರುವುದು ನಿಜ; ಆದರೆ, ನಿಜಜೀವನದಲ್ಲಿ ನಮ್ಮ ಸುತ್ತಲೂ ಇರುವ ಹಸಿರು ಕವಚ, ಗಿಡ, ಮರ, ಬಳ್ಳಿ, ಕುರುಚಲು ಕಾಡು, ಜೀವವೈವಿಧ್ಯಕ್ಕೆ ಆಸರೆ ನೀಡುವ ತಾಣಗಳ ನಾಶವೇ ಢಾಳಾಗಿ ಕಾಣಿಸುತ್ತಿದೆ.

ಇಂಥ ಸನ್ನಿವೇಶದಲ್ಲಿರುವ ನಾವು, ಒಂದು ಗೊಂಡಾರಣ್ಯಕ್ಕೆ ಮರುಹುಟ್ಟು ನೀಡಿದ ಅಭೂತಪೂರ್ವ ಪ್ರಕ್ರಿಯೆಯನ್ನು ಪುಸ್ತಕಗಳಲ್ಲಿ, ಬರಹಗಳಲ್ಲಿ ಓದುವ ಮೂಲಕವಾದರೂ, ತುಸು ಸಮಾಧಾನ ಹೊಂದಬೇಕು ಮತ್ತು ಕೆಲವು ಬಾರಿ ಅಂಥ ಪುನರ್ಜನ್ಮ ಪಡೆದ ಗೊಂಡಾರಣ್ಯಗಳು ನಮ್ಮ ನಾಡಿನ ಅರಣ್ಯಗಳ ರಕ್ಷಣೆಗೆ ಸ್ಫೂರ್ತಿ ತುಂಬಬಲ್ಲವು ಎಂದು ಸದಾಶಯವನ್ನೂ (ಇದು ಅಲ್ಪ ತೃಪ್ತಿ ಎನಿಸಿದರೂ) ಇಟ್ಟುಕೊಳ್ಳಬಹುದು! ದೂರದ ಆಸ್ಟ್ರೇಲಿಯಾದಲ್ಲಿ ಒಂದು ಗೊಂಡಾರಣ್ಯಕ್ಕೆ ಪುನರ್ಜನ್ಮ ನೀಡಲಾಗಿದೆ.

ಪೂರ್ತಿ ನಾಶವಾಗಿದ್ದ ಅಂಥದೊಂದು ಅರಣ್ಯಕ್ಕೆ ಪುನರ್ಜನ್ಮ ನೀಡಿದ್ದು ಒಬ್ಬ ಮಹಿಳೆ ಎಂಬ ವಿಚಾರವೂ ಬೆರಗನ್ನು ಮೂಡಿಸುತ್ತದೆ. ಬೇರೆ ಬೇರೆ ಉದ್ದೇಶಗಳಿಗೆ, ಕೃಷಿಯ ಪ್ರಯತ್ನಗಳಿಗೆ ಒಳಗಾಗಿದ್ದ ಕಾಡಿನ ಭಾಗವು, ಸಂಪೂರ್ಣ ಬರಡು ಸ್ವರೂಪವನ್ನು ಪಡೆದಿದ್ದ ಸಂದರ್ಭದಲ್ಲಿ, ಆ ವಿಶಾಲ ಜಾಗವನ್ನು ಖರೀದಿಸಿ, ಅಲ್ಲಿ ಮೊದಲಿದ್ದಂತೆ ಕಾಡನ್ನು ಬೆಳೆಸುವ ಪ್ರಯತ್ನ ಮಾಡಿದಾಕೆ, ಜರ್ಮೇನ್ ಗ್ರಿಯರ್ (ಜನನ 1939) ಎಂಬ ಮಹಿಳೆ. ಈಕೆ ಜನಿಸಿದ್ದು ಆಸ್ಟ್ರೇಲಿಯಾದಲ್ಲಿ. ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ 1967ರಲ್ಲಿ ಪಿಎಚ್‌ಡಿ ಮಾಡಿದ ನಂತರ, ವಾರ್ವಿಕ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯ ಮತ್ತು ತೌಲನಿಕ ಅಧ್ಯಯನದಲ್ಲಿ ಅಧ್ಯಾಪನ ಮಾಡುತ್ತಿದ್ದವಳು. ಸ್ತ್ರೀವಾದವನ್ನು ಬೇರೊಂದು ಆಯಾಮದಲ್ಲಿ ಮುಂಚೂಣಿಗೆ ತಂದಿದ್ದು ಈಕೆಯ ಆರಂಭಿಕ ಸಾಹಸಗಳಲ್ಲಿ ಒಂದು. 1970ರ ದಶಕದಲ್ಲಿ ತಾನು ಪ್ರಕಟಿಸಿದ 'ಫಿಮೇಲ್ ಎನುಚ್' ಪುಸ್ತಕದಿಂದಾಗಿ ಹೆಸರುವಾಸಿಯಾದಾಕೆ. ಆನಂತರ ಕೆಲವು ಸ್ತ್ರೀ ಕೇಂದ್ರಿತ ಕೃತಿಗಳನ್ನು ಪ್ರಕಟಿಸಿದ್ದುಂಟು. 2004ರಲ್ಲಿ 'ಷೇಕ್ಸ್ ಪಿಯರ್ಸ್ ವೈಫ್' ಎಂಬ ವಿನೂತನ ಗ್ರಂಥದಲ್ಲಿ ಆ ಪ್ರಸಿದ್ಧ ನಾಟಕಕಾರನ ಪತ್ನಿಯ ದಿನಚರಿ ಹೇಗಿರಬಹುದು ಎಂಬ ಸಂಶೋಧನಾತ್ಮಕ ಚಿಂತನೆಯನ್ನು ತೋಡಿಕೊಂಡಿದ್ದು ವಿಮರ್ಶಾ ವಲಯದ ಗಮನಸೆಳೆದಿತ್ತು.

ಅಂಥ ಚಿಂತಕರ, ಬರಹಗಾರರ ವಲಯದಲ್ಲಿ ಪ್ರಸಿದ್ಧಿ ಪಡೆದಿದ್ದ ಈ ದಿಟ್ಟ ಲೇಖಕಿ, ಒಂದು ದಿನ ತನ್ನ ಬದುಕಿನ ದಿಕ್ಕನ್ನೇ ಬದಲಿಸುವ ನಿರ್ಧಾರ ತೆಗೆದುಕೊಂಡಳು! ತಾನು ಜನಿಸಿದ ದೇಶಕ್ಕೆ ವಾಪಸಾಗಿ, ಪರಿಸರ ಚಿಂತನೆ ಮತ್ತು ಪರಿಸರ ರಕ್ಷಣೆಯಲ್ಲಿ ಆಕೆ ತೊಡಗಿಕೊಂಡಿದ್ದೇ ಒಂದು ವಿಸ್ಮಯ.

ಬರವಣಿಗೆ, ಸ್ತ್ರೀ ವಾದ ಮತ್ತು ಹೋರಾಟದಲ್ಲಿ ತೊಡಗಿಕೊಂಡಿದ್ದ ಜರ್ಮೇನ್ ಗ್ರಿಯರ್, ವಿದೇಶವನ್ನು ತೊರೆದು, ಆಸ್ಟ್ರೇಲಿಯಾ ದೇಶಕ್ಕೆ ವಾಪಸಾಗಿ, ತನ್ನ 62ನೆಯ ವಯಸ್ಸಿನಲ್ಲಿ ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ಪ್ರದೇಶದ ಮಳೆಕಾಡಿನ ನಡುವೆ ಪಾಳುಬಿದ್ದಿದ್ದ 60 ಹೆಕ್ಟೇರ್ ಜಮೀನನ್ನು ಕೊಂಡು, ಆ ಜಾಗವು ಪುನಃ ತನ್ನ ಮೂಲಸ್ವರೂಪವಾದ

ಮಳೆಕಾಡಿನ ಸ್ವರೂಪವನ್ನು ಪಡೆದುಕೊಳ್ಳಲಿ ಎಂದು ಪ್ರಾಮಾಣಿಕ ಪ್ರಯತ್ನ ನಡೆಸಿದಳು. ತನ್ನ ಜೀವಿತಾವಧಿಯ ಸಂಪಾದನೆಯನ್ನು ಬಳಸಿ, ಆ ಪಾಳುಜಾಗವನ್ನು ಖರೀದಿಸಿದಳು. ಲಂಟಾನಾ ಮತ್ತಿತರ ಕಳೆಗಳು ದಂಡಿಯಾಗಿ ಬೆಳೆದುಕೊಂಡಿದ್ದ ಆ ಜಾಗವು ತನ್ನ ಮೂಲರೂಪವಾದ ಮಳೆಕಾಡು ಅಥವಾ ಪುರಾತನ ಗೊಂಡ್ವಾನಾ ರೂಪವನ್ನು ತಳೆಯಲಿ ಎಂದು ಆಶಿಸಿದ ಆಕೆಯ ಕನಸನ್ನು ಕಂಡು ಆಕೆಯ ಕೆಲವು ಹಿತೈಷಿಗಳು ಕನಿಕರಿಸಿದ್ದೂ ಉಂಟು. ಇನ್ನು ಕೆಲವರು ಪ್ರೋತ್ಸಾಹ ರೂಪದಲ್ಲಿ ಬೆನ್ನು ತಟ್ಟಿದ್ದೂ ಉಂಟು. ಇದೊಂದು ದುಃಸ್ಸಾಹಸ ಎಂದು ಬೆದರಿಸಿದವರೂ ಇದ್ದರು.

ಬಾಳೆ ಮತ್ತು ಇತರ ಬೆಳೆಗಳ ಕೃಷಿಗಾಗಿ ಆ ಜಾಗದಲ್ಲಿ ಅಪಾರ ಪ್ರಮಾಣದ ಗೊಬ್ಬರ ಮತ್ತು ಕೀಟನಾಶಕಗಳನ್ನು ಸುರಿಯಲಾಗಿತ್ತು; ಹಲವು ವರ್ಷಗಳ ನಂತರ ಭೂಮಿ ನಂಜಾಗಿ, ಇಳುವರಿ ಕಡಿಮೆಯಾದಾಗ, ಆ ಜಾಗವನ್ನು ಪಾಳುಬಿಟ್ಟಿದ್ದರು. ಅದೊಂದು ರಾಸಾಯನಿಕ ಮರುಭೂಮಿಯ ರೀತಿ ಇತ್ತು. ಅಲ್ಲಿ ಬೆಳೆದಿದ್ದ ಕಳೆಗಳನ್ನು ಸವರಿ, ಕೆಲವು ಸಸ್ಯಶಾಸ್ತ್ರಜ್ಞರ ಸಲಹೆಯ ಮೇರೆಗೆ ಸ್ಥಳೀಯ ಸಸ್ಯಗಳನ್ನು ನೆಟ್ಟು ಬೆಳೆಸಲು ಆಕೆ ಗಂಭೀರ ಯತ್ನ ನಡೆಸಿದಳು. ಅಂಥ ಪ್ರದೇಶವನ್ನು ಅದರಷ್ಟಕ್ಕೇ ಬಿಟ್ಟುಬಿಟ್ಟರೆ, ಪುನಃ ಕಾಡು ತನ್ನ ಮೂಲರೂಪವನ್ನು ಕಂಡುಕೊಳ್ಳುತ್ತದೆ ಎಂದು ಯಾರೋ ನೀಡಿದ ಸಲಹೆಯನ್ನು ಕೇಳಿ ಅಂಥ ಪ್ರಯತ್ನವನ್ನು ಸಹಾ ಮಾಡಿದಳು.

ಪಾಳು ಬಿದ್ದಿದ್ದ ಆ ಜಾಗವನ್ನು ಹಾಗೆಯೇ ಬಿಟ್ಟಾಗ, ಒಂದು ದಶಕದ ನಂತರ, ಅಲ್ಲಿ ಹಸಿರು ಚಿಗುರೊಡೆಯಿತು! ಮಳೆಕಾಡಿನಲ್ಲಿ ಸಹಜವಾಗಿ ಕಂಡುಬರುವ ಹಲವು ಸಸ್ಯಗಳು ಪುನರ್ಜನ್ಮ ಪಡೆದುಕೊಂಡವು! ಜರ್ಮೇನ್ ಗ್ರಿಯರ್ ಸಹೋದರಿ ಸಸ್ಯಶಾಸ್ತ್ರಜ್ಞೆ, ಆಕೆಯ ಸಹಾಯವೂ ದೊರಕಿತು ಮತ್ತು ಸ್ಥಳೀಯ ಸಸ್ಯಗಳ ಮತ್ತು ಅವಕ್ಕೆ ಸಂಬಂಧಿಸಿದ ಇತಿಹಾಸವನ್ನು ತಿಳಿಯಲು ಅನುಕೂಲವಾಯಿತು. 60 ಹೆಕ್ಟೇರ್ ಪ್ರದೇಶದಲ್ಲಿ ನಿಧಾನವಾಗಿ ಹಸಿರು ತುಂಬತೊಡಗಿತು.

ಆಗ ಒಂದು ಸಣ್ಣ ಪವಾಡವೂ ನಡೆಯಿತು! ಆ ಸುತ್ತಮುತ್ತಲಿರುವ ಮಳೆಕಾಡಿನಲ್ಲಿ ತೊಂದರೆಗೊಳಗಾದ ಪ್ರಾಣಿ-ಪಕ್ಷಿಗಳು ಈಕೆಯ 'ಸುರಕ್ಷಿತ' ಪ್ರದೇಶಕ್ಕೆ ಬಂದು ನೆಲೆಕಂಡುಕೊಳ್ಳಲು ಆರಂಭಿಸಿದವು. ಹೆಬ್ಬಾವುಗಳು, ಕಾಡುನಾಯಿಗಳು, ದೊಡ್ಡ ಜಾತಿಯ ಉಡಗಳು, ವಿವಿಧ ಹಕ್ಕಿಗಳು, ಕೀಟಗಳು, ಮರಕಪ್ಪೆಗಳು ಇಂಥ ಹಲವು ಜೀವಿಗಳು ಇವರ ಮಳೆಕಾಡಿನಲ್ಲಿ ತಮ್ಮ ಚಟುವಟಿಕೆಗಳನ್ನು ಆರಂಭಿಸಿದವು. ವಾಸ್ತವವೆಂದರೆ, ಈ 60 ಹೆಕ್ಟೇರಿನ ಸುತ್ತಮುತ್ತಲೂ ಹರಡಿಕೊಂಡಿರುವುದು ಸಹಾ ಆಸ್ಟ್ರೇಲಿಯಾದ ಮಳೆಕಾಡುಗಳ ಪ್ರದೇಶವೇ. ಆದರೆ, ಆ ಸುತ್ತಮುತ್ತಲಿನ ಸಾವಿರಾರು ಹೆಕ್ಟೇರ್ ಪ್ರದೇಶವನ್ನು ಆಧುನಿಕ ಮಾನವನು 'ಅಭಿವೃದ್ಧಿ' ಪಡಿಸಲು ಪ್ರಯತ್ನಿಸಿದ್ದರಿಂದಾಗಿ, ಅಲ್ಲೆಲ್ಲಾ ಪರಿಸರ ನಲುಗಿತ್ತು.

'ಕಾಡಿನ ನಡುವೆ ದಿನ ಕಳೆಯಲು ಬನ್ನಿ' ಎಂದು ಪ್ರಚಾರ ಮಾಡುತ್ತಿದ್ದ ಅಲ್ಲಿನ ಹಲವು ರೆಸಾರ್ಟ್‌ಗಳನ್ನು ನಡೆಸುವವರು ಆರ್ಥಿಕ ಚಟುವಟಿಕೆಗೆ ಮತ್ತು ಬೇಗನೆ ಲಾಭವನ್ನು ತರಲು ಪೂರಕವಾದ ಕ್ರಮಗಳನ್ನು ಮಾತ್ರ ಪ್ರೋತ್ಸಾಹಿಸುತ್ತಿದ್ದರು. ಅಲ್ಲಿದ್ದ ದಟ್ಟವಾದ ಕಾಡನ್ನು ಸವರಿ, ಅಲ್ಲಿ ಬಾಳೆ ಮೊದಲಾದ ಆರ್ಥಿಕ ಬೆಳೆಗಳನ್ನು ಬೆಳೆದಿದ್ದರು. ಆರ್ಥಿಕ ಲಾಭ ಮತ್ತು ತ್ವರಿತ ಬೆಳೆ ಬರಲು ಅಲ್ಲಿನ ನೆಲಕ್ಕೆ ನಾನಾ ರೀತಿಯ ವಿಷವಸ್ತುಗಳನ್ನು ಮತ್ತು ಕಳೆನಾಶಕಗಳನ್ನು ಸುರಿದಿದ್ದರು. ಕಳೆ ಅಥವಾ ಇತರ ಸಸ್ಯಗಳನ್ನು ನಾಶಪಡಿಸಲು, ವಿಯೆಟ್ನಾಂನಲ್ಲಿ ಯುದ್ಧದ ಸಮಯದಲ್ಲಿ ಅಲ್ಲಿನ ದಟ್ಟ ಕಾಡುಗಳ ಮೇಲೆ ಸುರಿದಿದ್ದ ಘನಘೋರ ವಿಷವನ್ನು ಸಹಾ ಹಾಕಿ ಅಲ್ಲಿನ ನೆಲವನ್ನು ಹಾಳುಗೆಡವಿದ್ದರು. ದೊಡ್ಡ ಗಾತ್ರದಲ್ಲಿ ಡೈರಿ ಫಾರ್ಮಿಂಗ್ ಮಾಡಿ, ಹಾಲು ಮತ್ತು ಇತರ ಉತ್ಪನ್ನಗಳನ್ನು ತಯಾರಿಸುವ ಭರದಲ್ಲಿ, ಪರಸರಕ್ಕೆ ಸಾಕಷ್ಟು ಧಕ್ಕೆ ತಂದಿದ್ದರು. ಇವೆಲ್ಲವೂ, ಆಸ್ಟ್ರೇಲಿಯಾದ ಬಿಳಿ ಜನರು ಅಥವಾ ಲೇಖಕಿಯ ಜನಾಂಗದವರು ತಮ್ಮ ವಸಾಹತುಶಾಹಿ ಧೋರಣೆಯಿಂದ ನಡೆಸಿದ ಅಚಾತುರ್ಯ ಅಥವಾ ಕುಕೃತ್ಯಗಳು!

ಕುಕೃತ್ಯ ಎಂಬ ಶಬ್ದ ಏಕೆಂದರೆ, ತನ್ನ ಕುಲದವರು ಸ್ಥಳೀಯ ಆದಿಮ ಜನಾಂಗದವರ ಮೇಲೆ ನಡೆಸಿದ ದಬ್ಬಾಳಿಕೆ ಮತ್ತು ದೌರ್ಜನ್ಯದ ಕುರಿತು ಲೇಖಕಿ ಜರ್ಮೇನ್ ಗ್ರಿಯರ್‌ಗೆ ಸಾಕಷ್ಟು ಪಶ್ಚಾತ್ತಾಪವಿದೆ. ಆ 60 ಹೆಕ್ಟೇರ್ ಪ್ರದೇಶದಲ್ಲಿ ಕಾಡು ಬೆಳೆಸಲು ಪಟ್ಟ ಸಾಹಸದ ಕುರಿತು ಆಕೆ ಬರೆದ ಪುಸ್ತಕ 'ವೈಟ್ ಬೀಚ್'- ಇದರಲ್ಲಿ ಕಾಡು ಬೆಳೆಸುವ ಸಾಹಸದ ಜತೆಯಲ್ಲೇ, ಆ ಸುತ್ತಲಿನಲ್ಲಿದ್ದ ಆಸ್ಟ್ರೇಲಿಯಾದ ಆದಿಮ ಜನಾಂಗದ ಕುರಿತು ವಿವರಗಳಿವೆ. 19ನೆಯ ಮತ್ತು 20ನೆಯ ಶತಮಾನದ ಉದ್ದಕ್ಕೂ, ಸ್ಥಳೀಯ ಜನರನ್ನು ಬಿಳಿಜನರು ಹತ್ತಿಕ್ಕಿದ ಇತಿಹಾಸದ ತುಣುಕುಗಳನ್ನು ಲೇಖಕಿಯು ತನ್ನ ಪುಸ್ತಕದುದ್ದಕ್ಕೂ ಅಲ್ಲಲ್ಲಿ ನೀಡುತ್ತಾಳೆ. ಡೈರಿ ಫಾರಂನ ಹೊರಭಾಗದಲ್ಲಿ ದೊರೆಯುತ್ತಿದ್ದ ಹಾಲಿನ ಕೆನೆಯನ್ನು ಕದ್ದು ನೆಕ್ಕಲು ರಾತ್ರಿ ಹೊತ್ತು ಬರುತ್ತಿದ್ದ ಹಸಿದಿದ್ದ ಅನಕ್ಷರಸ್ಥ ಸ್ಥಳೀಯರನ್ನು ಅದು ಹೇಗೆ ವಿಷಭರಿತ ಕೆನೆಯನ್ನು ಬಳಸಿ ಕೊಂದರು ಎಂಬ ವಿವರ, ಕ್ಷುಲ್ಲಕ ಕಾರಣಕ್ಕಾಗಿ ಸ್ಥಳೀಯ ಜನರನ್ನು ಗುಂಡಿಟ್ಟು ಕೊಂದ ವಿವರಗಳು ಈ ಪುಸ್ತಕದಲ್ಲಿವೆ. ಆದಿಮ ಜನಾಂಗ ಬಳಸುತ್ತಿದ್ದುದು ಬಿಲ್ಲು, ಬಾಣ, ಈಟಿ ಮೊದಲಾದ ಆಯುಧಗಳನ್ನು; ಬಿಳಿಜನರ ಕೈಯಲ್ಲಿತ್ತು ಬಂದೂಕು! ತಮಗೆ ಸೂಕ್ತ ಎನಿಸುವ ಕಾನೂನನ್ನು ಮಾಡಿಕೊಂಡು ಆದಿಮ ಜನರನ್ನು ಅವರು ಎರಡು ಶತಮಾನಗಳ ಕಾಲ ಬೇಟೆಯಾಡಿದರು. ಆಸ್ಟ್ರೇಲಿಯಾದ ಆದಿಮ ಜನರನ್ನು 'ಅಬಾರಿಜಿನಲ್' ಎನ್ನಲಾಗುತ್ತಿದ್ದು, ಅಲ್ಲಿನ ಪ್ರಾಣಿಗಳೊಂದಿಗೆ ಬದುಕಿಕೊಂಡಿದ್ದ ಅವರನ್ನು ನಾಮಾವಶೇಷ ಮಾಡಿ, ಬಿಳಿಜನರು ಅಲ್ಲಿ ನೆಲೆಯೂರಿದ ಇತಿಹಾಸದ ಕುರಿತು ಲೇಖಕಿಗೆ ಆಳವಾದ ಜ್ಞಾನವಿದ್ದು, 'ವೈಟ್ ಬೀಚ್' ಕೃತಿಯುದ್ದಕ್ಕೂ ಅದನ್ನು ಆಕೆ ಪ್ರಸ್ತಾಪಿಸುವುದು ಕುತೂಹಲಕಾರಿ.

ಅಂಥ ರಕ್ತಸಿಕ್ತ ಇತಿಹಾಸವನ್ನು ಪ್ರಸ್ತಾಪಿಸಲು ತನ್ನ ನೆಲದಲ್ಲಿ ಹೂತಿಟ್ಟುಕೊಂಡಿರುವ ಜಾಗವೊಂದನ್ನು ಖರೀದಿಸಿ, ಅಲ್ಲಿ ಪುನಃ ಗೊಂಡಾರಣ್ಯವನ್ನು ಬೆಳೆಸುವ ಪ್ರಯತ್ನ ಮಾಡಿರುವ ಲೇಖಕಿಯು, 'ಅಲ್ಲಿನ ಮೂಲನಿವಾಸಿಯು ಬಂದು ಈ ಜಾಗ ನಮ್ಮ ಕುಲಕ್ಕೆ ಸೇರಿದ್ದು, ನಮಗೆ ಬಿಟ್ಟುಕೊಡಿ' ಎಂದು ಹಕ್ಕೊತ್ತಾಯ ಮಾಡಿದರೆ, ಆ ಜಾಗವನ್ನು ಅವರಿಗೆ ಬಿಟ್ಟುಕೊಡಲು ತಾನು ತಯಾರಿದ್ದೇನೆ ಎಂದು ಒಂದೆಡೆ ಹೇಳಿಕೊಳ್ಳುತ್ತಾಳೆ. 60 ಹೆಕ್ಟೇರ್ ಜಾಗವನ್ನು ಲೇಖಕಿಯು ಹಣಕೊಟ್ಟು ಖರೀದಿಸಿದ್ದರೂ, ಅದರ ಒಡೆತನವನ್ನು ಆಕೆ ಇಟ್ಟುಕೊಳ್ಳಲು ಬಯಸಲಿಲ್ಲ. 'ಗೊಂಡ್ವಾನಾ ರೈನ್ ಫಾರೆಸ್ಟ್' ಎಂಬ ಟ್ರಸ್ಟ್ ರಚಿಸಿ, ಅದನ್ನು ಆಸ್ಟ್ರೇಲಿಯಾದ ಒಂದು ಲಾಭರಹಿತ ಟ್ರಸ್ಟ್ ಆಗಿಸಿ, ಆ ಮಳೆಕಾಡನ್ನು ಆ ಟ್ರಸ್ಟ್‌ಗೆ ವಹಿಸಿಕೊಟ್ಟಿದ್ದಾಳೆ.

ತನ್ನ 62ನೆಯ ವಯಸ್ಸಿನಲ್ಲಿ, ಆಸ್ಟ್ರೇಲಿಯಾದಲ್ಲಿ ಬರಡು ಭೂಮಿಯನ್ನು ಖರೀದಿಸಿ, ಗೊಂಡಾರಣ್ಯವನ್ನು ಮರುಬೆಳೆಸುವ ಆಕೆಯ ಪ್ರಯತ್ನ ಬಹು ವಿಶಿಷ್ಟ ಎಂಬುದರಲ್ಲಿ ಅನುಮಾನವಿಲ್ಲ. ಆಕೆಯು ತನ್ನ ಅನುಭವಗಳನ್ನು ನಿವೇದಿಸಿರುವ ಈ ಪುಸ್ತಕವನ್ನು ಓದಿದಾಗ, ಕಾಡಿನ ಕನಸು ಕಾಡುತ್ತದೆ, ಆದಿಮ ಜನರ ನೋವು ಮನತಟ್ಟುತ್ತದೆ. ಆಕೆ ಬೆಳೆಸಿದ ಅರಣ್ಯವು ಇಂದು ಜೀವವೈವಿಧ್ಯವನ್ನು ಪೋಷಿಸುವ ದಟ್ಟ ಕಾಡಿನ ರೀತಿ ಬೆಳೆದುಕೊಂಡಿದೆ; ಆಸ್ಟ್ರೇಲಿಯಾದಂಥ ಮುಂದುವರಿದ ದೇಶದಲ್ಲೂ, ಗೊಂಡಾರಣ್ಯವನ್ನು ಮತ್ತೆ ನಿರ್ಮಿಸಬಹುದು ಎಂದು ಆಕೆಯ ಸಾಹಸ ತೋರಿಸಿಕೊಟ್ಟಿದೆ.

ನಮ್ಮ ವಿಶ್ವದ ಕೆಲವು ಮುಂದುವರಿದ ದೇಶಗಳಲ್ಲಿ ಗೊಂಡಾರಣ್ಯಗಳನ್ನು ಕಾಪಿಟ್ಟುಕೊಳ್ಳಲು ಬಿಗಿಯಾದ ಕಾನೂನುಗಳನ್ನು ಮಾಡಿಕೊಂಡಿದ್ದಾರೆ. ನಮ್ಮ ದೇಶದಲ್ಲೂ ಹಲವು ಕಾನೂನುಗಳ ಮೂಲಕ ವನ್ಯಜೀವಿ ಮತ್ತು ಅರಣ್ಯಗಳನ್ನು ರಕ್ಷಿಸುವ ಪ್ರಯತ್ನಗಳು ನಡೆದಿವೆ. ಆದರೆ, ಈಚಿನ ವರ್ಷಗಳಲ್ಲಿ, ಅಧಿಕಾರದಲ್ಲಿರುವವರೇ ಅಂಥ ಕಾನೂನುಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆಯೇ ಎಂಬ ಸಂಶಯವೂ ಮೂಡುತ್ತಿದೆ. ವಿಶ್ವಪರಂಪರೆಯ ತಾಣ ಎನಿಸಿರುವ ಪಶ್ಚಿಮ ಘಟ್ಟಗಳ ಗರ್ಭದಲ್ಲಿರುವ ಆಗುಂಬೆಯ ಅರಣ್ಯದಲ್ಲಿ ಸುರಂಗ ತೋಡುವ ಪ್ರಯತ್ನವು ಇಂಥ ಸಂಶಯಕ್ಕೆ ಇಂಬುಕೊಡುತ್ತಿದೆ. ಅಭಿವೃದ್ಧಿಗಾಗಿ ಕಾಡನ್ನು ನಾಶಮಾಡುವಷ್ಟು ಸಿರಿವಂತರಾಗಿ ನಾವು ಇಂದು, ಈ 21ನೆಯ ಶತಮಾನದಲ್ಲಿ, ಉಳಿದಿಲ್ಲ; 20ನೆಯ ಶತಮಾನದಲ್ಲಿ ಅಭಿವೃದ್ಧಿಗಾಗಿ ಪರಿಸರ ನಾಶವಾಗಿತ್ತು; ಆದರೆ, ಪರಿಸರ ಸಂಪತ್ತಿನ ದೃಷ್ಟಿಯಲ್ಲಿ ನಾವು ಈಗ ಬಡವರು! ನಮ್ಮಲ್ಲಿ ಈಗ ಇರುವ ದಟ್ಟ ಅರಣ್ಯವನ್ನು ಪರಿಸರವನ್ನು, ಕಾಪಿಟ್ಟುಕೊಂಡು, ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಇಂದಿನ ಆಧುನಿಕ ಮಾನವನ ಕರ್ತವ್ಯವೇ ಸರಿ.

ಸಮಸ್ತ ಕಾರ್ಯಕರ್ತರ ಪಾಲಿಗೆ ಅವರು 'ಅಪ್ಪಾಜಿ' ಆದ ಕಥೆ!

ಗುಣಗಾನ
ಪ್ರತಾಪ್ ಸಿಂಹ
vveditoped@gmail.com

ಅವತ್ತು 2008ರ ಮೇ 30. ಹೆಗಲ ಮೇಲೆ ಹಸಿರು ಶಾಲು ಹಾಕಿಕೊಂಡು, 'ನಾನು ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ...' ಎನ್ನುತ್ತಾ ಅವರು ಪ್ರಮಾಣ ವಚನ ಸ್ವೀಕರಿಸುತ್ತಿದ್ದರೆ ವಿಧಾನಸೌಧದ ಎದುರು ನೆರೆದಿದ್ದ ಬಿಜೆಪಿಯ ಹತ್ತಾರು ಸಾವಿರ ಸಂಖ್ಯೆಯ ಕಾರ್ಯಕರ್ತರು, ಟಿವಿ ಮುಖಾಂತರ ವೀಕ್ಷಿಸುತ್ತಿದ್ದ ಬಿಜೆಪಿಯ ಲಕ್ಷಾಂತರ ಕಟ್ಟಾಳುಗಳು, ಹಿತೈಷಿಗಳು ತಾವೇ ಮುಖ್ಯಮಂತ್ರಿಯಾದೆವೇನೋ ಎಂಬಂತೆ ಸಂಭ್ರಮಿಸುತ್ತಿದ್ದರು. 2007ರಲ್ಲಿ ಎಂಟೇ ದಿನಕ್ಕೆ ಅಧಿಕಾರ ಕಳೆದುಕೊಂಡ ನೋವಿಗೆ ಅವತ್ತು ಮುಲಾಮು ಹಚ್ಚಿದಂತಿತ್ತು. ಪ್ರಮಾಣ ವಚನ ಸಮಾರಂಭಕ್ಕೆ ಈಗಿನ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರು, ಎಲ್.ಕೆ.ಆಡ್ವಾಣಿಯವರು, ಪ್ರಕಾಶ್ ಸಿಂಗ್ ಬಾದಲ್, ವೆಂಕಯ್ಯ ನಾಯ್ಡು ಸೇರಿದಂತೆ ಎಲ್ಲ ಗಣ್ಯಮಾನ್ಯರು ಬಂದಿದ್ದರು. ಉತ್ತರ ಭಾರತಕ್ಕೆ ಸೀಮಿತವಾಗಿದ್ದ ಬಿಜೆಪಿ ಮೊದಲ ಭಾರಿಗೆ ಯಡಿಯೂರಪ್ಪನವರ ಮೂಲಕ ದಕ್ಷಿಣದಲ್ಲಿ ಅಧಿಕಾರ ಹಿಡಿದಿತ್ತು. ಮುಖ್ಯಮಂತ್ರಿಯಾದ ನಂತರ ಯಾರಾದರೂ ಕಾರ್ಯಕರ್ತರು ಯಾವುದಾದರೂ ಕೆಲಸ, ಮನವಿ ಹಿಡಿದುಕೊಂಡು ಹೋದರೆ 'ಘಟನೋತ್ತರ ಆದೇಶಕ್ಕಾಗಿ ಕಡತ ಮಂಡಿಸುವುದು, ಬಿಎಸ್‌ವೈ'' ಎಂದು ಸಹಿ ಹಾಕುವಂಥ ದಾಢಸಿತನ ತೋರಿದರು!

ಯಡಿಯೂರಪ್ಪನವರು ಈಗ ಚುನಾವಣಾ ರಾಜಕಾರಣದಿಂದ ಹಿಂದೆ ಸರಿದು ರಾಜಕೀಯ ಸಂಧ್ಯಾಕಾಲದಲ್ಲಿದ್ದರೂ ನಮ್ಮ ಕಾರ್ಯಕರ್ತರು ಇವತ್ತಿಗೂ ಅವರನ್ನು ಪ್ರೀತಿಸುವುದಕ್ಕೆ, ಗೌರವಿಸುವುದಕ್ಕೆ ಇಂಥ ಅಸಂಖ್ಯ ಉದಾಹರಣೆಗಳೇ ಕಾರಣ. ಇಂಥ ಉದಾಹರಣೆಗಳಿಂದಲೇ ಕಾರ್ಯಕರ್ತರು ಅವರನ್ನು 'ಯಡಿಯೂರಪ್ಪ ಸಾಹೇಬರು' ಅನ್ನುವುದನ್ನು ಬಿಟ್ಟು 'ಅಪ್ಪಾಜಿ' ಎನ್ನಲಾರಂಭಿಸಿದರು. 'ಮೂಗಿನ ತುದಿಯೇ ಕೋಪ, ಪೆಟ್ಟು ಬಿದ್ದರೂ ಆಶ್ಚರ್ಯವಿಲ್ಲ, ಮೂಡು ನೋಡಿ ಮಾತನಾಡಬೇಕು. ರಾಜಕೀಯಕ್ಕೆ ಇವೆಲ್ಲ ಪೂರಕ ಅಂಶಗಳಲ್ಲ. ಆದರೂ ಹುಟ್ಟು ಕೋಪಿಷ್ಟನೊಬ್ಬ ಹೇಗೆ ಅಪ್ಪಾಜಿಯಾದರು?' ಎಂಬ ಪ್ರಶ್ನೆ ಕೆಲವರಲ್ಲಿ ಮೂಡಬಹುದು. ಅವರು ಶೀಘ್ರ ಕೋಪಿಯೇ ಹೊರತು ದೀರ್ಘದ್ವೇಷಿಯಲ್ಲ. ಕೋಪ ತಣಿದ ಕೂಡಲೇ ಕರೆಸಿ ಉಪ್ಪಿಟ್ಟು ತಿನ್ನಿಸಿ, ಕೆಲಸ ಮಾಡಿಕೊಟ್ಟು ಕಳುಹಿಸುತ್ತಿದ್ದರು. ಸಾರ್ವಜನಿಕವಾಗಿ ಅವರಲ್ಲಿ ಕಾಣುತ್ತಿದ್ದ ಸಿಟ್ಟು ಸಾತ್ವಿಕವಾಗಿರುತ್ತಿತ್ತು. ಯಡಿಯೂರಪ್ಪನವರ ಸಿಟ್ಟು ಸೆಡವುಗಳ ಹಿಂದೆ ಹೆಂಗರುಳೂ ಇದೆ. ಅದಕ್ಕೆ ಉದಾಹರಣೆ ಬೇಕಾ? ಬಡವನ ಮನೆಯಲ್ಲಿ ಹೆಣ್ಣುಮಗಳು ಹುಟ್ಟಿದರೆ ಅವಳು ಮನೆಗೆ ಭಾರವಲ್ಲ, ಅವಳು ಮನೆಯ 'ಭಾಗ್ಯಲಕ್ಷ್ಮಿ' ಎಂದು ಯೋಜನೆಯನ್ನೇ ತಂದರು. ಅವಳ ಭವಿಷ್ಯಕ್ಕಾಗಿ ಒಂದು ಲಕ್ಷ ರುಪಾಯಿ ಮುಡಿಪಾಗಿಡುವ ಯೋಜನೆ ಅದಾಗಿತ್ತು. ಆ ಹೆಣ್ಣುಮಗಳ ಶಾದಿ ಬಗ್ಗೆ ಯೋಚಿಸಲಿಲ್ಲ, ಅವಳನ್ನ ಶಾಲೆಗೆ ಸೇರಿಸಿ ವಿದ್ಯಾಲಕ್ಷ್ಮಿಯನ್ನಾಗಿ ಮಾಡುವುದಕ್ಕಾಗಿ ಸೈಕಲ್ ಕೊಟ್ಟರು. ರೆಕ್ಕೆ ಪುಕ್ಕ ಬಂದ ಮೇಲೆ ಗೂಡು ತೊರೆದು ಹಾರಿಹೋಗುವ ಹಕ್ಕಿಗಳಂತೆ ವೃದ್ಧ ತಂದೆ-ತಾಯಂದಿರನ್ನು ಊರಲ್ಲಿ ಬಿಟ್ಟು ಮಕ್ಕಳು ಪೇಟೆ ಸೇರಿದರೇನಂತೆ? ಆಳುವ ಪಕ್ಷಕ್ಕೆ ಹಿರಿಯರನ್ನು ಸಾಕಿ ಸಲಹುವ ಸಾಮಾಜಿಕ ಜವಾಬ್ದಾರಿಯಿದೆಯೆಂದು ಅರಿತು 'ಸಂಧ್ಯಾಸುರಕ್ಷಾ' ಯೋಜನೆಯನ್ನು ಜಾರಿಗೆ ತಂದರು. ವೃದ್ಧಾಪ್ಯ, ವಿಧವಾ ವೇತನವನ್ನು ಹೆಚ್ಚಿಸಿದರು. ನಲವತ್ತು ವರ್ಷ ದಾಟಿದ ಅವಿವಾಹಿತ ಹೆಣ್ಣುಮಕ್ಕಳನ್ನೂ ಪಿಂಚಣಿ ಯೋಜನೆಯ ವ್ಯಾಪ್ತಿಗೆ ತಂದರು.

ರೈತರ ವಿಷಯ ಬಂದರೆ ಅವರು ಮೃದುವಾಗುತ್ತಿದ್ದರು. ಉಪಮುಖ್ಯಮಂತ್ರಿಯಾಗಿದ್ದಾಗ ಸಾಲ ಮನ್ನಾ ಮಾಡಿದ್ದ ಅವರು, ಮುಖ್ಯಮಂತ್ರಿಯಾದ ನಂತರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿದ್ದ ಸಾಲವನ್ನೂ ಒಳಪಟ್ಟಂತೆ ರೈತರು ಪಾವತಿಸಬೇಕಿದ್ದ ಬಡ್ಡಿ ಮನ್ನಾ ಮಾಡಿದರು. ಕರೆಂಟಿನ ಬಿಸಿಯಲ್ಲಿ ರೈತನ ಬದುಕು ಮತ್ತು ಬೆಳೆ ಸುಟ್ಟು ಹೋಗಬಾರದೆಂದು ಭಾವಿಸಿ ಆತನ ಲಕ್ಷಾಂತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಿದರು. ಹಾಗೆಯೇ ರಾಜ್ಯದಲ್ಲಿರುವ ಬರಪೀಡಿತ ಪ್ರದೇಶಗಳಲ್ಲೆಲ್ಲ ಕುಡಿಯುವ ನೀರು ಪೂರೈಕೆ ಹಾಗೂ ಕೆರೆಗಳಿಗೆ ನೀರು ತುಂಬಿಸುವ ಕಾಯಕಕ್ಕೆ ಕೈಹಾಕಿದರು. ಜೋಳಕ್ಕೆ, ಭತ್ತಕ್ಕೆ ಕೇಂದ್ರ ಸರಕಾರ ಕೊಡುವ ಕನಿಷ್ಠ ಬೆಂಬಲ ಬೆಲೆಗೆ 150 ರು. ಸೇರಿಸಿಕೊಟ್ಟು ಖರೀದಿ ಮಾಡಿದರು.

ಕಳೆದ ಮೂರು ದಶಕಗಳನ್ನು ನೋಡಿದರೆ ನಮ್ಮ ರಾಜ್ಯದ ಒಂದಿಲ್ಲೊಂದು ಭಾಗಗಳು ಬರ, ನೆರೆಗೆ ತುತ್ತಾಗುತ್ತಲೇ ಬಂದಿವೆ. ಆದರೆ ಮುಖ್ಯಮಂತ್ರಿಯಾದವರಿಗೆ ದೂರದೃಷ್ಟಿ ಇರಬೇಕಾಗುತ್ತದೆ. ಎಸ್.ಎಂ. ಕೃಷ್ಣ ಅವರು ಮೂರು ವರ್ಷಗಳ ಸತತ ಬರ ಬಂದಾಗ ಅಂತರ್ಜಲ ಮಟ್ಟವನ್ನು ಹೆಚ್ಚಿಸಬೇಕಾದರೆ ಬೀಳುವ ಹನಿಹನಿ ನೀರನ್ನೂ ಕಾಪಿಟ್ಟುಕೊಳ್ಳಬೇಕೆಂದು ಭಾವಿಸಿ ಕೆರೆಗಳ ಪುನಶ್ಚೇತನಕ್ಕೆಂದೇ 'ಕಾಯಕ ಕೆರೆ' ಎಂಬ ಯೋಜನೆಯನ್ನು ಜಾರಿಗೆ ತಂದಿದ್ದರು. ಅದೇ ರೀತಿ, ಬರ ಎದುರಿಸುತ್ತಿದ್ದ ಚಾಮರಾಜನಗರ ಜಿಲ್ಲೆಯ ಕೆರೆಗಳು ನೀರಿಗಾಗಿ ಬಾಯ್ಬಿಟ್ಟುಕೊಂಡು ಕುಳಿತಿವೆ, ಬತ್ತಿದ ಕೆರೆಗಳಿಂದಾಗಿ ದನಕರುಗಳು ಬಳಲಿವೆ ಎಂಬುದನ್ನು ಕಂಡಕೂಡಲೇ 19 ಕೆರೆಗಳಿಗೆ ಕಬಿನಿಯಿಂದ ನೀರು ತುಂಬಿಸಲು 219 ಕೋಟಿ ರುಪಾಯಿಯನ್ನು ನಿಂತನಿಲುವಿನಲ್ಲೇ ಬಿಡುಗಡೆ ಮಾಡಿದವರು ಬಿಎಸ್‌ವೈ.

2013ರಲ್ಲಿ ಸಿದ್ದರಾಮಯ್ಯನವರ ಸರಕಾರ ಅಸ್ತಿತ್ವಕ್ಕೆ ಬಂದ ಪ್ರಾರಂಭದಲ್ಲಿ ಬೆಳಗಾವಿ ಅಧಿವೇಶನದಲ್ಲಿ ಕಬ್ಬುಬೆಳೆಗಾರ ವಿಠ್ಠಲ ಅರಭಾವಿ ಆತ್ಮಹತ್ಯೆ ಮಾಡಿಕೊಂಡ. ಅವರು ವಾರಕ್ಕೊಮ್ಮೆ ಬರುವ ಮೈಸೂರಿನ ಮಾರ್ಗಮಧ್ಯದಲ್ಲಿ ಸಿಗುವ ಮಂಡ್ಯದಲ್ಲಿ, ತಾನೇ ಬೆಳೆದ ಕಬ್ಬಿನ ಗದ್ದೆಗೆ ಬೆಂಕಿಕೊಟ್ಟು ರೈತ ಸುಟ್ಟುಕೊಂಡು ಸಾವಾದ. ಆದರೆ ಸಿದ್ದರಾಮಯ್ಯನವರ ಸ್ಪಂದನೆ ಹೇಗಿತ್ತು? ಅದಕ್ಕೂ ಮೊದಲು ಮುಖ್ಯಮಂತ್ರಿಯಾಗಿದ್ದ



ಬಿಎಸ್‌ವೈ ಕೂಡ ಕಬ್ಬು ಬೆಳೆಗಾರರ ಸಮಸ್ಯೆ ಎದುರಿಸಿದ್ದರು. ಕೂಡಲೇ ಕಬ್ಬಿನ ಕಾರ್ಖಾನೆಗಳ ಪುನಶ್ಚೇತನಕ್ಕೆ ಕೈಹಾಕಿದರು. ಬರ, ನೆರೆಯಂಥ ಪ್ರಕೃತಿ ವಿಕೋಪಗಳಾದರೆ ಕೂಡಲೇ ರೈತನ ಸಂಕಷ್ಟಕ್ಕೆ ಸ್ಪಂದಿಸಲು 500 ಕೋಟಿಯನ್ನು ಮೀಸಲಿಡುವ ಆವರ್ತ ನಿಧಿಯನ್ನು ಆರಂಭಿಸಿದರು.

ರಾಜಕೀಯವಾಗಿಯೂ ಸೋಷಿಯಲ್ ಎಂಜಿನಿಯರಿಂಗ್ ಅನ್ನು ಯಡಿಯೂರಪ್ಪನವರು 2008ರಲ್ಲಿ ಮುಖ್ಯಮಂತ್ರಿಯಾದ ಕೂಡಲೇ ಆರಂಭಿಸಿದ್ದರು. ಸಣ್ಣ ಸಣ್ಣ ಜಾತಿಗಳನ್ನೂ ಗುರುತಿಸಿ ಸಮಾವೇಶ ನಡೆಸಿದರು. ಅವರ ಬೇಡಿಕೆ, ನೋವನ್ನು ಆಲಿಸಿ ಸ್ಪಂದಿಸುವ ಕೆಲಸ ಮಾಡಿದರು. ಅವರಲ್ಲಿ ನಾಯಕತ್ವ ಬೆಳೆಸುವ ಕಾರ್ಯಕ್ಕೂ ಕೈಹಾಕಿದರು. ನಮ್ಮ ಹಿಂದುಳಿದ ಜಾತಿ, ವರ್ಗ, ಜನಾಂಗಗಳಲ್ಲಿ ಹೆಮ್ಮೆಯನ್ನು ಮೂಡಿಸಬೇಕೆಂದು ಕನಕ, ವಾಲ್ಮೀಕಿ ಜಯಂತಿಯನ್ನು ಆರಂಭಿಸಿದರು. ಇಂಥ ಆದರ್ಶ ವ್ಯಕ್ತಿಯನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ಹೆಮ್ಮೆಯಿಂದ ಮುನ್ನಡೆಯಿರಿ ಎಂಬ ಸಂದೇಶ ಕೊಟ್ಟಿದ್ದರು. 24 ಕೋಟಿ ಕೊಟ್ಟು 'ಕನಕ ಪ್ರಾಧಿಕಾರ' ರಚಿಸಿದರು. ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿ ಅಂಬೇಡ್ಕರ್, ಬಾಬು ಜಗಜೀವನ್‌ರಾಂ, ವಾಲ್ಮೀಕಿ, ಕನಕ ಭವನಗಳ ನಿರ್ಮಾಣಕ್ಕೆ ಕೈಹಾಕುವ ಮೂಲಕ ಮದುವೆ, ಮುಂಜಿ ಅಥವಾ ಯಾವುದೇ ಸಮಾರಂಭವಿರಲಿ, ಎಲ್ಲರಂತೆ ಭವ್ಯ ಕಟ್ಟಡಗಳಲ್ಲೇ ಆಚರಿಸಿ ಎಂದು ಸಾಮಾಜಿಕ ನ್ಯಾಯ ಸ್ಥಾಪನೆಗೆ ಮುಂದಾದವರು ಬಿಎಸ್‌ವೈ. ಕನಕ ಜಯಂತಿ, ವಾಲ್ಮೀಕಿ ಜಯಂತಿಗೆ ರಜಾ ಘೋಷಣೆ ಮಾಡಿದ್ದೇ ಅವರು.

ಬಸವ ವಸತಿ ಯೋಜನೆ ಆರಂಭಿಸಿ ಪ್ರತಿ ಪಂಚಾಯಿತಿಗೆ ಗರಿಷ್ಠ 300 ಮನೆಗಳನ್ನು ಕೊಟ್ಟರು. ಅಷ್ಟೇ ಅಲ್ಲ, ಪ್ರತಿ ನಗರ ಸಭೆಗಳಿಗೆ 25 ಕೋಟಿ, ಮಹಾನಗರಪಾಲಿಕೆಗಳಿಗೆ ತಲಾ ವಾರ್ಷಿಕ 50 ಕೋಟಿ ನೀಡಿದ್ದರು. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗೆ ಸೋನಿಯಾ ಗಾಂಧಿ ನಿಯಂತ್ರಿತ ಯುಪಿಎ ಸರಕಾರ ದುಡ್ಡನ್ನೇ ಕೊಡದೆಹೋದಾಗ, 'ನೀವು ಕೊಡದಿದ್ದರೇನಂತೆ, ನಾನೇ ಗ್ರಾಮಗಳ ರಸ್ತೆಯನ್ನು ಅಭಿವೃದ್ಧಿ ಮಾಡುತ್ತೇನೆ' ಎಂದು 'ನಮ್ಮ ಗ್ರಾಮ, ನಮ್ಮ ರಸ್ತೆ' ಯೋಜನೆಯನ್ನು ಜಾರಿಗೆ ತಂದರು. 4 ಸಾವಿರ ಸುವರ್ಣ ಗ್ರಾಮಗಳನ್ನು ತಲಾ 75 ಲಕ್ಷದಿಂದ 2 ಕೋಟಿವರೆಗೂ ನೀಡಿ ಅಭಿವೃದ್ಧಿಪಡಿಸಿದರು.

ಅವರು 2008ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಬೆಳಗ್ಗೆ 8 ಗಂಟೆಯ ತಿಂಡಿಗೆ ಮೊದಲು ಆ ದಿನದ ಎಲ್ಲ ಪತ್ರಿಕೆಗಳ ವರದಿಗಳನ್ನು ಪಟ್ಟಿ ಮಾಡಿ, ಸಮಸ್ಯೆ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ಸಿದ್ಧಮಾಡಿ ಅಧಿಕಾರಿಗಳು ಅವರ ಟೇಬಲ್ಲಿನ ಮೇಲಿಟ್ಟಿರಬೇಕಿತ್ತು. ಸೂಕ್ತ ಕ್ರಮಕ್ಕೆ ಸೂಚನೆ ಕೊಟ್ಟ ನಂತರವೇ ಬ್ರೇಕ್‌ಫಾಸ್ಟ್.

ಅದು ಯಾರೇ ಆಗಿರಲಿ, ಯಾವುದೇ ವ್ಯಕ್ತಿಯನ್ನು ಇಡಿ ಇಡಿಯಾಗಿ ಒಪ್ಪಿಕೊಳ್ಳುವುದು ಯಾರಿಗೂ ಸಾಧ್ಯವಿಲ್ಲ. ಬಿಡಿ ಬಿಡಿಯಾಗಿ ವ್ಯಕ್ತಿಯ ಕೆಲಸ, ಸಾಧನೆ, ಸಂವೇದನೆಯನ್ನು ನೋಡಿದಾಗ ಮನಸ್ಸಿಗೆ ಹತ್ತಿರವಾಗುತ್ತಾರೆ. ಯಡಿಯೂರಪ್ಪ ಸಾಹೇಬರು ನಮಗೆ ಅಪ್ಯಾಯಮಾನರಾಗುವುದು ಇದೇ ಕಾರಣಕ್ಕೆ. ಐವತ್ತು ವರ್ಷಗಳ ರಾಜಕೀಯ ಜೀವನದೊಂದಿಗೆ ಇವತ್ತು 84ನೇ ವರ್ಷಕ್ಕೆ ಅವರು ಕಾಲಿಡುತಿದ್ದಾರೆ. ಹ್ಯಾಪಿ ಬರ್ತ್ ಡೇ ಸರ್!

(ಲೇಖಕರು ಮಾಜಿ ಸಂಸದರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಾಸ್ತವಕ್ಕೆ ಹಿಡಿದ ಕನ್ನಡಿ

ವಿಶ್ವೇಶ್ವರ ಭಟ್ಟರು ಬರೆದ, 'ನ್ಯಾಯಾಧೀಶರ ಮಾತು ಶಾಸನವಾಗಬೇಕೇ ಹೊರತು, ಹರಿಕಥೆ ಆಗಬಾರದು' ಎಂಬ ಶೀರ್ಷಿಕೆಯ 'ನೂರೆಂಟು ವಿಶ್ವ' ಅಂಕಣಬರಹವು (ಫೆ.26) ನ್ಯಾಯಾಂಗದ ವಾಸ್ತವಕ್ಕೆ ಹಿಡಿದ ಕನ್ನಡಿಯಾಗಿದೆ. ನ್ಯಾಯಾಲಯದಲ್ಲಿ ನ್ಯಾಯಾಧೀಶರು ನೀಡುವ ಮೌಖಿಕ ಅವಲೋಕನಗಳು (Oral Observations) ಇಂದು ಚರ್ಚೆಯ ವಿಷಯವಾಗುತ್ತಿವೆ. ಭಟ್ಟರು ಉಲ್ಲೇಖಿಸಿದಂತೆ 'Loose Cannon' ಪ್ರವೃತ್ತಿಯು ನ್ಯಾಯಾಂಗದ ನಿಷ್ಪಕ್ಷಪಾತಿ ಇಮೇಜಿಗೆ ಧಕ್ಕೆ ತರುತ್ತದೆ. ಕೆಲವು ನ್ಯಾಯಾಧೀಶರು ಆಡಿದ ಮಾತುಗಳು ಅದೆಂಥಾ ನಗೆಪಾಟಲಿನ ವಿಷಯವಾಗಿತ್ತು ಎಂಬುದನ್ನು ತುಂಬಾ ಮಾರ್ಮಿಕವಾಗಿ ವಿವರಿಸಿರುವ ಭಟ್ಟರು, ಇಂಥ 'ಲೂಸ್ ಕ್ಯಾನನ್' ಮಾತುಗಳಿಂದ ನ್ಯಾಯಾಧೀಶರಿಗೇ ಆದ ತೊಂದರೆಯ ಬಗ್ಗೆಯೂ ವಿವರಿಸಿರುವುದು ಗಮನಾರ್ಹ.

ನ್ಯಾಯಾಧೀಶರ ಜ್ಞಾನವು ಅವರು ನೀಡುವ ಲಿಖಿತ ತೀರ್ಪುಗಳಲ್ಲಿ ಹೊಮ್ಮಬೇಕೇ ಹೊರತು, ವಿಚಾರಣೆಯ ಸಮಯದಲ್ಲಿ ನೀಡುವ ಅನಗತ್ಯ ಟೀಕೆಗಳಲ್ಲಿ ಅಲ್ಲ. ಸೋಷಿಯಲ್ ಮೀಡಿಯಾ ಮತ್ತು ಲೈವ್ ಸ್ಟ್ರೀಮಿಂಗ್ ಚಟುವಟಿಕೆಗಳು ಚುರುಕಾಗಿರುವ ಪ್ರಸಕ್ತ ಕಾಲಘಟ್ಟದಲ್ಲಿ ನ್ಯಾಯಾಧೀಶರು ಹೆಚ್ಚು ಸಂಯಮದಿಂದ ವರ್ತಿಸಬೇಕಾದ್ದು ಅವಶ್ಯ ಎಂಬ ಭಟ್ಟರ ಅಭಿಪ್ರಾಯವನ್ನು ಒಪ್ಪಲೇಬೇಕು. ಇಂಥ ಪ್ರಬುದ್ಧ ಲೇಖನವನ್ನು ನೀಡಿದ್ದಕ್ಕಾಗಿ ಧನ್ಯವಾದಗಳು.

- ಬಾಲಚಂದ್ರ ಹೆಗಡೆ, ಬೆಂಗಳೂರು

ತ್ಯಾಗಮಯಿ ಮಹಾರಾಣಿ

ಮಹಾರಾಣಿ ಕಾಮಸುಂದರಿ ದೇವಿಯವರ ಕುರಿತಾದ ರೂಪಾ ಗುರುರಾಜ್ ಅವರ 'ಒಂದೊಳ್ಳೆ ಮಾತು' ಅಂಕಣಬರಹ (ಆರಾಮ ಪುರವಣಿ, ಫೆ.25) ಮುದನೀಡಿತು.

ದರ್ಭಾಂಗದ ಮಹಾರಾಣಿಯಾಗಿದ್ದ ಇವರು ಭಾರತದ ಗಡಿಕಾಯುವ ಸೈನಿಕರ ಕುರಿತು ಹೊಂದಿದ್ದ ಕಳಕಳಿ, ತಮ್ಮ

ದೇಶಪ್ರೇಮವನ್ನು ವ್ಯಕ್ತಪಡಿಸಲು ಅವರು ಉದಾರ ಮನಸ್ಸಿನಿಂದ ಸುಮಾರು 600 ಕಿಲೋ ಬಂಗಾರವನ್ನು ದಾನಮಾಡಿದ್ದು ಇತ್ಯಾದಿ ಸಂಗತಿಯನ್ನು ಓದಿದಾಗ, 'ಹೀಗೂ ಉಂಟೇ?' ಅನಿಸಿದ್ದು ನಿಜ (ಇಂದಿಗೆ ಆ ಬಂಗಾರದ ಬೆಲೆ ಸುಮಾರು 950 ಕೋಟಿ ರುಪಾಯಿ!). ಸಾಲದೆಂಬಂತೆ, ತಮ್ಮ ಸಂಸ್ಥೆಯ ಖಾಸಗಿ ವಿಮಾನಗಳನ್ನು ಯುದ್ಧದ ಬಳಕೆಗೆ ಬಿಟ್ಟುಕೊಟ್ಟು ಹೃದಯವಂತಿಕೆ ತೋರಿದ ಇವರು ನಿಜಕ್ಕೂ ಪ್ರಾತಃಸ್ಮರಣೀಯರು.

ಇದನ್ನು ನೋಡಿದಾಗ, ದೇವಸ್ಥಾನಕ್ಕೆ ಗಡಿಯಾರ, ಟ್ಯೂಬ್ ಲೈಟ್ ಇತ್ಯಾದಿ ಸಾಮಗ್ರಿಗಳನ್ನು ದಾನಮಾಡಿ (?!), ಅದರ ತುಂಬೆಲ್ಲಾ ಕುಟುಂಬದ ಸದಸ್ಯರ ಹೆಸರನ್ನು ಬರೆಸಿಕೊಳ್ಳುವವರೆಲ್ಲಿ, ತಮ್ಮ ಅರಮನೆಯಲ್ಲಿದ್ದ ಬಂಗಾರದ ಭಂಡಾರವನ್ನೇ ಸಂಪೂರ್ಣ ದಾನಮಾಡಿ ಸರಳ ಜೀವನ ನಡೆಸಿದ ಈ ಮಹಾರಾಣಿ ಎಲ್ಲಿ ಎನಿಸುತ್ತದೆ! ದಾನಮಾಡಲು ಮೊದಲು ಬೇಕಾಗಿರುವಂಥದ್ದು ದೊಡ್ಡ ಮನಸ್ಸು, ದಾನವಾಗಿ ನೀಡಿದ ವಸ್ತು/ಸಾಮಗ್ರಿಗಳು ಪಡೆಯುವ ಸ್ಥಾನ ನಂತರದ್ದು ಅಲ್ಲವೇ? ಇಂಥ ಅಪರೂಪದ ನಾರಿಯ ಪರಿಚಯ ಮಾಡಿಕೊಟ್ಟ ಅಂಕಣಕಾರ್ತಿಗೂ, ಅದನ್ನು ಪ್ರಕಟಿಸಿದ ಪತ್ರಿಕೆಗೂ ಧನ್ಯವಾದಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಎರಡು ಅಲುಗಿನ ಕತ್ತಿ

ಸ್ಮಾರ್ಟ್‌ಫೋನ್ ಎಂಬುದೊಂದು ವಿಶ್ವಕೋಶವಿದ್ದಂತೆ. 'ಈ ಪದದ ಅರ್ಥವೇನು?', 'ಜಗತ್ತಿನ ಈ ನಗರ ಇಲ್ಲಿಂದ ಎಷ್ಟು ದೂರ?', 'ಈ ರೋಗಕ್ಕೆ ಏನು ಔಷಧಿ' ಎಂಬ ಪ್ರಶ್ನೆಗಳಿಗೆ ಉತ್ತರಿಸುವುದರಿಂದ ಮೊದಲ್ಗೊಂಡು, ಕಾಳಿದಾಸ, ಷೇಕ್ಸ್‌ಪಿಯರ್ ಮುಂತಾದವರ ಕುರಿತಾದ ಸಮಗ್ರ ಮಾಹಿತಿಯನ್ನು ಸ್ಮಾರ್ಟ್‌ಫೋನ್ ಒಂದೇ ಕ್ಷಣದಲ್ಲಿ ಒದಗಿಸಬಲ್ಲದು. ಈ 'ಜ್ಞಾನಭಂಡಾರ'ವನ್ನು ಪುಟ್ಟ ಮಕ್ಕಳಿಂದ ಮೊದಲ್ಗೊಂಡು ಎಂಬತ್ತು ವರ್ಷದ ಹಿರಿಯರೂ ಸುಲಭವಾಗಿ ಬಳಸಿಕೊಳ್ಳುತ್ತಾರೆ.

ಆದರೆ ಹೆಚ್ಚುತ್ತಿರುವ ಸ್ಮಾರ್ಟ್‌ಫೋನ್/ಆನ್‌ಲೈನ್ ವೇದಿಕೆಗಳ ಬಳಕೆಯು ಮಕ್ಕಳ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ. ಶಾಲಾ ಕಾಲೇಜುಗಳ ಹುಡುಗ-ಹುಡುಗಿಯರು ಇದರ ಗೀಳಿಗೆ ಒಳಗಾಗಿದ್ದಾರೆ. ಸ್ಮಾರ್ಟ್‌ಫೋನ್‌ಗಳ ಮೂಲಕ ಉಪಯುಕ್ತ ವಿಷಯಗಳು ದಕ್ಕುವುದರ ಜತೆಜತೆಗೆ, ಅತ್ಯಂತ ಅಸಭ್ಯ ವಿಡಿಯೋಗಳೂ 'ಧುತ್' ಎಂದು ಎದುರಾಗುತ್ತವೆ. ಇವುಗಳ ವೀಕ್ಷಣೆಯು ಮಾದಕವಸ್ತುಗಳಂತೆ ಚಟವಾಗಿ ಪರಿಣಮಿಸಿ, ಶೈಕ್ಷಣಿಕ ಅಧ್ಯಯನದ ವಿಡಿಯೋಗಳು ಮೂಲೆಗುಂಪಾಗುತ್ತವೆ. ಪೋಷಕರೊಮ್ಮೆ ಮಕ್ಕಳಿಂದ ಮೊಬೈಲ್ ಅನ್ನು ಅಚಾನಕ್ಕಾಗಿ ಕಸಿದುಕೊಂಡು ಒಮ್ಮೆ ಕಣ್ಣು ಹಾಯಿಸಿದರೆ, ಅವರ ಎದೆ ನಡುಗುವುದರಲ್ಲಿ ಅನುಮಾನವಿಲ್ಲ. ಇದನ್ನು ತಡೆಯಬೇಕಿದೆ. ಇದಕ್ಕಾಗಿ ವಿಕೃತ ವಿಡಿಯೋಗಳನ್ನು ಬ್ಲಾಕ್ ಮಾಡುವ, ವಿದ್ಯಾರ್ಥಿಗಳಿಗಾಗಿಯೇ ವಿಶೇಷ ಮೊಬೈಲ್ ತಯಾರಿಗೆ ಮುಂದಾಗುವ ಅಗತ್ಯವಿದೆ.

- ಸತ್ಯಬೋಧ, ಬೆಂಗಳೂರು

ಪಾಪ, ಪೊಲೀಸರು!

ಹಿಂದೆಲ್ಲಾ ಪೊಲೀಸ್ ಹುದ್ದೆಯೆಂದರೆ ಒಂದು ಘನತೆ-ಗೌರವದ ಕಾಯಕ ಎಂಬ ಗ್ರಹಿಕೆಯಿತ್ತು. 'ನಾವು ಜನರಕ್ಷಕರು, ಸಂತ್ರಸ್ತರಿಗೆ ನ್ಯಾಯ ಕೊಡಿಸುವುದು, ಖದೀಮರನ್ನು ಮಟ್ಟಹಾಕುವುದು ನಮ್ಮ ಕರ್ತವ್ಯ' ಎಂಬ ಹೊಣೆಗಾರಿಕೆಯ ಪ್ರಜ್ಞೆಯಲ್ಲಿ ಪೊಲೀಸರೂ ತೃಪ್ತಭಾವವನ್ನು ತಳೆದಿದ್ದರು, ನೆಮ್ಮದಿಯಿಂದ ಬಾಳುತ್ತಿದ್ದರು.

ಆದರೆ, ಇಂದು ಆಗಿರುವುದೇನು? ಅತಿಯಾದ ಕಾರ್ಯದೊತ್ತಡ, ವಿಶ್ರಾಂತಿಯ ಅಭಾವ, ರಾಜಕಾರಣಿಗಳ ಮಧ್ಯಪ್ರವೇಶ ಹಾಗೂ ಇತರೆ ಸಮಸ್ಯೆಗಳಿಂದಾಗಿ ಪೊಲೀಸರ ಕಾರ್ಯನಿರ್ವಹಣೆ 'ಕಬ್ಬಿಣದ ಕಡಲೆ' ಆಗುತ್ತಿದೆ. ಮೆರವಣಿಗೆ, ಸಮಾರಂಭ, ಭಾಷಣ, ಶಾಲಾ-ಕಾಲೇಜುಗಳ ವಾರ್ಷಿಕೋತ್ಸವ, ಗಣ್ಯರಿಗೆ ರಕ್ಷಣೆ, ಆಳುಗರ ಸಂಚಾರದ ವೇಳೆ 'ಝೀರೋ ಟ್ರಾಫಿಕ್' ವ್ಯವಸ್ಥೆ ಕಲ್ಪಿಸುವಿಕೆ- ಹೀಗೆ ಏನೇ ಸಂದರ್ಭಗಳಿದ್ದರೂ ಪೊಲೀಸರಿಗೆ ತಲೆಬಿಸಿ ತಪ್ಪಿದ್ದಲ್ಲ. ಏಕೆಂದರೆ, ಇಷ್ಟೂ ಸಂದರ್ಭಗಳಲ್ಲಿ ಏನಾದರೂ ಅವಘಡವಾದರೆ ಮೊದಲು ಬರುವುದು ಪೊಲೀಸರ ತಲೆಗೇ! ಸಮಾಜದ ವಿವಿಧ ಕಾರ್ಯಕ್ಷೇತ್ರಗಳ ಪ್ರಭಾವಿಗಳು/ಗಣ್ಯರು ಏನಾದರೂ ಮಾಡಬಾರದ ಕೆಲಸ ಮಾಡಿ ಸಿಕ್ಕಿಹಾಕಿಕೊಂಡಾಗ ಒಂದೊಮ್ಮೆ ಅವರನ್ನು ಪೊಲೀಸರು ಬಂಧಿಸಿದರೂ, ಜಾಮೀನು ಕೊಟ್ಟು ಮನೆಗೆ ಕರೆದುಕೊಂಡು ಹೋಗಲು ಸರದಿಯ ಸಾಲೇ ನೆರೆದಿರುತ್ತದೆ! ಹೀಗಾಗಿ ಪೊಲೀಸರಿಗೆ 'ಅತ್ತ ದರಿ, ಇತ್ತ ಪುಲಿ' ಎಂಬಂಥ ಪರಿಸ್ಥಿತಿ. ಎಫ್‌ಐಆರ್ ಹಾಕುವುದಕ್ಕೂ ಮೇಲಿನಿಂದ ಆದೇಶ ಬರಬೇಕು ಇಲ್ಲವೇ ಅವರ ಮರ್ಜಿಗಾಗಿ ಕಾಯಬೇಕು. ಅಕಸ್ಮಾತ್ತಾಗಿ ಏನಾದರೂ ಗಲಭೆ ನಡೆದರೆ, ಆಯಾ ಪ್ರದೇಶದ ನಿರ್ದಿಷ್ಟ ಪೊಲೀಸರನ್ನು ಹೊಣೆಗಾರರನ್ನಾಗಿಸಿ ಬೇರೆ ಸ್ಟೇಷನ್‌ಗೆ ವರ್ಗಾಯಿಸಲಾಗುತ್ತದೆ. ಇದರಿಂದಾಗಿ ವೈಯಕ್ತಿಕವಾಗಿ ಕಪ್ಪುಚುಕ್ಕೆಯನ್ನು ಮೆತ್ತಿಸಿಕೊಳ್ಳಬೇಕಾದ ಪಡಿಪಾಟಲು. ಇಷ್ಟೆಲ್ಲದರ ಹೊರತಾಗಿ ಆಳುಗರಿಂದ ಏಕಪ್ರಕಾರದ ತೆಗಳಿಕೆ, ಜನಸಾಮಾನ್ಯರ ಭರ್ತ್ಸನೆ, ಕೆಲ ಮಾಧ್ಯಮಗಳ ಹೀಗಳೆತ ತಪ್ಪಿದ್ದಲ್ಲ.

ನಮ್ಮ ರಕ್ಷಣೆಗೆಂದೇ ಇರುವ ಪೊಲೀಸರೆಡೆಗೆ ಹೀಗೊಂದು ವಿಲಕ್ಷಣ ಅಭಿಪ್ರಾಯ ತಳೆಯುವುದನ್ನು ಸಮಾಜ ಇನ್ನಾದರೂ ನಿಲ್ಲಿಸಬೇಕಿದೆ. ಏಕೆಂದರೆ, ಪೊಲೀಸರೂ ನಮ್ಮಂತೆಯೇ ಮನುಷ್ಯರಲ್ಲವೇ?

- ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 43

ನ್ಯಾಯಾಂಗವನ್ನು ಉದ್ದೇಶಪೂರ್ವಕವಾಗಿ ಅಪಮಾನಿಸುವ ಹುನ್ನಾರ | ಎನ್‌ಸಿಇಆರ್‌ಟಿ ಪಠ್ಯಪುಸ್ತಕಕ್ಕೆ ನಿಷೇಧ: ಎಲ್ಲಾ ಪ್ರತಿಗಳ ವಶಕ್ಕೆ ಸೂಚನೆ | ಎನ್‌ಸಿಇಆರ್‌ಟಿ-ಶಿಕ್ಷಣ ಇಲಾಖೆ ವಿರುದ್ಧ ನ್ಯಾಯಾಂಗ ನಿಂದನೆ ದಾವೆ

ನ್ಯಾಯಾಂಗ ವಿರುದ್ಧವೇ ಆಳ ಸಂಚು: ಸುಪ್ರೀಂ ಗರಂ

ದೆಹಲಿ: ದೇಶದ ನ್ಯಾಯಾಂಗ ವ್ಯವಸ್ಥೆಯನ್ನು, ನ್ಯಾಯಾಂಗದ ಉನ್ನತ ಸಂಸ್ಥೆಯನ್ನು ಅಪಮಾನಿಸುವ ಆಳವಾದ ಸಂಚನ್ನು ಬಲು ವ್ಯವಸ್ಥಿತವಾಗಿ ನಡೆಸಲಾಗಿದೆ ಎಂದು ಸುಪ್ರೀಂ ಕೋರ್ಟ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಅಲ್ಲದೇ, ಇದು ಕಣ್ತಪ್ಪಿ ಆಗಿದ್ದಲ್ಲ, ಬಹಳ ಉದ್ದೇಶಪೂರ್ವಕವಾಗಿಯೇ ನ್ಯಾಯಾಂಗದ ಮರ್ಯಾದೆಯನ್ನು ಹಾಳುಗೆಡಹುವ ದುಸ್ಸಾಹಸವಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ನೇತೃತ್ವದ ತ್ರಿಸದಸ್ಯ ಪೀಠ ಗುರುವಾರದ ವಿಚಾರಣೆ ವೇಳೆ ಗುಡುಗಿದೆ.

ದೇಶದ ನ್ಯಾಯಾಂಗ ವವಸ್ಥೆಯ ಪ್ರಧಾನ ಸಂಸ್ಥೆಯಾದ ಸುಪ್ರೀಂ ಕೋರ್ಟ್‌ನಲ್ಲಿಯೇ ಭ್ರಷ್ಟಾಚಾರವಿದೆ ಎಂಬ ಪಾಠವನ್ನು 8ನೇ ತರಗತಿ ಪಠ್ಯದಲ್ಲಿ ಮುದ್ರಿಸಿದ್ದಕ್ಕೆ 'ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ'(ಎನ್‌ಸಿಇಆರ್‌ಟಿ) ವಿರುದ್ಧ ಭಾರತದ ಮುಖ್ಯ ನ್ಯಾಯಮೂರ್ತಿ ಯಾದಿಯಾಗಿ ಇಡೀ ಸುಪ್ರೀಂ ಕೋರ್ಟ್ ವ್ಯವಸ್ಥೆಯೇ ಸಿಟ್ಟಾಗಿದೆ.

ನ್ಯಾಯಾಂಗವನ್ನು ಅವಹೇಳನ ಮಾಡುವಂತಹ ಪಾಠವನ್ನು ಅಳವಡಿಸಿದ ಕಾರಣಕ್ಕೆ ವಿವಾದಕ್ಕೆ ಒಳಗಾಗಿರುವ ಎನ್‌ಸಿಇಆರ್‌ಟಿ ಪ್ರಕಟಿತ 8ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ಪೂರ್ಣವಾಗಿ ನಿಷೇಧಿಸಿ ಸುಪ್ರೀಂ ಕೋರ್ಟ್ ಗುರುವಾರ ಆದೇಶ ಹೊರಡಿಸಿದೆ. ಅಲ್ಲದೇ, ಈಗಾಗಲೇ ಮಾರುಕಟ್ಟೆಗೆ, ಶಾಲೆಗಳಿಗೆ ವಿತರಣೆಯಾಗಿರುವ 8ನೇ ತರಗತಿಯ ಸಮಾಜ ವಿಜ್ಞಾನದ ಅಷ್ಟೂ ಪುಸ್ತಕಗಳನ್ನು ಮಾರುಕಟ್ಟೆ-ಶಾಲೆಗಳಿಂದ ವಶಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಆದೇಶಿಸಿದೆ. ಅಲ್ಲದೇ, ಪುಸ್ತಕದ ಡಿಜಿಟಲ್ ಆವೃತ್ತಿಗಳನ್ನು ವೆಬ್ ತಾಣದಿಂದ ತಕ್ಷಣವೇ ತೆಗೆದುಹಾಕುವುದಕ್ಕೂ ಆದೇಶಿಸಿದೆ.

ಕಠಿಣ ಕ್ರಮ: ಎಚ್ಚರಿಕೆ ಪೀಠದ ಈ ನಿರ್ದೇಶನಗಳನ್ನು ತಕ್ಷಣವೇ ಪಾಲಿಸಬೇಕು. ಇಲ್ಲದೇ ಇದ್ದರೆ ಗಂಭೀರ ಕ್ರಮ ಎದುರಿಸಬೇಕಾದೀತು ಎಂಬ ಎಚ್ಚರಿಕೆಯನ್ನೂ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠ ನೀಡಿದೆ.

ಪೀಠದ ಕಳವಳ: ಇಂಥದೊಂದು ಪಾಠದ ಅಧ್ಯಯನದಿಂದ ಪ್ರೌಢಶಾಲೆ ಮಕ್ಕಳ ಮೇಲೆ ಎಂಥ ಪರಿಣಾಮವಾಗಲಿದೆ. ನ್ಯಾಯಾಂಗದ ಕಾರ್ಯವೈಖರಿ ಬಗ್ಗೆ ಸಾರ್ವಜನಿಕ ಗ್ರಹಿಕೆ ಮೇಲೆ ಎಂಥ ಪ್ರಭಾವ ಬೀರಬಹುದಾಗಿದೆ ಎಂದು ಊಹಿಸಿಕೊಳ್ಳುವುದೇ ಕಷ್ಟವಾಗಿದೆ ಎಂದು ತ್ರಿಸದಸ್ಯ ಪೀಠ ತೀವ್ರ ಕಳವಳ ವ್ಯಕ್ತಪಡಿಸಿದೆ. ಇದೊಂದು ಇಡೀ ನ್ಯಾಯಾಂಗವನ್ನೇ ದೂಷಿಸುವ ಮತ್ತು ನ್ಯಾಯಾಂಗದ ಉನ್ನತ ಸಂಸ್ಥೆಯ ಅಧಿಕಾರವನ್ನೇ ದುರ್ಬಲಗೊಳಿಸುವ ದುರುದ್ದೇಶವನ್ನು ಹೊಂದಿರುವ ಯೋಜಿತ ಪಿತೂರಿಯಂತೆ ಕಾಣುತ್ತಿದೆ ಎಂದೂ ಪೀಠ ಆಕ್ರೋಶ ವ್ಯಕ್ತಪಡಿಸಿದೆ.

ಇದನ್ನು ಇಲ್ಲಿಗೇ ತಡೆಯಬೇಕು. ಇಲ್ಲದೇ ಹೋದರೆ ವಿದ್ಯಾರ್ಥಿಗಳು, ಯುವಜನರು, ಸಾರ್ವಜನಿಕರ ಮನಸ್ಸಿನಲ್ಲಿ ನ್ಯಾಯಾಂಗದ ಪಾವಿತ್ರ್ಯದ ಬಗ್ಗೆ ಅನುಮಾನಗಳು ಉಳಿದುಕೊಂಡು ಬಿಡುತ್ತವೆ ಎಂದು ಸಿಜೆಐ ಸೂರ್ಯಕಾಂತ್ ಅಭಿಪ್ರಾಯಪಟ್ಟಿದ್ದಾರೆ.



ಸುಪ್ರೀಂ ಸಿಟ್ಟಿಗೆ ಕಾರಣವೇನು?

'ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ'(ಎನ್‌ಸಿಇಆರ್‌ಟಿ) ರೂಪಿಸಿದ ಕೇಂದ್ರೀಯ ಪಠ್ಯಕ್ರಮದ ಶಾಲೆಗಳಲ್ಲಿನ 8ನೇ ತರಗತಿಯ ಸಮಾಜ ವಿಜ್ಞಾನದ ಪಠ್ಯದಲ್ಲಿ 'ಕರಪ್ಷನ್ ಇನ್ ದಿ ಜುಡಿಷಿಯರಿ'(ನ್ಯಾಯಾಂಗದಲ್ಲಿ ಭ್ರಷ್ಟಾಚಾರ) ಹಾಗೂ 'ಜಸ್ಟೀಸ್ ಡಿಲೇಯ್ಡ್-ಜಸ್ಟೀಸ್ ಡಿನೈಡ್'(ವಿಳಂಬ ನ್ಯಾಯದಾನದಿಂದ ನ್ಯಾಯವನ್ನೇ ನಿರಾಕರಿಸಿದಂತೆ) ಎಂಬ ಶೀರ್ಷಿಕೆಗಳ(ಇಂಗ್ಲಿಷ್) ಪಾಠವನ್ನು ಅಳವಡಿಸಲಾಗಿದೆ.ಇದರಲ್ಲಿ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಶೀರ್ಷಿಕೆಯ ಪಾಠದ ಮೂಲಕ ಪ್ರೌಢಶಾಲೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ನ್ಯಾಯಾಂಗದ ಬಗ್ಗೆ ತಪ್ಪು ಭಾವನೆ ಬರುವಂತೆ ಮಾಡಲಾಗಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಬುಧವಾರದ ವಿಚಾರಣೆ ವೇಳೆ ಸಿಟ್ಟಾಗಿದ್ದರು. ಅಲ್ಲದೇ, ಎನ್‌ಸಿಇಆರ್‌ಟಿ ವಿರುದ್ಧ 'ಸುಮೋಟೊ'(ಸ್ವಯಂಪ್ರೇರಿತ) ಪ್ರಕರಣ ದಾಖಲಿಸಲು ಕೋರ್ಟ್ ರಿಜಿಸ್ಟ್ರಾರ್‌ಗೆ ನಿರ್ದೇಶನವನ್ನೂ ನೀಡಿದ್ದರು. ಮುಖ್ಯ ನ್ಯಾಯಮೂರ್ತಿಗಳ(ಸಿಜೆಐ) ಈ ಕಠಿಣ ಕ್ರಮಕ್ಕೆ ಬೆಚ್ಚಿಬಿದ್ದ 'ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ'(ಎನ್‌ಸಿಇಆರ್‌ಟಿ) ತಕ್ಷಣವೇ ಸುಪ್ರೀಂ ಕೋರ್ಟ್‌ನ ಕ್ಷಮೆ ಕೋರಿದೆ. ಆದರೆ, ಅದರಿಂದ ಸಮಾಧಾನಗೊಳ್ಳದ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಸುಪ್ರೀಂ ಕೋರ್ಟ್ ಪೀಠ, ಗುರುವಾರ ಮತ್ತೂ ಕಠಿಣ ಕ್ರಮ ಕೈಗೊಂಡಿದೆ. 8ನೇ ತರಗತಿಯ ಸಮಾಜ ವಿಜ್ಞಾನದ ಇಡೀ ಪಠ್ಯಪುಸ್ತಕವನ್ನೇ ನಿಷೇಧಿಸಿ ಆದೇಶ ಹೊರಡಿಸಿದೆ.

'ಎಸ್‌ಜಿ' ಬೇಷರತ್ ಕ್ಷಮೆಗೂ ಸಮಾಧಾನಗೊಳ್ಳದ ಪೀಠ

ಈ ವೇಳೆ ಪೀಠದೆದುರು ಕೇಂದ್ರ ಸರಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಕೇಂದ್ರದ ಶಿಕ್ಷಣ ಸಚಿವಾಲಯದ ಪರವಾಗಿ ಬೇಷರತ್ ಕ್ಷಮೆ ಯಾಚಿಸಿದರು. ಆದರೆ, ಅದರಿಂದ ಪೀಠ ಸಮಾಧಾನಗೊಳ್ಳಲಿಲ್ಲ. 'ಎನ್‌ಸಿಇಆರ್‌ಟಿ' ಸಂಸ್ಥೆಯು ಈ ಮಧ್ಯೆ ಹೊರಡಿಸಿರುವ ಅಧಿಕೃತ ಪ್ರಕಟಣೆಯಲ್ಲಿ ಕ್ಷಮೆ ಯಾಚನೆಯಂತಹ ಸ್ಪಷ್ಟ ಅಂಶಗಳು ಕಾಣಿಸಿಲ್ಲ. ಬದಲಾಗಿ ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳುವಂತೆಯೇ ಅದರ ಪ್ರಕಟಣೆ ಇದೆ ಎಂದು ಅಸಮಾಧಾನ ಹೊರಹಾಕಿದ ಪೀಠ, ಇಂಥದೊಂದ ನಕಾರಾತ್ಮಕ ಪಾಠವನ್ನು ವಿದ್ಯಾರ್ಥಿಗಳ ಪಠ್ಯ ಪುಸ್ತಕದಲ್ಲಿ ಸೇರಿಸಲು ಅನುಮೋದಿಸಿದವರು ಯಾರು? ಮತ್ತು ಕೊನೆಯದಾಗಿ ಪಠ್ಯ ಪುಸ್ತಕವನ್ನು ಪ್ರಕಟಿಸಲು ಆದೇಶಿಸಿದವರು ಯಾರು? ಎಂದು ಪ್ರಶ್ನೆ ಮಾಡಿತು. ಈ ಹೊಣೆಗಾರರನ್ನು ಗುರುತಿಸಲು ತನಿಖೆ ನಡೆಸುವುದಕ್ಕೆ ಆದೇಶಿಸುವುದಾಗಿಯೂ ಪೀಠ ಹೇಳಿತು.ನ್ಯಾಯಾಂಗದ ಕುರಿತ ವಿವಾದಿತ ಪಾಠ 'ಎನ್‌ಸಿಇಆರ್‌ಟಿ' ಪಾಲಿಗೆ ದೊಡ್ಡ ಕಂಠಕವಾಗಿ ಪರಿಣಮಿಸಿದೆ. ಎನ್‌ಸಿಇಆರ್‌ಟಿಯಲ್ಲಿ ಉನ್ನತ ಸ್ಥರದಲ್ಲಿ ಹಲವರ ಸ್ಥಾನಗಳಿಗೆ ಕುತ್ತು ಬರುವ ಸಾಧ್ಯತೆ ಇದೆ ಎಂಬ ಮಾತುಗಳು ಕೇಳಿಬಂದಿವೆ.

ಇಂಥ ಪಾಠ ಅಳವಡಿಸಿದ್ದು ಯಾರು?

'ಎನ್‌ಸಿಇಆರ್‌ಟಿ'ಯ 8ನೇ ತರಗತಿಯ ಸಮಾಜ ವಿಜ್ಞಾನದ 'ಎಕ್ಸ್‌ಪ್ಲೋರಿಂಗ್ ಸೊಸೈಟಿ: ಇಂಡಿಯ ಅಂಡ್ ಬಿಯಾಂಡ್'(ಆವೃತ್ತಿ-2) ಪಠ್ಯಪುಸ್ತಕದಲ್ಲಿನ 4ನೇ ಅಧ್ಯಾಯದಲ್ಲಿ ನ್ಯಾಯಾಂಗಕ್ಕೆ ಅವಹೇಳನಕಾರಿಯಾದ ಪಾಠವನ್ನು 8ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಅಳವಡಿಸಿದವರು ಯಾರು? ಇದಕ್ಕೆ ಕಾರಣರಾದವರ ವಿರುದ್ಧ ಏಕೆ ಈವರೆಗೂ ಕ್ರಮ ತೆಗೆದುಕೊಂಡಿಲ್ಲ? ಎಂದು ಸುಪ್ರೀಂ ಕೋರ್ಟ್ 'ಎನ್‌ಸಿಇಆರ್‌ಟಿ'ಯನ್ನು ಪ್ರಶ್ನೆ ಮಾಡಿದೆ. ಈ ಸಂಬಂಧ 'ಎನ್‌ಸಿಇಆರ್‌ಟಿ' ನಿರ್ದೇಶಕರು ಮತ್ತು ಶಾಲಾ ಶಿಕ್ಷಣ ಇಲಾಖೆ ಕಾರ್ಯದರ್ಶಿಗೂ ಶೋಕಾಸ್ ನೋಟಿಸ್ ಜಾರಿ ಮಾಡಿದೆ.ಇಂಥ ನ್ಯಾಯಾಂಗ ಅವಹೇಳನೆಯ ಪಾಠವನ್ನು ವಿದ್ಯಾರ್ಥಿಗಳಿಗೆ ಕಲಿಸಲು ಹೊರಟವರು ಯಾರು? ಇದನ್ನು ಕಂಡುಹಿಡಿಯುವುದು ಕೂಡಾ ನನ್ನದೇ ಜವಾಬ್ದಾರಿಯಾಗಿದೆ. ತಪ್ಪಿತಸ್ಥರು ಯಾರೇ ಇರಲಿ, ಅವರು ಅದರ ಹೊಣೆ ಹೊರಲೇಬೇಕು ಎಂದೂ ಗುರುವಾರದ ವಿಚಾರಣೆ ಸಂದರ್ಭ ಮುಖ್ಯ ನ್ಯಾಯಮೂರ್ತಿ ಕಠಿಣ ಮಾತುಗಳಲ್ಲಿ ಹೇಳಿದ್ದಾರೆ.

ನ್ಯಾಯಾಂಗದ ಬಗ್ಗೆ ಗರಿಷ್ಠ ಗೌರವ: ಕೇಂದ್ರ

ದೆಹಲಿ: ದೇಶದ ನ್ಯಾಯಾಂಗದ ಬಗ್ಗೆ ನಮಗೆ ಅತೀವವಾದ ಗೌರವವಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಗುರುವಾರ ಹೇಳಿದ್ದಾರೆ.

'ಎನ್‌ಸಿಇಆರ್‌ಟಿ'ಯ 8ನೇ ತರಗತಿ ಸಮಾಜ ವಿಜ್ಞಾನ ಪಠ್ಯದಲ್ಲಿ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಕುರಿತ ಪಾಠ ಅಳವಡಿಸಿರುವುದಕ್ಕೆ ಸುಪ್ರೀಂ ಕೋರ್ಟ್, ಕಿಡಿಕಾರಿರುವುದಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿರುವ ಶಿಕ್ಷಣ ಸಚಿವ ಪ್ರಧಾನ್, ನ್ಯಾಯಾಂಗಕ್ಕೆ ಅಪಮಾನ ಮಾಡುವಂತಹ ಇಂಥದೊಂದು ಪಾಠವನ್ನು ಪಠ್ಯಪುಸ್ತಕದಲ್ಲಿ ಸೇರುವಂತೆ ಮಾಡಿದವರ ವಿರುದ್ಧ ಕೇಂದ್ರ ಸರಕಾರ ಖಂಡಿತಾ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದ್ದಾರೆ.

ನ್ಯಾಯಾಂಗದಲ್ಲಿ ಭ್ರಷ್ಟಾಚಾರವಿದೆ ಎಂಬ ಪಾಠವನ್ನು ಅಳವಡಿಸಿ ಪ್ರಮಾದ ಮಾಡಿರುವವರನ್ನು ಖಂಡಿತಾ ಹುಡುಕಿ ಹೊಣೆಗಾರರನ್ನಾಗಿ ಮಾಡಲಾಗುವುದು. ಅವರು ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದವರಾದರೂ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ನ್ಯಾಯಾಲಯ ನೀಡಿರುವ ನಿರ್ದೇಶನಗಳನ್ನು ಪಾಲಿಸಲಾಗುವುದು ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ಭಾವನೆಗಳನ್ನು ಅರ್ಥವಾಗಿದೆ. ಅದನ್ನು ಬೆಂಬಲಿಸುತ್ತೇವೆ ಎಂದು ಬಿಜೆಪಿ ಹೇಳಿದೆ. ಇದು ಬಹಳ ಸೂಕ್ಷ್ಮವಾದ ಸಂಗತಿಯಾಗಿದೆ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಪ್ರತಿಕ್ರಿಯಿಸಿದ್ದಾರೆ.

ಮುಖ್ಯಾಂಶಗಳು

- ಎನ್‌ಸಿಇಆರ್‌ಟಿಗೆ ಸಂಕಷ್ಟ ತಂದ 8ನೇ ತರಗತಿ ಸಮಾಜವಿಜ್ಞಾನ ಪಾಠ
- 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಪಾಠ ಅಳವಡಿಸಿದ್ದಕ್ಕೆ ಸಿಜೆಐ ಕಿಡಿಕಿಡಿ
- ಎನ್‌ಸಿಇಆರ್‌ಟಿ ಅಧಿಕೃತ ಹೇಳಿಕೆಗೆ ತ್ರಿಸದಸ್ಯ ಪೀಠ ಮತ್ತಷ್ಟು ಸಿಟ್ಟು
- ಸಾಲಿಸಿಟರ್ ಜನರಲ್ ಬೇಷರತ್ ಕ್ಷಮೆಯನ್ನೂ ಒಪ್ಪಿಕೊಳ್ಳದ ಪೀಠ

ಸಮಾಚಾರ ಸಣ್ಣದಲ್ಲ

ಅನಿಲ್ ಅಂಬಾನಿ ವಿರುದ್ಧ ಸಿಬಿಐನಿಂದ ಹೊಸ ಕೇಸ್

ದೆಹಲಿ: 'ಬ್ಯಾಂಕ್ ಆಫ್ ಬರೋಡಾ'ಗೆ 2013-17ರ ನಡುವಿನ 4 ವರ್ಷಗಳ ಅವಧಿಯಲ್ಲಿ ಉದ್ಯಮಿ ಅನಿಲ್ ಅಂಬಾನಿ ಮತ್ತು ಅವರ ಒಡೆತನದ ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್.ಕಾಂ) ದೊಡ್ಡ ಮೊತ್ತದ ಸಾಲ ಪಡೆದು ವಂಚಿಸಿದ್ದು, ಇದರಿಂದ ಬ್ಯಾಂಕ್‌ಗೆ2,220 ಕೋಟಿ ರು.ಗೂ ಹೆಚ್ಚು ನಷ್ಟವಾಗಿದೆ ಎಂದು ಕೇಂದ್ರ ತನಿಖಾ ದಳ(ಸಿಬಿಐ) ಹೊಸ ಅಪರಾಧ ಪ್ರಕರಣ ದಾಖಲಿಸಿದೆ. ಬ್ಯಾಂಕ್ ಆಫ್ ಬರೋಡಾದಿಂದ ಮಂಗಳವಾರ ದೂರು ಬಂದಿದ್ದು, ಅದರಂತೆ ಪ್ರಕರಣ ದಾಖಲಿಸಲಾಗಿದೆ. ನಂತರ ಅನಿಲ್ ಅಂಬಾನಿ ಅವರ ನಿವಾಸ ಮತ್ತು ಆರ್‌ಕಾಂನ ನೋಂದಾಯಿತ ಕಚೇರಿಗಳಲ್ಲಿ ಶೋಧ ನಡೆಸಿ ಕೆಲವು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಬಿಐ ಅಧಿಕಾರಿಗಳು ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ. ಕಾಲ್ಪನಿಕ ವಹಿವಾಟು ಸೃಷ್ಟಿಸುವ ಮೂಲಕ ಬ್ಯಾಂಕ್ ಆಫ್ ಬರೋಡಾವನ್ನು ದಾರಿ ತಪ್ಪಿಸಲಾಗಿದೆ. ಸಾಲದ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ ಎಂದು ಸಿಬಿಐ ವಕ್ತಾರರು ತಿಳಿಸಿದ್ದಾರೆ.

ಅಜಿತ್ ಪವಾರ್ ವಿಮಾನ ಪತನ: ತನಿಖೆ ಚುರುಕು

ಮುಂಬೈ: ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯಾಗಿದ್ದ ಅಜಿತ್ ಪವಾರ್ ಮತ್ತು ಇತರೆ ನಾಲ್ವರ ಸಂಚರಿಸುತ್ತಿದ್ದ ಪುಟ್ಟ ವಿಮಾನ ಬಾರಾಮತಿಯಲ್ಲಿ ಜ.28ರಂದು ಪತನವಾಗಿ ಐವರ ದುರ್ಮರಣಕ್ಕೆ ಕಾರಣವಾದ ಘಟನೆ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ. ವಿಮಾನ ಪತನದ ತನಿಖೆಯ ಮುಖ್ಯ ಉದ್ದೇಶ, ಅದು ವಿಧ್ವಂಸಕ ಕೃತ್ಯವೋ ಅಥವಾ ಕ್ರಿಮಿನಲ್ ನಿರ್ಲಕ್ಷ್ಯವೋ ಎಂಬುದನ್ನು ಖಚಿತಪಡಿಸಿಕೊಳ್ಳುವುದಾಗಿದೆ ಎಂದು ಮಹಾರಾಷ್ಟ್ರ ಅಪರಾಧ ತನಿಖಾ ಇಲಾಖೆ(ಸಿಐಡಿ) ಎಡಿಜಿ ಸುನಿಲ್ ರಮಾನಂದ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.ಹಲವು ಪುರಾವೆಗಳನ್ನು ಸಂಗ್ರಹಿಸಿದ್ದೇವೆ. ತನಿಖೆ ಸಮಗ್ರವಾಗಿ ಹಾಗೂ ವೃತ್ತಿಪರ ರೀತಿಯಲ್ಲಿ ನಡೆಸಲಾಗುತ್ತಿದೆ. ದುರ್ಘಟನೆಯಲ್ಲಿ ಯಾವುದಾದರೂ ಅಪರಾಧಿಕ ಸಂಚಿನ ಅಂಶವೇನಾದರೂ ಕಂಡುಬಂದರೆ ಭಾರತೀಯ ನ್ಯಾಯ ಸಂಹಿತೆಯ ಸಂಬಂಧಿತ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸುತ್ತದೆ ಎಂದು ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದರು. ಪ್ರಕರಣದ ಗಂಭೀರತೆ ಅವಲೋಕಿಸಿ ರಾಜ್ಯ ಸರಕಾರ ಸಿಬಿಐ ತನಿಖೆಗೆ ಕೋರಿ ಕೇಂದ್ರಕ್ಕೆ ಪತ್ರ ಬರೆದಿದೆ ಎಂದೂ ರಮಾನಂದ್ ತಿಳಿಸಿದರು.

ಗಾಜಾ ಶಾಂತಿ ಯೋಜನೆ ಪ್ರಧಾನಿ ಮೋದಿ ಬೆಂಬಲ

ಟೆಲ್‌ಅವೀವ್: 'ಗಾಜಾ ಪಟ್ಟಿಯಲ್ಲಿ ಶಾಂತಿ ಯೋಜನೆ' ಹೆಸರಿನ ಅಮೆರಿಕ ಉಪಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಸಂಘರ್ಷಕ್ಕೆ ಮಾನವೀಯತೆ ಎಂದಿಗೂ ಬಲಿಯಾಗಬಾರದು ಎಂದು ಪ್ರತಿಪಾದಿಸಿದ್ದಾರೆ.ಇಸ್ರೇಲ್ ಪ್ರವಾಸದ 2ನೇ ದಿನವಾದ ಗುರುವಾರ ಜೆರುಸಲೆಮ್‌ನಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜತೆಗೂಡಿ ಸುದ್ದಿಗೋಷ್ಠಿ ನಡೆಸಿದ ಮೋದಿ, ಭಾರತದ ಭದ್ರತಾ ಹಿತಾಸಕ್ತಿಗಳಿಗೂ ಪಶ್ಚಿಮ ಏಷ್ಯಾದಲ್ಲಿದ ಶಾಂತಿ-ಸ್ಥಿರತೆಗೂ ನಿಕಟ ಸಂಬಂಧವಿದೆ ಎಂದರು. ಗಾಜಾದಲ್ಲಿ ಸಂಘರ್ಷ ಕೊನೆಗೊಳಿಸುವ ಗಾಜಾ ಶಾಂತಿ ಯೋಜನೆಯಂಥ ಯಾವುದೇ ಪ್ರಯತ್ನಗಳಿಗೂ ಭಾರತದ ಬೆಂಬಲವಿರಲಿದೆ. ಭವಿಷ್ಯದಲ್ಲಿಯೂ ಎಲ್ಲಾ ದೇಶಗಳೊಂದಿಗೂ ಭಾರತ ಮಾತುಕತೆ-ಸಹಕಾರ ಮುಂದುವರಿಸುತ್ತದೆ ಎಂದರು. ಭಯೋತ್ಪಾದನೆ ಯಾವುದೇ ರೂಪದಲ್ಲಿದ್ದರೂ ಅದಕ್ಕೆ ವಿಶ್ವದಲ್ಲಿ ಜಾಗವಿಲ್ಲ ಎಂದು ಜಂಟಿ ಘೋಷಣೆ ಮಾಡಿದ ಇಬ್ಬರೂ ನಾಯಕರು, ಭಯೋತ್ಪಾದನೆ ಮತ್ತು ಅದನ್ನು ಬೆಂಬಲಿಸುವವರನ್ನು ಭಾರತ-ಇಸ್ರೇಲ್ ನಿರಂತರ ಜತೆಯಾಗಿ ನಿಂತು ಎದುರಿಸಲಿವೆ ಎಂದರು.

ನಕ್ಸಲ್ ತಂಡದ ನಾಯಕನಿಂದಲೇ ಗುಂಡು-ಅರಣ್ಯದಲ್ಲಿ ಶವ ವಿಲೇವಾರಿ
ಶರಣಾಗತಿ ಸಿದ್ಧವಾಗಿದ್ದ ಅನ್ವೇಶ್, ಅದಕ್ಕೆ ಒಪ್ಪದೇ ಹತ್ಯೆ ಮಾಡಿದ ಸುಕ್ರು

ಶರಣಾಗಲಿದ್ದ ನಕ್ಸಲ್ ಕಮಾಂಡರ್ ಕೊಲೆ

ಭುವನೇಶ್ವರ: ತನ್ನ 12 ಸಹಚರರೊಂದಿಗೆ ಪೊಲೀಸರಿಗೆ ಶರಣಾಗಲು ಸಿದ್ಧವಾಗಿದ್ದ ನಕ್ಸಲ್ ಕಮಾಂಡರ್‌ನನ್ನು ಆತನ ಸಹವರ್ತಿ, ಉನ್ನತ ಶ್ರೇಣಿಯ ಮಾವೋವಾದಿ ನಕ್ಸಲ್ ನಾಯಕನೇ ಕೊಂದು, ಬಳಿಕ ಶವವನ್ನು ಅರಣ್ಯದಲ್ಲಿ ಹೂತು ಹಾಕಿರುವ ಆಘಾತಕಾರಿ ಘಟನೆ ಒಡಿಶಾ ರಾಜ್ಯದಲ್ಲಿ ನಡೆದಿದೆ.

ತಲೆ ಮೇಲೆ 22 ಲಕ್ಷ ರು. ಇನಾಮು ಹೊಂದಿದ್ದ ಯುವ ನಕ್ಸಲ್ ಕಮಾಂಡರ್ ಅನ್ವೇಶ್ ಅಲಿಯಾಸ್ ರೇಣು ಕಂಧಮಲ್ ಕಾಳಹಂದಿ ಬೌಧ್ ನಾಯಗರ್ (ಕೆಕೆಬಿಎನ್) ಮಾವೋವಾದಿ ಸಂಘಟನೆಯಲ್ಲಿ ವಿಭಾಗೀಯ ಸಮಿತಿ ಸದಸ್ಯನಾಗಿದ್ದ. ಅನ್ವೇಶ್ ಛತ್ತೀಸ್‌ಗಢ ರಾಜ್ಯದ ಸುಕ್ಮಾ ಜಿಲ್ಲೆಯ ನಿವಾಸಿ.

ಅನ್ವೇಶ್‌ನ ಮೃತದೇಹ ಬುಧವಾರ ದಾರಿಂಗ್‌ಬಾದಿ ಪೊಲೀಸ್ ಠಾಣೆ ವ್ಯಾಪ್ತಿಯ ಮೀಸಲು ಅರಣ್ಯ ಪ್ರದೇಶದಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಅನ್ವೇಶ್‌ನನ್ನು ಕುಖ್ಯಾತ ಮಾವೋವಾದಿ ನಾಯಕ ಸುಕ್ರು ಎಂಬಾತನೇ ಜನವರಿ 29ರಂದೇ ಕೊಂದು ಅರಣ್ಯದಲ್ಲಿ ಹೂತು ಹಾಕಿದ್ದ ಎಂಬುದು ಪ್ರಾಥಮಿಕ ತನಿಖೆಗಳಿಂದ ತಿಳಿದುಬಂದಿದೆ.

ಕಂಧಮಾಲ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಸಿ.ಹರೀಶ್ ಹೇಳುವ ಪ್ರಕಾರ, ರಾಜ್ಯ ಸರಕಾರದ ಕರೆಯ ಮೇರೆಗೆ ಅನ್ವೇಶ್ ತನ್ನ ತಂಡದ 12 ಸಹಚರರ ಜತೆಗೂಡಿ ಪೊಲೀಸರಿಗೆ ಶರಣಾಗಲು ಬಯಸಿದ್ದ. ಅದನ್ನು ಆ ಪ್ರದೇಶದಲ್ಲಿನ ನಕ್ಸಲ್ ಚಟುವಟಿಕೆಗಳನ್ನು ಮುನ್ನಡೆಸುತ್ತಿರುವ ನಕ್ಸಲ್ ನಾಯಕ ಸುಕ್ರು, ಈ ಶರಣಾಗತಿ ನಡೆಯನ್ನು ಒಪ್ಪಲಿಲ್ಲ. ಹಾಗಿದ್ದೂ ತನ್ನ ತಂಡದೊಂದಿಗೆ ಶರಣಾಗುವೆ ಎಂದು ಅನ್ವೇಶ್ ಪಟ್ಟು ಹಿಡಿದಾಗ ಆತನಿಗೆ ಸುಕ್ರುವೇ ಗುಂಡಿಕ್ಕಿ ಸಾಯಿಸಿದ. ಬಳಿಕ ಅನ್ವೇಶ್ ಶವವನ್ನು ಸುಕ್ರು ಅರಣ್ಯದಲ್ಲೊಂದೆಡೆ ಹೂತು ಹಾಕಿದ.

ಗುಪ್ತಚರ ಮಾಹಿತಿ ಆಧರಿಸಿ ಶೋಧ

ಈ ಬಗ್ಗೆ ಖಚಿತ ಮಾಹಿತಿ ಪೊಲೀಸರಿಗೆ ಬುಧವಾರ ದೊರಕಿದ್ದು, ನಕ್ಸಲ್ ನಿಗ್ರಹ ಪಡೆಯ 2 ತಂಡಗಳು ದಾರಿಂಗ್‌ಬಾದಿ ಪ್ರದೇಶದ ಪಾಕರಿ ಮೀಸಲು ಅರಣ್ಯದಲ್ಲಿ ಶೋಧ ಕಾರ್ಯ ನಡೆಸಿದಾಗ ನಕ್ಸಲ್ ಕಮಾಂಡರ್ ಅನ್ವೇಶ್ ಶವ ಅರೆಬರೆ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಈಗ ನಕ್ಸಲ್ ನಾಯಕ ಸುಕ್ರು ಮತ್ತು ತಂಡಕ್ಕಾಗಿ ಪ್ರದೇಶದಲ್ಲಿ ಶೋಧ ನಡೆಸಲಾಗುತ್ತಿದೆ ಎಂದು ಎಸ್‌ಪಿ ಹರೀಶ್ ಸುದ್ದಿಗಾರರಿಗೆ ಗುರುವಾರ ಮಾಹಿತಿ ನೀಡಿದ್ದಾರೆ.

ಯಹೂದಿಗಳ ದೇಶ ಇಸ್ರೇಲ್‌ನಲ್ಲಿ ಎರಡು ದಿನಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಬೆಳಗ್ಗೆಯೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಮತ್ತಿತರ ಗಣ್ಯರ ಜತೆಗೂಡಿ ಜರ್ಮನಿಯ ನಾಜಿ ಸೈನ್ಯದಿಂದ ಸಾಮೂಹಿಕ ನರಹತ್ಯೆಗೆ (ಹೊಲೊಕಾಸ್ಟ್) ಒಳಗಾದ ಲಕ್ಷಾಂತರ ಯಹೂದಿ ಸಂತ್ರಸ್ತರ ಸ್ಮಾರಕ ಸ್ಥಳ 'ಯಾದ್ ವಾಶೆಮ್'ಗೆ ತೆರಳಿ ಗೌರವ ನಮನ ಸಲ್ಲಿಸಿದರು.

ಕೇರಳ ಸ್ಟೋರಿ-2ಗೆ ಹೈಕೋರ್ಟ್ ಮಧ್ಯಂತರ ತಡೆ

ಕೊಚ್ಚಿ: 'ದಿ ಕೇರಳ ಸ್ಟೋರಿ-2: ಗೋಸ್ ಬಿಯಾಂಡ್' ಸಿನಿಮಾ ಬಿಡುಗಡೆಗೆ ಕೇರಳ ಹೈಕೋರ್ಟ್ ಗುರುವಾರ ಮಧ್ಯಂತರ ತಡೆಯಾಜ್ಞೆ ನೀಡಿದೆ.ಫೆ.27ರಂದು ಸಿನಿಮಾ ಬಿಡುಗಡೆ ಆಗಲು ಸಿದ್ಧವಾಗಿತ್ತು. ಶುಕ್ರವಾರ ಸಿನಿಮಾ ಬಿಡುಗಡೆಗೆ ಅವಕಾಶ ನೀಡಲಾಗದು. ಸಿನಿಮಾವನ್ನು ವೀಕ್ಷಿಸಿ ನ್ಯಾಯಾಲಯ ಪರಾಮರ್ಶೆ ಮಾಡುವವರೆಗೂ ಸಿನಿಮಾ ಬಿಡುಗಡೆ ತಡೆ ಹಿಡಿಯುವಂತೆ ಚಲನಚಿತ್ರದ ನಿರ್ಮಾಣ ಸಂಸ್ಥೆಗೆ ನ್ಯಾಯಮೂರ್ತಿ ಬೆಚು ಕುರಿಯನ್ ಥಾಮಸ್ ಅವರ ಪೀಠ ಆದೇಶಿಸಿದೆ. ಕೇರಳ ರಾಜ್ಯವನ್ನು ಕೆಟ್ಟದಾಗಿ ಬಿಂಬಿಸುವ ಪ್ರಯತ್ನ 'ದಿ ಕೇರಳ ಸ್ಟೋರಿ 2' ಸಿನಿಮಾದಲ್ಲಿದೆ. ಈ ಸಿನಿಮಾದಿಂದ ಕೋಮು ಗಲಭೆ ಸಾಧ್ಯತೆ ಇದೆ ಎಂದು ಕಳವಳ ವ್ಯಕ್ತಪಡಿಸಿರುವ ಅರ್ಜಿದಾರರು, ಸಿನಿಮಾಗೆ ಪ್ರಮಾಣಪತ್ರ ನೀಡಿದ ಸೆನ್ಸಾರ್ ಮಂಡಳಿ ಕ್ರಮ ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು.

ಸೆನ್ಸಾರ್ ಮಂಡಳಿ ನಿಯಮಗಳನ್ನು ಪಾಲಿಸಿದೆಯೇ? ಎಂದು ಮಂಡಳಿಯ ಕಾರ್ಯವೈಖರಿ ಬಗ್ಗೆ ಹೈಕೋರ್ಟ್ ವಿಚಾರಣೆ ವೇಳೆ ಪ್ರಶ್ನೆ ಮಾಡಿದೆ. ಸಿನಿಮಾ ಟೀಸರ್‌ನಲ್ಲಿರುವ ಅಂಶಗಳು ಜನರ ಗ್ರಹಿಕೆಯನ್ನು ವಿರೂಪಗೊಳಿಸುವ ಮತ್ತು ಕೋಮು ಸಾಮರಸ್ಯ ಕದಡುವ ರೀತಿಯದಾಗಿವೆ ಎಂದೂ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಸಿನಿಮಾ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಭಾರೀ ಚರ್ಚೆ ನಡೆದಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೂ ಸಿನಿಮಾ ಟ್ರೇಲರ್ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. 'ದಿ ಕೇರಳ ಸ್ಟೋರಿ 2' ಸಿನಿಮಾದ ನಿರ್ದೇಶನ ಕಾಮಾಕ್ಯ ನಾರಾಯಣ್ ಸಿಂಗ್ ಅವರದ್ದಾಗಿದೆ. ವಿಪುಲ್ ಅಮೃತ್‌ಲಾಲ್ ಶಾ ನಿರ್ಮಾಪಕರು. ಉಲ್ಕಾ ಗುಪ್ತಾ, ಅದಿತಿ ಭಾಟಿಯಾ, ಐಶ್ವರ್ಯಾ ಊಜಾ ಪ್ರಮುಖ ಪಾತ್ರಧಾರಿಗಳು.

ಸಾಮಾಜಿಕ ಮಾಧ್ಯಮ: ವಿಶ್ವ ನಾಯಕರಲ್ಲೇ ನಮೋ ಅಗ್ರಗಣ್ಯ

ಮೋದಿ 'ಇನ್‌ಸ್ಟಾಗ್ರಾಂ'ಗೆ 10 ಕೋಟಿ ಫಾಲೊವರ್ಸ್

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಂಬಂಧಿಸಿದಂತೆ ಗುರುವಾರ ಹೊಸದೊಂದು ಮೈಲುಗಲ್ಲು ಸ್ಥಾಪನೆ ಯಾಗಿದೆ. ನರೇಂದ್ರ ಮೋದಿ ಅವರ ಇನ್‌ಸ್ಟಾಗ್ರಾಂ ಖಾತೆಗೆ 10 ಕೋಟಿ ಫಾಲೋವರ್ಸ್ ಜೋಡಣೆಯಾಗಿದ್ದಾರೆ. ಪ್ರಮುಖ ರಾಜಕಾರಣಿ, ದೇಶವೊಂದರ ಆಡಳಿತಾರರಾಗಿ ಬೃಹತ್ ಸಂಖ್ಯೆಯ ಪಾಲೊವರ್‌ಗಳನ್ನು ಹೊಂದಿರುವ ವಿಶ್ವದ ಮೊದಲ ನಾಯಕ ಎಂಬ ಖ್ಯಾತಿಯೂ ನರೇಂದ್ರ ಮೋದಿ ಅವರದ್ದಾಗಿದೆ.

2014ರಲ್ಲಿ ಪ್ರಧಾನಿಯಾದ ಬೆನ್ನಲ್ಲೇ ಮೆಟಾ ಕಂಪನಿಯ ಸಾಮಾಜಿಕ ಜಾಲತಾಣ 'ಇನ್‌ಸ್ಟಾಗ್ರಾಂ'ನಲ್ಲಿ ಖಾತೆ ತೆರೆದ ನರೇಂದ್ರ ದಾಮೋದರದಾಸ್ ಮೋದಿ ಅವರಿಗೆ ಕಳೆದ 12 ವರ್ಷಗಳಲ್ಲಿ ಹಂತ ಹಂತವಾಗಿ 10 ಕೋಟಿ ಅನುಯಾಯಿಗಳು ಸೇರ್ಪಡೆ ಯಾಗಿದ್ದಾರೆ.

ಟ್ರಂಪ್ ಬಲು ಹಿಂದೆ: ವಿಶ್ವದಲ್ಲೇ ಸಿರಿವಂತ ಮತ್ತು ಬಲಾಢ್ಯ ದೇಶವಾದ, ಅತ್ಯಧಿಕ ಪ್ರಮಾಣದ ಸೇನಾಶಕ್ತಿಯನ್ನೂ ಹೊಂದಿರುವ ಅಮೆರಿಕ ದೇಶದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೂ ಇಲ್ಲದಷ್ಟು ಇನ್‌ಸ್ಟಾ ಫಾಲೋವರ್‌ಗಳು ಭಾರತದ ಪ್ರಧಾನಿ ಮೋದಿ ಅವರಿಗಿದ್ದಾರೆ ಎಂಬುದು ಉಲ್ಲೇಖಾರ್ಹ. ಅಂಕಿ ಅಂಶ ಪ್ರಕಾರ ಟ್ರಂಪ್ ಇನ್‌ಸ್ಟಾ ಖಾತೆಗೆ 4.32 ಕೋಟಿ ಫಾಲೋವರ್ಸ್ ಇದ್ದಾರೆ. ಇದಕ್ಕೆ ಹೋಲಿಸಿದಲ್ಲಿ ನಮೋ ಇನ್‌ಸ್ಟಾ ಫಾಲೊವರ್‌ಗಳ ಸಂಖ್ಯೆ 2.32 ಪಟ್ಟು ಹೆಚ್ಚಿದೆ. ನಂತರದ ಸ್ಥಾನಗಳಲ್ಲಿ ಇಂಡೋನೇಷ್ಯಾ ಅಧ್ಯಕ್ಷ ಪ್ರೊಬೊವೊ ಸುಬಿಯಂತೊ(1.50 ಕೋಟಿ), ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನ್ಯಾಸಿಯೊ ಲುಲಾ ಡಿ.ಸಿಲ್ವಾ (1.44 ಕೋಟಿ), ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ (1.16 ಕೋಟಿ) ಮತ್ತು ಅರ್ಜೆಂಟಿನಾ ಅಧ್ಯಕ್ಷ ಕ್ಸೇವಿಯರ್ ಮಿಲಿ(64 ಲಕ್ಷ) ಇನ್‌ಸ್ಟಾ ಖಾತೆಗಳಿವೆ.

ಶಾ-ಯೋಗಿ ದಾಖಲೆ: ಅಚ್ಚರಿ ಎಂದರೆ, ಈ 4 ದೇಶದ ಪ್ರಮುಖರಿಗಿಂತಲೂ ಭಾರತದ ಗೃಹ ಸಚಿವ ಅಮಿತ್ ಶಾ(2.98 ಕೋಟಿ) ಮತ್ತು ಉತ್ತರ ಪ್ರದೇಶ ಮುಖ್ಯ ಮಂತ್ರಿ ಯೋಗಿ ಆದಿತ್ಯನಾಥ್(1.61 ಕೋಟಿ) ಇನ್‌ಸ್ಟಾಗ್ರಾಂ ಫಾಲೊ ೀವರ್ಸ್ ಸಂಖ್ಯೆಯೇ ಅಧಿಕವಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಇನ್‌ಸ್ಟಾಗ್ರಾಂ ಖಾತೆಗೂ 1.26 ಕೋಟಿ ಫಾಲೋವರ್ಸ್ ಇದ್ದಾರೆ.

ಇನ್‌ಸ್ಟಾಗ್ರಾಂ ಪ್ರಭಾವಿಗಳಿವರು

ಕ್ರ.ಸಂ.	ನಾಯಕರು	ದೇಶ	ಹುದ್ದೆ	ಫಾಲೊವರ್ಸ್ (ಕೋಟಿ)
1	ನರೇಂದ್ರ ಮೋದಿ	ಭಾರತ	ಪ್ರಧಾನಿ	10
2	ಡೊನಾಲ್ಡ್ ಟ್ರಂಪ್	ಅಮೆರಿಕ	ಅಧ್ಯಕ್ಷ	4.32
3	ಅಮಿತ್ ಶಾ	ಭಾರತ	ಗೃಹ ಸಚಿವ	2.98
4	ಯೋಗಿ ಆದಿತ್ಯನಾಥ್	ಭಾರತ	ಸಿಎಂ	1.62
5	ಸುಬಿಯಂತೊ	ಇಂಡೋನೇಷ್ಯಾ	ಅಧ್ಯಕ್ಷ	1.50
6	ಲೂಯಿಜ್	ಬ್ರೆಜಿಲ್	ಅಧ್ಯಕ್ಷ	1.44
7	ರಾಹುಲ್ ಗಾಂಧಿ	ಭಾರತ	ಸಂಸದ	1.26
8	ಎರ್ಡೊಗನ್	ಟರ್ಕಿ	ಅಧ್ಯಕ್ಷ	1.16
9	ಕ್ಸೇವಿಯರ್	ಅರ್ಜೆಂಟಿನಾ	ಅಧ್ಯಕ್ಷ	64(ಲಕ್ಷ)

ಗ್ರೇಡ್ ಆಧರಿಸಿ ಡಿಎಲ್ ನೂತನ ವ್ಯವಸ್ಥೆ: ಗಡ್ಕರಿ

ದೆಹಲಿ: ಜವಾಬ್ದಾರಿಯುತವಾಗಿ ವಾಹನ ಚಾಲನೆ ಮಾಡುವ ರೂಢಿಯನ್ನು ಜನರಲ್ಲಿ ಉತ್ತೇಜಿಸಲು ಮತ್ತು ಅಪಘಾತಗಳಾಗದಂತೆ ಕ್ರಮ ಕೈಗೊಳ್ಳಲು 'ಗ್ರೇಡ್ ಆಧಾರಿತ ಚಾಲನಾ ಪರವಾನಗಿ ವ್ಯವಸ್ಥೆ' ಪರಿಚಯಿಸಲು ಸರಕಾರ ಯೋಜಿಸುತ್ತಿದೆ ಎಂದು ಕೇಂದ್ರ ರಸ್ತೆ, ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.



ದೆಹಲಿಯಲ್ಲಿ 'ಸಿಐಐ' ಆಯೋಜಿಸಿದ್ದ ರಸ್ತೆ ಸುರಕ್ಷತೆ ರಾಷ್ಟ್ರೀಯ ಸಮಾವೇಶದಲ್ಲಿ ಗುರುವಾರ ಮಾತನಾಡಿದ ಸಚಿವರು, ವಾಹನ ಚಾಲಕರಿಗೆ ಅಂಕಗಳನ್ನು ನೀಡಲಾಗುವುದು. ನಿಯಮಗಳ ಉಲ್ಲಂಘನೆ, ಅಪಘಾತ ನಡೆಸಿದಾಗ ಅಂಕ ಕಡಿತವಾಗುತ್ತದೆ. ಒಂದು ಹಂತ ಮೀರಿದಾಗ ಚಾಲನಾ ಪರವಾನಗಿ(ಡಿಎಲ್) 6 ತಿಂಗಳು ಅಮಾನತಾಗಲಿದೆ, ತಪ್ಪುಗಳ ಪುನರಾವರ್ತನೆಯಾದರೆ ಡಿಎಲ್ ರದ್ದಾಗಲಿದೆ ಎಂದು ಹೇಳಿದ್ದಾರೆ.

ವಾಹನ ಚಾಲನೆ ವೇಳೆ ಮೊಬೈಲ್ ಫೋನ್ ಬಳಕೆ, ಅತಿ ವೇಗ, ಏಕಮುಖ ರಸ್ತೆಯಲ್ಲಿ ವಿರುದ್ಧ ದಿಕ್ಕಿನ ಸಂಚಾರ, ಮದ್ಯ ಸೇವಿಸಿ ವಾಹನ ಚಲಾಯಿಸುವುದು ಮೊದಲಾದ ಕ್ರಮಗಳಿಂದ ದೇಶದಲ್ಲಿ ವಾರ್ಷಿಕ 1.8 ಲಕ್ಷ ಜನ ಜೀವ ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ, ಡಿಎಲ್ ರದ್ದು ಸೇರಿದಂತೆ ಕಠಿಣ ಕ್ರಮಗಳು 'ಗ್ರೇಡ್ ಆಧಾರಿತ ಚಾಲನಾ ಪರವಾನಗಿ ವ್ಯವಸ್ಥೆ'ಯಲ್ಲಿರುತ್ತವೆ ಎಂದಿದ್ದಾರೆ.

ಸರಕಾರ ಈಗಾಗಲೇ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡ ಮೊತ್ತ ಹೆಚ್ಚಿಸಿದೆ. ಆದರೆ, ಆ ನಿಯಮ ಜಾರಿಯೇ ದೊಡ್ಡ ಸಮಸ್ಯೆಯಾಗಿದೆ. ವಾಹನ ಚಾಲಕರಿಗೆ ಕಾನೂನಿನ ಬಗ್ಗೆ ಭಯವೂ ಇಲ್ಲ, ಗೌರವ ಮೊದಲೇ ಇಲ್ಲ ಎಂದು ಸಚಿವರು ವಿಷಾದಿಸಿದರು.

ಕಾಶ್ಮೀರ ಅಭಿವೃದ್ಧಿ : ಪಾಕ್ ಕಣ್ಣುಕೆಸರು

ನ್ಯೂಯಾರ್ಕ್: ಭಾರತದ ಕೇಂದ್ರಾಡಳಿತ ಪ್ರದೇಶವಾದ ಜಮ್ಮು-ಕಾಶ್ಮೀರದಲ್ಲಿನ ಅಭಿವೃದ್ಧಿಗಾಗಿ ಭಾರತ ಸರಕಾರ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಮೊತ್ತ ಎಷ್ಟಿದೆ ಎಂದರೆ, ಅದು ಪಾಕಿಸ್ತಾನ ಅಂತಾ ರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್)ಗೆ ಕೋರಿಕೆ ಸಲ್ಲಿಸಿರುವ ಇತ್ತೀಚಿನ ಸಾಲದ ಕೋರಿಕೆ ಮೊತ್ತಕ್ಕಿಂತಲೂ 2 ಪಟ್ಟು ಹೆಚ್ಚಿನದಾಗಿದೆ ಎಂದು ಭಾರತ 'ವಿಶ್ವಸಂಸ್ಥೆ'ಯಲ್ಲಿ ಹೇಳಿದೆ. ಆ ಮೂಲಕ ಪಾಕ್‌ಗೆ ಸರಿಯಾದ ಪೆಟ್ಟು ನೀಡಿದೆ.

ಫೆ.23-ಮಾ.31ರ ಅವಧಿಯ ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿ(ಯುಎನ್‌ಎಚ್‌ಆರ್‌ಸಿ)-61ನೇ ಅಧಿವೇಶನದಲ್ಲಿ ಬುಧವಾರ ಮಾತನಾಡಿದ ಭಾರತದ ಪ್ರತಿನಿಧಿ ಅನುಪಮಾ ಸಿಂಗ್, ಪಾಕ್‌ನ ಗಮನದ ಕೇಂದ್ರವಾಗಿರುವ ಜಮ್ಮು-ಕಾಶ್ಮೀರದಲ್ಲಿ ಈಗಿನ ಅವಧಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ನೋಡಿದರೆ ನೆರೆಯ ದೇಶಕ್ಕೆ ಜೀರ್ಣಿಸಿಕೊಳ್ಳಲು ಕಷ್ಟವಾಗಬಹುದು ಎಂದು ಕುಟುಕಿದರು.

ಜಮ್ಮು-ಕಾಶ್ಮೀರದಲ್ಲಿ ಅಭಿವೃದ್ಧಿ ಶಕೆ ಪಾಕ್‌ನಲ್ಲಿನ ಸದ್ಯದ ಆರ್ಥಿಕ ಸವಾಲು-ಸಮಸ್ಯೆಗಳಿಗೆ ಪೂರ್ಣ ವ್ಯತಿರಿಕ್ತವಾಗಿದೆ. 2025ರಲ್ಲಿ ಕಾಶ್ಮೀರದ ಕಣಿವೆಯಲ್ಲಿ ವಿಶ್ವದಲ್ಲೇ ಅತ್ಯಂತ ಎತ್ತರದ 'ಚೆನಾಬ್ ರೈಲ್ವೆ ಸೇತುವೆ' ಉದ್ಘಾಟನೆಯಾಯಿತು. ಆ ಸೇತುವೆಯನ್ನೇ ನಕಲಿ ಎನ್ನುವ ಪಾಕಿಸ್ತಾನ, ಬಹುಶಃ ಲಾಲಾ ಭೂಮಿಯಲ್ಲಿ ವಾಸಿಸುತ್ತಿರಬೇಕು ಎಂದು ಗೇಲಿ ಮಾಡಿದರು.

ಪಾಕಿಸ್ತಾನ ಭಾರತದ ಪ್ರದೇಶಗಳನ್ನು ಅಕ್ರಮವಾಗಿ ಆಕ್ರಮಿಸಿಕೊಂಡಿದ್ದು, ಆದಷ್ಟೂ ಬೇಗ ಆ ಪ್ರದೇಶದಿಂದ ತೊಲಗಿ ಹೋಗುವಂತೆ ಪಾಕ್‌ಗೆ ಆಗ್ರಹಿಸಿದರು. ಈಗಿನ ಪರಿಸ್ಥಿತಿಯಲ್ಲಿ ಜಾಗಬಿಟ್ಟು ಹೋಗುವುದೊಂದೇ ಪಾಕ್‌ಗೆ ಇರುವ ಏಕೈಕ ಆಯ್ಕೆ ಎಂದರು.

ನ್ಯಾ.ಯಶವಂತ್ ವರ್ಮಾ ವಾಗ್ದಂಡನೆ: ಹೊಸ ಸಮಿತಿ

ದೆಹಲಿ: ಪ್ರಸ್ತುತ ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟ್‌ನಲ್ಲಿರುವ ನ್ಯಾಯಮೂರ್ತಿ ಯಶವಂತ್ ವರ್ಮಾ, ದೆಹಲಿ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿದ್ದಾಗ 2025ರ ಮಾರ್ಚ್‌ನಲ್ಲಿ ಅಧಿಕೃತ ನಿವಾಸದಲ್ಲಿ ಅಗ್ನಿ ಅವಘಡ ವೇಳೆ ಲಕ್ಷಾಂತರ ನಗದು ಪತ್ತೆಯಾಗಿತ್ತು ಎಂಬ ವರದಿ ಹಿನ್ನೆಲೆಯಲ್ಲಿ ವಾಗ್ದಂಡನೆ ಪ್ರಕ್ರಿಯೆ ಆರಂಭಿಸಲು ಲೋಕಸಭೆ ಸ್ಪೀಕರ್ ರಚಿಸಿದ್ದ ಜಂಟಿ ಸಮಿತಿಯು ಈಗ ಮರು ರಚನೆ ಆಗಿದೆ. ಅಲ್ಲದೇ, ಸಮಿತಿಯ ಕಾಲಾವಧಿಯನ್ನೂ 3 ತಿಂಗಳವರೆಗೆ ವಿಸ್ತರಿಸಲಾಗಿದೆ ಎಂದು ಲೋಕಸಭಾ ಸಚಿವಾಲಯದ ಮೂಲಗಳಿಂದ ಗುರುವಾರ ತಿಳಿದುಬಂದಿದೆ.



ನ್ಯಾ.ಯಶವಂತ್ ವರ್ಮಾ

ಹೊಸದಾಗಿ ರಚಿಸಲಾದ ಸಮಿತಿಯಲ್ಲಿ ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಅವರನ್ನು ಸೇರಿಸಲಾಗಿದೆ. ಉಳಿದಂತೆ ಹಿಂದಿನ ಸಮಿತಿಯಲ್ಲಿದ್ದಂತೆ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಹಾಗೂ ಕರ್ನಾಟಕ ಹೈಕೋರ್ಟ್‌ನ ಹಿರಿಯ ನ್ಯಾಯವಾದಿ ಬಿ.ವಿ.ಆಚಾರ್ಯ ಅವರನ್ನು ಮುಂದುವರಿಸಲಾಗಿದೆ. ಹಿಂದಿನ ಸಮಿತಿಯಲ್ಲಿದ್ದ ಹೈಕೋರ್ಟ್ ನ್ಯಾಯಮೂರ್ತಿ ಶ್ರೀವಾಸ್ತವ ಅವರು(62) ನಿವೃತ್ತರಾಗಿದ್ದರಿಂದ ಸಮಿತಿಯಿಂದಲೂ ನಿರ್ಗಮಿಸಿದ್ದಾರೆ.

ಹಲವು ಪ್ರತಿಪಕ್ಷಗಳ ಸಂಸದರು ಸಹಿ ಹಾಕಿದ್ದ ವಾಗ್ದಂಡನೆ ನೋಟಿಸ್ ಸಲ್ಲಿಕೆಯಾಗಿದ್ದರಿಂದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು 2025ರ ಆಗಸ್ಟ್‌ನಲ್ಲಿ ಮೂವರು ಸದಸ್ಯರ ಮೊದಲ ಸಮಿತಿ ರಚಿಸಿದ್ದರು.

ಸಮಾಚಾರ ಸಣ್ಣದಲ್ಲ

ಲೋಕಾ ಬಲೆಗೆ ಗ್ರಾಮ ಲೆಕ್ಕಾಧಿಕಾರಿ

ಹಾವೇರಿ: ಖಾತೆ ಬದಲಾವಣೆಗಾಗಿ 8,500 ರು.ಲಂಚ ಸ್ವೀಕಾರ ಮಾಡುತ್ತಿದ್ದ ವೇಳೆ ಗ್ರಾಮ ಲೆಕ್ಕಾಧಿಕಾರಿ

ಲೋಕಾಯುಕ್ತರ ಬಲೆಗೆ ಬಿದ್ದಿರುವ ಘಟನೆ ಹಾವೇರಿ ತಾಲೂಕಿನ ನೆಗಳೂರು ಗ್ರಾಮದ ಕಚೇರಿಯಲ್ಲಿ ನಡೆದಿದೆ. ಪಕ್ಕೀರೇಶ ಬಾರ್ಕಿ ಲೋಕಾಯುಕ್ತ ಬಲೆಗೆ ಬಿದ್ದ ಗ್ರಾಮ ಲೆಕ್ಕಾಧಿಕಾರಿ. ಪಕ್ಕೀರೇಶ ಬಸಾಪುರ ಗ್ರಾಮದ ರೈತ ಕರಿಯಲ್ಲಪ್ಪ ಕೆಸರಳ್ಳಿ ಎಂಬವರ ಬಳಿ ಖಾತೆ ಬದಲಾವಣೆಗೆ 63,000 ರು.ಗೆ ಬೇಡಿಕೆ ಇಟ್ಟಿದ್ದ. 30 ಸಾವಿರ ಹಣ ಮೊದಲೇ ಕೊಟ್ಟಿದ್ದರು. ಗುರುವಾರ 8,500 ರು. ಲಂಚ ಸ್ವೀಕಾರ ಮಾಡುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳ ಕೈಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ. ಲೋಕಾಯುಕ್ತ ಸಿಪಿಐ ಶ್ರೀದೇವಿ ಪಾಟೀಲ್ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ. ಸದ್ಯ ಆರೋಪಿಯನ್ನು ಲೋಕಾಯುಕ್ತ ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮಗ ಸಾವು: ತಂದೆಗೆ 1 ದಿನ ಜೈಲು ಶಿಕ್ಷೆ

ಗುಬ್ಬಿ: ಅಪ್ರಾಪ್ತ ವಯಸ್ಸಿನ ಮಗನಿಗೆ ದ್ವಿಚಕ್ರವಾಹನ ನೀಡಿ ಅಪಘಾತಕ್ಕೆ ಕಾರಣವಾಗಿದ್ದ ತಂದೆ ನಾಗೇಂದ್ರ

ಕುಮಾರ್ ಅವರಿಗೆ ನ್ಯಾಯಾಧೀಶೆ ಅನುಪಮಾ ಡಿ ಅವರು 25 ಸಾವಿರ ದಂಡ ಹಾಗೂ ಒಂದು ದಿನದ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ. 2024ರಲ್ಲಿ ಪಟ್ಟಣದಲ್ಲಿ ಬೈಕ್ ಹಾಗೂ ಬಸ್ ನಡುವೆ ನಡೆದಿದ್ದ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಗುಬ್ಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಾಸಿಕ್ಯೂಷನ್ ಪರ ಅಕ್ಷತಾ ವಿಶ್ವನಾಥ್ ವಾದ ಮಂಡಿಸಿದ್ದರು.

ನೈತಿಕ ಪೊಲೀಸ್‌ಗಿರಿ: ಇಬ್ಬರ ಬಂಧನ

ಮಂಗಳೂರು: ಮಂಗಳೂರಿನಲ್ಲಿ ಮತ್ತೊಂದು ನೈತಿಕ ಪೊಲೀಸ್‌ಗಿರಿ ಪ್ರಕರಣ ಬೆಳಕಿಗೆ ಬಂದಿದೆ. ಈ ಸಂಬಂಧ ತಂದೆ-ಮಗನನ್ನು ಬಂಧಿಸಲಾಗಿದೆ. ರೈಲ್ವೆ ಹಳಿಯಲ್ಲಿ ಕುಳಿತಿದ್ದ ಅಪ್ರಾಪ್ತ ವಿದ್ಯಾರ್ಥಿಗಳಿಗೆ ಅವಾಚ್ಯ ಶಬ್ದಗಳಿಂದ ಬೈದು, ಜಾತಿ ನಿಂದನೆ ಮಾಡಿ ಹಲ್ಲೆ ನಡೆಸಿದ ಆರೋಪದ ಮೇಲೆ ತಂದೆ ಮತ್ತು ಮಗನ



ವಿರುದ್ಧ ಮಂಗಳೂರು ದಕ್ಷಿಣ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಮಂಗಳೂರು ಹೊರವಲಯದ ಅತ್ತಾವರ ಬಾಬುಗುಡ್ಡೆ ಎಂಬಲ್ಲಿ ಈ ಘಟನೆ ನಡೆದಿದೆ. ಅಪ್ರಾಪ್ತ ಬಾಲಕ ಮತ್ತು ಬಾಲಕಿ ರೈಲ್ವೆ ಹಳಿಯ ಬಳಿ ಕುಳಿತಿದ್ದರು. ಈ ವೇಳೆ ಅಲ್ಲಿಗೆ ಬಂದ ಸ್ಟೀವನ್ ಮೊಂತೇರೋ ಮತ್ತು ಆತನ ಪುತ್ರ ಅವಿಲ್ ಎಂಬುವವರು ವಿದ್ಯಾರ್ಥಿಗಳ ವಿಡಿಯೊ ಮಾಡಲಾರಂಭಿಸಿದ್ದಾರೆ. ವಿದ್ಯಾರ್ಥಿಗಳಿಗೆ ಅಡ್ಡಗಟ್ಟಿದ ಆರೋಪಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ, ಬಾಲಕನ ಜಾತಿ ನಿಂದನೆ ಮಾಡಿ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಕೇವಲ ಹಲ್ಲೆಯಷ್ಟೇ ಅಲ್ಲದೆ, ವಿದ್ಯಾರ್ಥಿಗಳ ವಿಡಿಯೊ ಮಾಡಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡುವ ಮೂಲಕ ವಿದ್ಯಾರ್ಥಿಗಳ ಮಾನಹಾನಿಗೆ ಯತ್ನಿಸಿದ್ದಾರೆ ಎಂದು ಹೇಳಲಾಗಿದೆ. ವಿಡಿಯೊ ವೈರಲ್ ಆದ ಬೆನ್ನಲ್ಲೇ ಎಚ್ಚೆತ್ತ ಮಂಗಳೂರು ದಕ್ಷಿಣ ಠಾಣೆ ಪೊಲೀಸರು ಅಪ್ರಾಪ್ತ ವಿದ್ಯಾರ್ಥಿಗಳ ದೂರು ಆಧರಿಸಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
27.02.2026
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ
ಶ್ರೀ ನಂದೀಶ್ ಪಿ.ಕೆ.
ವಿಷಯ
ಅರವಿಂದರ ಸಾವಿತ್ರಿ, 14

ದಿನ ವಿಶೇಷ

27 ಫೆಬ್ರವರಿ 2026 ಶುಕ್ರವಾರ

» ಸೂರ್ಯೋದಯ	06-39
» ಸೂರ್ಯಾಸ್ತ	06-29
» ತಿಥಿ	ಏಕಾದಶಿ
» ನಕ್ಷತ್ರ	ಆರ್ದ್ರಾ
» ಸಂವತ್ಸರ	ವಿಶ್ವಾವಸು
» ಆಯನ	ಉತ್ತರಾಯಣ
» ಋತು	ಶಿಶಿರ
» ಮಾಸ	ಫಾಲ್ಗುಣ
» ಪಕ್ಷ	ಶುಕ್ಲ ಪಕ್ಷ

ನಾಯಕತ್ವ ಬದಲಾವಣೆ ವಿಷಯದಲ್ಲಿ ಗೊಂದಲ ಸೃಷ್ಟಿಸಲ್ಲ | ದಲಿತ ಸಿಎಂ ವಿಷಯದಲ್ಲಿ ಗೊಂದಲ ಮಾಡುವುದಿಲ್ಲ

ಸಿಎಂ ಹುದ್ದೆಗೆ ಲಾಬಿ ಮಾಡುತ್ತಿಲ್ಲ: ಪರಂ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಮುಖ್ಯಮಂತ್ರಿ ಹುದ್ದೆಗಾಗಿ ಯಾವುದೇ ಲಾಬಿಯನ್ನು ಮಾಡುತ್ತಿಲ್ಲ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ

ಹೈಕಮಾಂಡ್ ಭೇಟಿಯಾಗಲು ದೆಹಲಿಗೂ ಹೋಗುತ್ತಿಲ್ಲ. ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಹೆಚ್ಚು ಗೊಂದಲ ಮಾಡುವುದಿಲ್ಲ. ನಾಯಕತ್ವ ಬದಲಾವಣೆ ಕುರಿತಂತೆ ಹೆಚ್ಚು ವ್ಯಾಖ್ಯಾನ ಮಾಡುವುದರಿಂದ ಯಾವುದೇ ಉತ್ತರ ಸಿಗುವುದಿಲ್ಲ. ಹೈಕಮಾಂಡ್ ಯಾವ ಸಂದರ್ಭದಲ್ಲಿ ಯಾವ ತೀರ್ಮಾನವನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತದೆ. ಈ ಬಗ್ಗೆ ಚರ್ಚೆ ಮಾಡಿದರೆ ಉಪಯೋಗವಿಲ್ಲ ಎಂದು ಹೇಳಿದರು.

ತಮ್ಮ ಅಭಿಮಾನಿಗಳು, ಹಿತೈಷಿಗಳು ಕಾರ್ಯಕ್ರಮಗಳಲ್ಲಿ ಭಾಗಿಯಾದ ಸಂದರ್ಭದಲ್ಲಿ ಘೋಷಣೆಗಳನ್ನು ಕೂಗುತ್ತಾರೆ. ಅವರು ಅಪೇಕ್ಷೆ ಪಡುತ್ತಾರೆ. ಅವರ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಅದನ್ನು ತಡೆಯಲಾಗುವುದಿಲ್ಲ. ಈಗಾಗಲೇ ಆ ರೀತಿ ಭಾವನೆ ವ್ಯಕ್ತಪಡಿಸದಂತೆ ಅಭಿಮಾನಿಗಳು, ಹಿತೈಷಿಗಳಿಗೆ ಹೇಳಿದ್ದೇನೆ. ಆದರೂ ಅವರು ಮಾಡುತ್ತಿದ್ದಾರೆ. ನಾಯಕತ್ವದ ಗೊಂದಲಕ್ಕೆ ಕೈ ಜೋಡಿಸುವುದಿಲ್ಲ ಎಂದರು.

ಗಂಭೀರವಾಗಿ ಪರಿಗಣನೆ:

ರಾಜ್ಯದಲ್ಲಿ ನಾಪತ್ತೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಜಿಲ್ಲೆ ಮತ್ತು ರಾಜ್ಯ ಮಟ್ಟದ ಸಭೆಗಳಲ್ಲಿ ಈ ವಿಚಾರದ ಬಗ್ಗೆ ಗಂಭೀರ ಚರ್ಚೆ ಪರಿಶೀಲನೆಗಳನ್ನು ಮಾಡಲಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ ಮಕ್ಕಳು ಪತ್ತೆಯಾಗಿದ್ದಾರೆ. ಸ್ವಯಂ ಘೋಷಿತ ದೇವಮಾನವ ಮಲ್ಲಿಕಾರ್ಜುನ ಮುತ್ಯಾ ಮೇಲಿನ ಆರೋಪದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಆ ಬಗ್ಗೆ ವರದಿ ಪಡೆಯಲಾಗುವುದು ಎಂದರು. ಬಾಂಗ್ಲಾ ದೇಶ ಸೇರಿದಂತೆ ವಿದೇಶಗಳಿಂದ ಆಗಮಿಸಿ ವೀಸಾ ಅವಧಿ ಮುಗಿದರೂ ಇಲ್ಲೇ ಇರುವವರನ್ನು ಹುಡುಕಲಾಗುತ್ತಿದೆ. ಒಮ್ಮೆ ಬಂದವರು ಮತ್ತೆ ಅವರ ದೇಶಗಳಿಗೆ ವಾಪಸ್ಸಾಗಿರುವ ಬಗ್ಗೆ ವಲಸೆ ವಿಭಾಗದಲ್ಲಿ ಮಾಹಿತಿಯಿರುವುದಿಲ್ಲ. ಅಂತವರನ್ನು ಹುಡುಕಲಾಗುತ್ತಿದೆ. ಅಲ್ಲದೆ ಬಾಂಗ್ಲಾದಿಂದ ಅಕ್ರಮವಾಗಿ ಬಂದಿದ್ದಾರೆ. ಗುರುತಿನ ಚೀಟಿಯನ್ನು ಮಾಡಿಸಿಕೊಂಡಿದ್ದಾರೆ. 15 ರಿಂದ 20 ಲಕ್ಷ ಇರಬಹುದು ಎಂಬ ಮಾತುಗಳು ಕೇಳಬಂದಿದ್ದು, ಈ ವಿಚಾರ ಸದನದಲ್ಲೂ ಚರ್ಚೆಯಾಗಿದ್ದು, ಅಂತವರನ್ನು ಹುಡುಕುವುದಾಗಿ ಭರವಸೆ ನೀಡಿದ್ದೆ ಎಂದರು.

ಹಂತಹಂತವಾಗಿ ಖಾಲಿ ಹುದ್ದೆ ಭರ್ತಿ

ಯುವಕರಿಗೆ ಉದ್ಯೋಗ ಸಿಗದಿರುವುದು ಗಂಭೀರವಾದ ವಿಚಾರ. ಹೆಚ್ಚು ವಿದ್ಯಾವಂತರಾಗಬೇಕೆಂದು ಉತ್ತೇಜನ ನೀಡುತ್ತೇವೆ. ಅವರಿಗೆ ಉದ್ಯೋಗ ಸಿಗಬೇಕು. ಒಳಮೀಸಲಾತಿಯಿಂದಾಗಿ ನೇಮಕಾತಿ ನಿಧಾನವಾಗಿದೆ. ಈ ಪಕ್ಷದ ಪ್ರಣಾಳಿಕೆಯಲ್ಲಿ ಹಂತಹಂತವಾಗಿ ಖಾಲಿ ಹುದ್ದೆ ಭರ್ತಿ ಮಾಡುವುದಾಗಿ ಭರವಸೆ ನೀಡಿದ್ದೆವು. ಗೃಹ ಇಲಾಖೆಯಲ್ಲಿ 17 ಸಾವಿರ ಹುದ್ದೆಗಳು ಖಾಲಿ ಇದ್ದು, ಅವುಗಳ ಭರ್ತಿಗೆ ಅನುಮತಿ ಸಿಕ್ಕಿದೆ ಎಂದರು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ನಾವೆಲ್ಲಾ ಸೇರಿಯೇ ಪ್ರಣಾಳಿಕೆಯನ್ನು ಸಿದ್ಧಪಡಿಸಿದ್ದೇವೆ. ಪಕ್ಷದ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಅವರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗ್ಯಾರಂಟಿಯಿಂದ ಹೊರೆಯಾಗಿದೆ ಎಂದು ಅನ್ನಿಸಿರಬಹುದು. ಅದು ಅವರ ಅಭಿಪ್ರಾಯ. ಈ ವಿಚಾರದಲ್ಲಿ ನಾವೆಲ್ಲಾ ಕೂತು ಚರ್ಚೆ ಮಾಡುತ್ತೇವೆ. ಸಂಪುಟ ಸಭೆಯಲ್ಲೂ ಈ ಬಗ್ಗೆ ಚರ್ಚೆಯಾಗಬಹುದು ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

> **ದಲಿತ ಸಿಎಂ ಬಗ್ಗೆ ನಾನು ಯಾವುದೇ ಲಾಬಿ ಮಾಡುತ್ತಿಲ್ಲ. ದಲಿತ ಸಿಎಂ ಗೊಂದಲ ಹೆಚ್ಚು ಮಾಡಲು ನಾನು ತಯಾರಿಲ್ಲ ಹಾಗೂ ಈ ಗೊಂದಲಕ್ಕೆ ನಾನು ಕೈಜೋಡಿಸಲು ಹೋಗಲ್ಲ. ದಲಿತ ಸಿಎಂ ವಿಚಾರದಲ್ಲಿ ಹೈಕಮಾಂಡ್ ಸೂಕ್ತ ಸಂದರ್ಭದಲ್ಲಿ ಸೂಕ್ತ ತೀರ್ಮಾನ ಮಾಡುತ್ತದೆ. ಹೀಗಾಗಿ ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಅಗತ್ಯವಿಲ್ಲ. ನಾನು ಯಾವ ಲಾಬಿಯನ್ನು ಮಾಡಿಲ್ಲ, ಮಾಡುತ್ತಿಲ್ಲ.**
> **- ಡಾ.ಜಿ.ಪರಮೇಶ್ವರ, ಗೃಹ ಸಚಿವ**

127ಕೆ.ಜಿ ಚಿನ್ನ ಸಾಗಿಸಿದ ರನ್ಯಾ ತಂಡ

ಬೆಂಗಳೂರು: ರನ್ಯಾ ರಾವ್ ಮತ್ತು ಆಕೆಯ ಸಹಚರರು ನಡೆಸುತ್ತಿದ್ದ ಬೃಹತ್ ಚಿನ್ನ ಕಳ್ಳಸಾಗಣೆ ಜಾಲವನ್ನು ಇ.ಡಿ ಬಯಲು ಮಾಡಿದೆ. ಅಕ್ರಮ ಹಣ ವರ್ಗಾವಣೆ ತಡೆ

ಕಾಯಿದೆ ವಿಶೇಷ ನ್ಯಾಯಾಲಯದಲ್ಲಿ ಚಾರ್ಜ್‌ಶೀಟ್ ಸಲ್ಲಿಕೆಯಾಗಿದ್ದು, ನಟಿ ಜೊತೆಗೆ ಆಕೆಯ ಸಹಚರರಾದ ತರುಣ್ ಕೊಂಡೂರು ಮತ್ತು ಸಾಹಿಲ್ ಸಕಾರಿಯಾ ಜೈನ್ ಅವರ ಹೆಸರುಗಳನ್ನು ಆರೋಪಿಗಳಾಗಿ ಉಲ್ಲೇಖಿಸಲಾಗಿದೆ. ಒಂದು ವರ್ಷದ ಅವಧಿಯಲ್ಲಿ ಈ ಗ್ಯಾಂಗ್ ಬರೋಬ್ಬರಿ 102.55 ಕೋಟಿ ರು. ಮೌಲ್ಯದ 127.287 ಕೆ.ಜಿ. ಚಿನ್ನವನ್ನು ಅಕ್ರಮವಾಗಿ ಭಾರತಕ್ಕೆ ತಂದಿರುವ ಬಗ್ಗೆ ಇ.ಡಿ ಅಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ. ಹವಾಲಾ ಜಾಲ ಮತ್ತು ಕಪ್ಪು ಹಣ ಬಿಳಿಯಾಗಿದ್ದುಮಾರ್ಚ್ 2024 ರಿಂದ ಮಾರ್ಚ್ 2025ರ ನಡುವಿನ ಕೇವಲ ಹನ್ನೆರಡು ತಿಂಗಳ ಅವಧಿಯಲ್ಲಿ ಈ ಜಾಲವು 127 ಕೆ.ಜಿ.ಗೂ ಅಧಿಕ ಚಿನ್ನವನ್ನು ವಿದೇಶದಿಂದ ವ್ಯವಸ್ಥಿತವಾಗಿ ಕಳ್ಳಸಾಗಣೆ ಮಾಡಿದೆ. ವಿದೇಶದಿಂದ ಅಕ್ರಮವಾಗಿ ತಂದ ಚಿನ್ನವನ್ನು ಸ್ಥಳೀಯ ಜ್ಯುವೆಲ್ಲರಿ ಅಂಗಡಿಗಳು ಮತ್ತು ಹ್ಯಾಂಡ್ಲರ್‌ಗಳ ಜಾಲದ ನೆರವಿನಿಂದ ದೇಶೀಯ ಮಾರು ಕಟ್ಟೆಯಲ್ಲಿ ವಿಲೇವಾರಿ ಮಾಡಲಾ ಗುತ್ತಿತ್ತು. ಇದರಿಂದ ಉತ್ಪತ್ತಿಯಾದ ಕೋಟ್ಯಂತರ ರು. ನಗದನ್ನು ಹವಾಲಾ ಮಾರ್ಗದ ಮೂಲಕ ಭಾರತ ಮತ್ತು ವಿದೇಶಗಳಲ್ಲಿ ವರ್ಗಾವಣೆ ಮಾಡಲಾಗುತ್ತಿತ್ತು ಎಂದು ಇ.ಡಿ ತನ್ನ ದೋಷಾರೋಪ ಪಟ್ಟಿಯಲ್ಲಿ ಸ್ಪಷ್ಟಪಡಿಸಿದೆ.

ಶೆಲ್ ಸಂಸ್ಥೆಗಳಿಂದ ಅಕ್ರಮ ಹಣ ವರ್ಗಾವಣೆ ಕಳ್ಳಸಾಗಣೆಯಿಂದ ಬಂದ ಕಪ್ಪು ಹಣ ಕಾನೂನುಬದ್ಧ ವ್ಯಾಪಾರದ ಆದಾಯವೆಂದು ಬಿಂಬಿಸಲು, ಆರೋಪಿಗಳು ಅನೇಕ ನಕಲಿ ಬ್ಯಾಂಕ್ ಖಾತೆಗಳು ಮತ್ತು ಶೆಲ್ ಸಂಸ್ಥೆಗಳ ಮೂಲಕ ಅಕ್ರಮ ಹಣ ವರ್ಗಾವಣೆ ಮಾಡುತ್ತಿದ್ದರು ಎಂಬುದು ತನಿಖೆಯಿಂದ ದೃಢಪಟ್ಟಿದೆ.

34 ಕೋಟಿ ರು. ಮೌಲ್ಯದ ಆಸ್ತಿ ಜಪ್ತಿ

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ರನ್ಯಾ ರಾವ್ ಭಾಗಿಯಾಗಿರುವ ಆರೋಪದಡಿ ಜುಲೈ 4, 2025 ರಂದು ಪಿಎಂಎಲ್‌ಎ ಕಾಯಿದೆ ಸೆಕ್ಷನ್ 5(1) ರ ಅಡಿಯಲ್ಲಿ ರನ್ಯಾ ರಾವ್ ಹೆಸರಿನಲ್ಲಿದ್ದ ಸುಮಾರು 34.12 ಕೋಟಿ ರು. ಮೌಲ್ಯದ ಸ್ಥಿರಾಸ್ತಿಗಳನ್ನು ಇ.ಡಿ ತಾತ್ಕಾಲಿಕವಾಗಿ ಜಪ್ತಿ ಮಾಡಿದೆ. ರನ್ಯಾ ರಾವ್ ಸೇರಿ ಎಲ್ಲ ಆರೋಪಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

400ಕ್ಕೂ ಹೆಚ್ಚು ವೈದ್ಯ ವಿದ್ಯಾರ್ಥಿಗಳಿಗೆ ದಂಡ

ಕಡ್ಡಾಯ ಗ್ರಾಮೀಣ ಸೇವೆಗೆ ಚಕ್ಕರ್

ಬೆಂಗಳೂರು: ಸರಕಾರಿ ಕೋಟಾದ ಅಡಿಯಲ್ಲಿ ಸರಕಾರಿ ಕಾಲೇಜ್ ಅಥವಾ ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆದ

ಎಂಬಿಬಿಎಸ್ ವಿದ್ಯಾರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಸೇವೆ ಸಲ್ಲಿಸಬೇಕು ಎಂಬ ನಿಯಮ ಇದೆ. ಸದ್ಯ ಈ ನಿಯಮದಿಂದ ತಪ್ಪಿಸಿಕೊಂಡ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಸರಕಾರ ಶಾಕ್ ನೀಡಿದೆ. ಗ್ರಾಮೀಣ ಸೇವೆ ತಪ್ಪಿಸಿದ 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ 15 ಲಕ್ಷ ರು. ದಂಡದ ನೋಟಿಸ್ ನೀಡಲಾಗಿದೆ.

ಕರ್ನಾಟಕದಲ್ಲಿ ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆಗೆ ಹಾಜರಾಗದ 400ಕ್ಕೂ ಹೆಚ್ಚು ವೈದ್ಯ ವಿದ್ಯಾರ್ಥಿಗಳಿಗೆ ತಲಾ 15 ಲಕ್ಷ ರು. ದಂಡ ಕಟ್ಟುವಂತೆ ರಾಜ್ಯ ಸರಕಾರ ಶಾಕ್ ನೀಡಿದೆ. ಈ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನೋಟಿಸ್ ಹೊರಡಿಸಲಾಗಿದೆ. 30 ದಿನಗಳೊಳಗೆ ದಂಡ ಪಾವತಿಸದಿದ್ದರೆ ಕಾನೂನು ಕ್ರಮಕ್ಕೆಗೊಳ್ಳುವುದಾಗಿ ಎಚ್ಚರಿಕೆ ನೀಡಿದೆ.2025ರಲ್ಲಿ ಪದವಿ ಪಡೆಯುತ್ತಿರುವ 8,171 ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಕಳುಹಿಸಿದೆ. ಈ ಪೈಕಿ ಕಡ್ಡಾಯ ಗ್ರಾಮೀಣ ಸೇವೆಗೆ 1,772 ಹುದ್ದೆಗಳು ಲಭ್ಯವಾಗಿವೆ. ಎಲ್ಲಾ ಹುದ್ದೆಗಳನ್ನು ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡಲಾಗಿದೆ.

6,119 ಹೆಚ್ಚುವರಿ ಅಭ್ಯರ್ಥಿಗಳಿಗೆ ಕಡ್ಡಾಯ ಸೇವೆಯಿಂದ ವಿನಾಯಿತಿ ನೀಡಲಾಗಿದೆ. ಕೌನ್ಸಿಲಿಂಗ್ ವೇಳೆ ಲಾಗಿನ್ ಮಾಡದ ಅಥವಾ ಸ್ಥಳ ಆಯ್ಕೆ ಮಾಡದ ಹಾಗೂ ಸೇವೆಗೆ ಹಾಜರಾಗದ 208 ಅಭ್ಯರ್ಥಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ.

ನಿಯಮಗಳ ಪ್ರಕಾರ ಗ್ರಾಮೀಣ ಸೇವೆ ಕೈಬಿಟ್ಟರೆ 15 ಲಕ್ಷ ರು. ದಂಡ ಸರಕಾರಕ್ಕೆ ಪಾವತಿಸಬೇಕು.

ಕೋಲಾರ: ಎಂಟು ಕ್ರಷರ್‌ಗಳನ್ನು ಮುಚ್ಚಲು ಕೆಎಸ್‌ಪಿಸಿಬಿ ಸೂಚನೆ

ಕೋಲಾರ: ಪರಿಸರ ನಿಯಮ ಉಲ್ಲಂಘನೆ, ಲೋಪವೆಸಗಿರುವ ಸಂಬಂಧ ಜಿಲ್ಲೆಯ 8 ಕ್ರಷರ್‌ಗಳನ್ನು ಮುಚ್ಚಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಸೂಚನೆ ನೀಡಿದೆ ಎಂದು ದೂರುದಾರರು ಹಾಗೂ ಸಾಮಾಜಿಕ ಕಾರ್ಯಕರ್ತರಾದ ಡಿ.ಮುನೇಶ್ ಚಂಜಿಮಲೆ ಹಾಗೂ ನವೀನ್ ಕುಮಾರ್ ತಿಳಿಸಿದ್ದಾರೆ. ಗಂಭೀರ ಪರಿಸರ ನಿಯಮ ಉಲ್ಲಂಘನೆ ಮಾಡುತ್ತಿರುವ ಕೆಲ ಕ್ರಷರ್‌ಗಳಿಗೆ ಮೂರು ತಿಂಗಳ ಅವಧಿ ನೀಡಲಾಗಿದೆ ಎಂದಿದ್ದಾರೆ. ಮಾಲೂರು ಸೇರಿದಂತೆ ಜಿಲ್ಲೆಯಾದ್ಯಂತ ಒಟ್ಟು 27 ಕ್ರಷರ್ ಘಟಕಗಳನ್ನು ಜಿಲ್ಲಾ ಪರಿಸರ ಅಧಿಕಾರಿಗಳ ವರದಿಯಲ್ಲಿ ಗಂಭೀರ ಪರಿಸರ ನಿಯಮ ಉಲ್ಲಂಘನೆ ಮಾಡಿರುವುದಾಗಿ ಉಲ್ಲೇಖಿಸಲಾಗಿತ್ತು. ಈ ವರದಿ ಆಧಾರದ ಮೇಲೆ ಹಿರಿಯ ಪರಿಸರ ಅಧಿಕಾರಿಗಳು (ಬೆಂಗಳೂರು ಪೂರ್ವ ವಲಯ) ವಿಚಾರಣೆ ನಡೆಸಿ

ಕ್ರಮಕ್ಕೆ ಮಂಡಳಿಗೆ ಶಿಫಾರಸ್ಸು ಮಾಡಿದ್ದರು ಎಂದು ಹೇಳಿದ್ದಾರೆ. 27 ಘಟಕಗಳ ವಿರುದ್ಧ ಕ್ರಮಕ್ಕೆ ಶಿಫಾರಸ್ಸು ಮಾಡಿದ್ದರೂ ಮಂಡಳಿಯು ಕೇವಲ 8 ಕ್ರಷರ್‌ಗಳನ್ನು ಮಾತ್ರ ಮುಚ್ಚಲು ಜಿಲ್ಲಾ ಪರಿಸರ ಅಧಿಕಾರಿಗೆ ಸೂಚನೆ ನೀಡಿರುವುದು ಅನುಮಾನ ಮಾಡಿಸಿದೆ. ಕೆಲವು ಘಟಕಗಳ ವಿರುದ್ಧ ವಿಚಾರಣೆ ನಡೆದು ಆರು ತಿಂಗಳಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಎಲ್ಲಾ ಘಟಕಗಳ ವಿರುದ್ಧ ಕ್ರಮ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಇಂದು ಬಿಎಸ್‌ವೈ ಜನ್ಮದಿನ

ಶಿಕಾರಿಪುರ: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ 84ನೇ ಜನ್ಮದಿನಾಚರಣೆ ಹಿನ್ನೆಲೆ ಶುಕ್ರವಾರ ಶಿಕಾರಿಪುರದಲ್ಲಿ ಅದ್ಧೂರಿ ಕಾರ್ಯಕ್ರಮಕ್ಕೆ ಬಿಎಸ್‌ವೈ ಅಭಿಮಾನಿ ಬಳಗ ಸಿದ್ಧತೆ ಮಾಡಿಕೊಂಡಿದೆ.



ಶುಕ್ರವಾರ ಬೆಳಗ್ಗೆ 9 ಕ್ಕೆ ಯಡಿಯೂರಪ್ಪನವರ ಸಮಕ್ಷಮದಲ್ಲಿ ಕ್ಷೇತ್ರ ದೇವತೆ ಹುಚ್ಚುರಾಯ ಸ್ವಾಮಿ ದೇವಸ್ಥಾನ ಹಾಗೂ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಬಳಿಕ ಗೃಹ ಕಚೇರಿಯಲ್ಲಿ ಅಭಿಮಾನಿಗಳು ಕಾರ್ಯಕರ್ತರ ಶುಭ ಆರೈಕೆ ಸ್ವೀಕರಿಸಲಿದ್ದಾರೆ.

ಸಂಜೆ 4ಕ್ಕೆ ಕುಮದ್ವತಿ ಕಾಲೇಜಿನ ಏಕಲವ್ಯ ಕ್ರೀಡಾಂಗಣದ ಬೃಹತ್ ವೇದಿಕೆಯಲ್ಲಿ ಆನಂದಪುರ ಮುರುಘಾಮಠದ ಶ್ರೀ ಮನಿಪ್ರ ಮುರುಘರಾಜೇಂದ್ರ ಮಹಾ ಸ್ವಾಮಿಗಳ ಸಹಿತ ತಾಲೂಕಿನ ಎಲ್ಲ ಹರಗುರುಚರ ಮೂರ್ತಿಗಳ ದಿವ್ಯ ಸಾನ್ನಿಧ್ಯದಲ್ಲಿ ತಾಲೂಕಿನ ಎಲ್ಲ ಸಮುದಾಯದ ಹಿರಿಯರು, ಅಧ್ಯಕ್ಷರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದ್ದು ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಅಭಿನಂದನಾ ಬಾಷಣ ಮಾಡಲಿದ್ದಾರೆ. ಸಂಸದ ರಾಘವೇಂದ್ರ, ಶಾಸಕ ವಿಜಯೇಂದ್ರ ಸಹಿತ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಅದ್ಧೂರಿ ಸಂಗೀತ ಸಂಜೆ

ಪ್ರಸಿದ್ಧ ಸಂಗೀತ ನಿರ್ದೇಶಕ ಅರ್ಜುನ್ ಜನ್ಯಾ ತಂಡದಿಂದ ಸಂಗೀತ ಕಾರ್ಯಕ್ರಮದಲ್ಲಿ ಖ್ಯಾತ ನಿರೂಪಕಿ ಅನುಶ್ರೀ ಗಾಯಕಿ ಮಂಗ್ಲಿ, ಹನುಮಂತನಾಯ್ಕ, ಗಿಲ್ಲಿ ನಟರಾಜ್, ಕಾವ್ಯ, ವ್ಯಾಸ ರಾಜ್, ನಿಶಾನ್ ರೈ, ಸುನೀಲ್, ಜಸ್ಕರಣ್ ಸಿಂಗ್, ಐಶ್ವರ್ಯ, ಪೃಥ್ವಿಭಟ್ ಹೆಸರಾಂತ ಕಲಾವಿದರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದ್ದು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು, ಜನತೆ ಪಾಲ್ಗೊಳ್ಳಲಿದ್ದಾರೆ.

ಕಾಮಗಾರಿಗೆ ಚಾಲನೆ ನೀಡಿದ ಕೊಡಗು-ಮೈಸೂರು ಸಂಸದ ಯದುವೀರ್ ಒಡೆಯರ್

ಗುಡ್ಡ ಕುಸಿತ ಸ್ಥಳಗಳಿಗೆ ಶಾಶ್ವತ ತಡೆಗೋಡೆ

ಮಡಿಕೇರಿ: 2018 ರ ದುರಂತದ ಬಳಿಕ ಕೊಡಗು ಜಿಲ್ಲೆಯಲ್ಲಿ ಪ್ರತಿವರ್ಷ ಮಳೆಗಾಲ ಆರಂಭವಾದರೆ ಸಾಕು ಜಿಲ್ಲೆ ಯ ಜನ ಬೆಚ್ಚಿಬೀಳುತ್ತಾರೆ. ಮತ್ತೊಂದು ಕಡೆ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಗುಡ್ಡ ಕುಸಿತವಾಗಿ ರಸ್ತೆ ಸಂಚಾರಕ್ಕೂ ಅಡಚಣೆ ಉಂಟಾಗುತ್ತೆ. ಇದಕ್ಕೆ ಪರಿಹಾರ ಕಲ್ಪಿಸಲು ಕೇಂದ್ರ ಸರಕಾರ ಮುಂದಾಗಿದೆ. ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಗುಡ್ಡ ಕುಸಿಯುವ ಸ್ಥಳಗಳನ್ನು ಗುರುತಿಸಿ ಶಾಶ್ವತ ತಡೆಗೋಡೆ ನಿರ್ಮಾಣ ಮಾಡಲು ಮುಂದಾಗಿದೆ.

ಪ್ರತಿವರ್ಷ ಮಳೆಗಾಲದಲ್ಲಿ ಮೈಸೂರು-ಮಡಿಕೇರಿ ರಾಷ್ಟ್ರೀಯ ಹೆದ್ದಾರಿ, ಮಡಿಕೇರಿ-ಸಂಪಾಜೆ ಹೆದ್ದಾರಿಯಲ್ಲಿ ರಸ್ತೆ ಕುಸಿತ ಅಥವಾ ಬೆಟ್ಟಗುಡ್ಡ ಕುಸಿಯುವುದು ಸಾಮಾನ್ಯ ವಾಗಿಬಿಟ್ಟಿದೆ.

ಗುಡ್ಡ ಕುಸಿತ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿದರು.

ಮಡಿಕೇರಿ-ಸಂಪಾಜೆ ರಸ್ತೆಯ 18 ಕಡೆಗಳಲ್ಲಿ ಗುಡ್ಡಗಳು ಕುಸಿತ ಸಂಭವಿಸುತ್ತಲೇ ಇತ್ತು. ಇದನ್ನು ಮನಗಂಡ ಅಂದಿನ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಗುಡ್ಡ ಕುಸಿತ ಉಂಟಾಗುವ ಹೆದ್ದಾರಿಗೆ ತಡೆಗೋಡೆ ನಿರ್ಮಿಸುವುದಕ್ಕೆ ಯೋಜನೆ ರೂಪಿಸಿ ಕೇಂದ್ರಕ್ಕೆ ವರದಿ ಸಲ್ಲಿಸಿದ್ದರು. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು 18 ಕಡೆಗಳಲ್ಲಿ ತಡೆಗೋಡೆ ನಿರ್ಮಿಸುವುದಕ್ಕೆ ಸುಮಾರು 94.80 ಕೋಟಿ ರು. ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆ ಮಡಿಕೇರಿ ತಾಲೂಕಿನ ಮದೆನಾಡು ಗ್ರಾಮ ಪಂಚಾಯತಿ ವ್ಯಾಪ್ತಿ ಕರ್ತೋಜಿ ಗ್ರಾಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಡೆಗೋಡೆ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಇದರಿಂದ ಹರ್ಷ ಗೊಂಡ ಸ್ಥಳೀಯರು ಕೇಂದ್ರ ಸರಕಾರ ಹಾಗೂ ಯದುವೀರ್ ಅವರ ಕಾರ್ಯವನ್ನು ಶ್ಲಾಘಿಸಿದ್ದಾರೆ.

ಭೂ ಪರಿಹಾರ ವಿಳಂಬ: ಡಿಸಿ ಕಾರು ಜಪ್ತಿ

ಕಲಬುರಗಿ: ಭೂಸ್ವಾಧೀನಗೊಂಡ ಜಮೀನಿಗೆ ಹಲವು ವರ್ಷಗಳಿಂದ ಪರಿಹಾರ ಮೊತ್ತ ಪಾವತಿಸದ ಹಿನ್ನೆಲೆ ನ್ಯಾಯಾಲಯದ ಆದೇಶದಂತೆ ಜಿಲ್ಲಾಧಿಕಾರಿಗಳ ಅಧಿಕೃತ ಕಾರು ಜಪ್ತಿ ಮಾಡಲಾಗಿದೆ. ಪ್ರಕಾಶ್ ಮಲಕಪ್ಪ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಜಿಲ್ಲಾ ಪ್ರಧಾನ ಸಿವಿಲ್ ನ್ಯಾಯಾಲಯ, ಪರಿಹಾರ ನೀಡುವಲ್ಲಿ ವಿಳಂಬವಾಗಿದೆ ಎಂದು ಪರಿಗಣಿಸಿ ಈ ಕ್ರಮಕ್ಕೆ ಆದೇಶಿಸಿದೆ. ನ್ಯಾಯಾಲಯದ ನಿರ್ದೇಶನದಂತೆ ಸಂಬಂಧಪಟ್ಟ ಅಧಿಕಾರಿಗಳು ಜಿಲ್ಲಾಧಿಕಾರಿಗಳ ಇನೋವಾ ಕ್ರಿಸ್ಟಾ ವಾಹನವನ್ನು ಜಪ್ತಿಗೆ ಒಳಪಡಿಸಿದ್ದಾರೆ. ಈ ಬೆಳವಣಿಗೆ ಜಿಲ್ಲಾಡಳಿತ ವಲಯದಲ್ಲಿ ಚರ್ಚೆಗೆ ಕಾರಣವಾಗಿದ್ದು, ಭೂಸ್ವಾಧೀನ ಪ್ರಕರಣಗಳಲ್ಲಿ ಪರಿಹಾರ ಪಾವತಿಯಲ್ಲಿ ವಿಳಂಬ ಬೇಡ ಎಂಬ ಸಂದೇಶ ನೀಡಿದೆ.

ಇಇ ಬಂಧನ

ಭೂಸ್ವಾಧಿನ ಪ್ರಕರಣದಲ್ಲಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡಲು ವಿಳಂಬ ಮಾಡಿದ್ದಾರೆಂದು ಕೋರ್ಟ್ ಬಂಧನ ವಾರಂಟ್ ?ಹಿನ್ನೆಲೆಯಲ್ಲಿ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರ ನರಸಿಂಗ್ ಅವರನ್ನು ಬಂಧಿಸಲಾಗಿದೆ ಎಂದು ತಿಳಿದು ಬಂದಿದೆ.

ಪ್ರೇಮ ವೈಫಲ್ಯಕ್ಕೆ ವಿದ್ಯಾರ್ಥಿ ಆತ್ಮಹತ್ಯೆ ಶಂಕೆ

ತುಮಕೂರು: ಡಿಪ್ಲೊಮಾ ವಿದ್ಯಾರ್ಥಿಯೊಬ್ಬ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜಿಲ್ಲೆಯ ತುರುವೇಕೆರೆ ಪಟ್ಟಣದಲ್ಲಿ ನಡೆದಿದೆ. ಧನುಷ್ (19) ಆತ್ಮಹತ್ಯೆಮಾಡಿಕೊಂಡ ದುರ್ದೈವಿ. ಪ್ರೇಮ ವೈಫಲ್ಯದ ಹಿನ್ನೆಲೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗಿದೆ. ಗೋಪ್ಪೆನಹಳ್ಳಿ ಗ್ರಾಮದ ನಿವಾಸಿಯಾದ ಧನುಷ್, ತುರುವೇಕೆರೆ ಸರಕಾರಿ ಡಿಪ್ಲೊಮಾ ಕಾಲೇಜಿನಲ್ಲಿ ಎರಡನೇ ವರ್ಷದ ವ್ಯಾಸಂಗ ಮಾಡುತ್ತಿದ್ದ. ಬುಧವಾರ ಬೆಳಗ್ಗೆ ಕಾಲೇಜಿಗೆ ಹೋಗುವುದಾಗಿ ಮನೆಯಿಂದ ಹೋಗಿದ್ದನು. ಮನೆಗೆ ಬಾರದೆ ಇದ್ದಾಗ ಆತಂಗೊಂಡು ಪೋಷಕರು ಹುಟುಕಾಟ ನಡೆಸಿದ್ದರು. ಕೆರೆ ಕಟ್ಟೆ ಬಳಿ ಚಪ್ಪಲಿ ಮೊಬೈಲ್ ಪತ್ತೆ ಬಳಿಕ ಆತ್ಮಹತ್ಯೆ ಎಂದು ಶಂಕಿಸಲಾಗಿತ್ತು. ಆದರೆ ಸಾವಿಗೂ ಮುನ್ನ ಯುವಕ ಬೇಸರದಿಂದ ವಾಟ್ಸಾಪ್ ಸ್ಟೇಟಸ್ ಹಾಕಿದ್ದನು ಎನ್ನಲಾಗಿದೆ. 'ನೀನೇ ಖುಷಿಯಾಗಿರು, ನಾನು ಈ ಪ್ರಪಂಚವನ್ನೇ ಬಿಟ್ಟು ಹೋಗುತ್ತಿದ್ದೇನೆ.. ಬಾಯ್' ಎಂದು ಸ್ಟೇಟಸ್‌ನಲ್ಲಿ ಬರೆದುಕೊಂಡಿದ್ದನು. ಈ ಹಿನ್ನೆಲೆ ಪ್ರೇಮ ವೈಫಲ್ಯಕ್ಕೆ ಸಾವೆಂದು ಶಂಕಿಸಲಾಗಿದೆ. ಈ ಸಂಬಂಧ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ತಂದೆ ಭಾವನೆಯಿಂದ ಬಾಲಕಿ ಜತೆ ವರ್ತನೆ, ಯಾವುದೇ ದುರುದ್ದೇಶವಿಲ್ಲ

ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಪೋಕ್ಸೊ

ಯಾದಗಿರಿ: ಬಾಲಕಿ ಜತೆ ಉದ್ದೇಶ ಪೂರ್ವಕ ಅನುಚಿತ ವರ್ತನೆ ಆರೋಪದಲ್ಲಿ ಯಾದಗಿರಿ ಜಿಲ್ಲೆಯ ಗೋಗಿ ಠಾಣೆಯಲ್ಲಿ ಮಲ್ಲಿಕಾರ್ಜುನ ಮುತ್ಯಾನ ವಿರುದ್ಧ ಪೋಕ್ಸೊ ದಾಖಲಾಗಿದೆ. ಇದರ ಬೆನ್ನಲ್ಲೇ ಅಜ್ಞಾತ ಸ್ಥಳದಿಂದ ವಿಡಿಯೊ ಹೇಳಿಕೆ ನೀಡಿರುವ ಮಲ್ಲಿಕಾರ್ಜುನ ಮುತ್ಯಾ 'ತಂದೆ ಎಂಬ

ಭಾವನೆಯಿಂದ ಬಾಲಕಿ ಜತೆ ಪ್ರೀತಿಯಿಂದ ನಡೆದುಕೊಂಡಿದ್ದೇನೆ. ಇದರಲ್ಲಿ ಯಾವುದೇ ದುರುದ್ದೇಶ ಇಲ್ಲ' ಎಂದು ಸ್ಪಷ್ಟನೆ ನೀಡಿದ್ದಾರೆ.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶೀಧರ್ ಕೋಸುಂಬೆ ಈ ಸಂಬಂದ ಸ್ವಯ ದೂರು ದಾಖಲಿಸಿಕೊಂಡು, ಯಾದಗಿರಿ ಎಸ್‌ಪಿಗೆ ಪತ್ರ ಬರೆದಿದ್ದರು. ಇದರ ಬೆನ್ನಲ್ಲೇ ಸಿಡಿಪಿಓ ನೀಡಿದ ದೂರಿದ ಆಧಾರದ ಮೇಲೆ ಮುತ್ಯಾನ ವಿರುದ್ಧ ಗೋಗಿ ಠಾಣೆಯಲ್ಲಿ ಪೋಕ್ಸೊ ದಾಖಲಾಗಿದೆ.

ಆಗಿದ್ದೇನು? ತನ್ನ ಚಿಕ್ಕಮ್ಮನ ಜತೆ ಬಾಲಕಿ ಮಠಕ್ಕೆ ತೆರಳಿದ್ದರು. ಈ ವೇಳೆ ಬಾಲಕಿಯನ್ನು ಮಲ್ಲಿಕಾರ್ಜುನ ಎಂಬಾತ ಎಳೆದಾಡಿದ್ದು, ವಿಡಿಯೊದಲ್ಲಿ ಕಂಡು ಬಂದಿದೆ. ಮಗುವನ್ನು ಉದ್ದೇಶಪೂರ್ವಕವಾಗಿ ಮುಟ್ಟಿದ್ದಾನೆ ಎಂಬ ಆರೋಪದಲ್ಲಿ ಬಿಎನ್‌ಎಸ್ ಸೆಕ್ಷನ್ 75(2) ಜತೆಗೆ ಪೋಕ್ಸೊ ಪ್ರಕರಣ ದಾಖಲಾಗಿದೆ.

ಹೋರಾಟದಲ್ಲಿ ನನಗೆ ಜಯ: ಅಪ್ಪಾಜಿ ಮಗಳು ಎಂಬ ಭಾವನೆಯಲ್ಲಿ ಆ ಬಾಲಕಿಯೊಡನೆ ಪ್ರೀತಿಯಿಂದ ನಡೆದುಕೊಂಡಿದ್ದೇನೆ. ವಿನಃ ಯಾವುದೇ ಕೆಟ್ಟ ಉದ್ದೇಶ ಖಂಡಿತವಾಗಿ ಇಲ್ಲ, ಕಾನೂನು ಹೋರಾಟದಲ್ಲಿ ನನಗೆ ಖಂಡಿತ ಜಯ ದೊರಕಲಿದೆ. ನಾನು ಎಲ್ಲಿಯೂ ಓಡಿ ಹೋಗಿಲ್ಲ. ಮಠದ ಜಾತ್ರೆ ಆಮಂತ್ರಣ ನೀಡಲು ಬಂದಿರುವುದಾಗಿ ವಿಡಿಯೋ ಮಾಡಿ ಹರಿಬಿಟ್ಟಿದ್ದಾರೆ. ಅಲ್ಲದೆ ನನ್ನದೇ ಗೆಲುವು, ನಾನೇ ಗೆಲ್ಲುವೆ, ಭಕ್ತರು ಯಾರೂ ಆತಂಕಕ್ಕೆ ಒಳಗಾಗಬೇಡಿ ಎಂದು ಸ್ಪಷ್ಟನೆ ನೀಡಿದ್ದಾರೆ.

ನೋಟಿಸ್ ನೀಡಲು ಎಸ್‌ಪಿ ಸೂಚನೆ

ಮಲ್ಲಿಕಾರ್ಜುನ ಮುತ್ಯಾ ಮಠದಲ್ಲಿ ಇಲ್ಲ. ತನಿಖೆಗೆ ಸಹಕಾರ ಕೊಡುವುದಾಗಿ ಹೇಳಿದ್ದು, ನೋಟಿಸ್ ಕೊಡುವಂತೆ ತನಿಖಾಧಿಕಾರಿಗೆ ಸೂಚಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ತಿಳಿಸಿದ್ದಾರೆ. ಮಠಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಘಟನಾ ಸ್ಥಳವನ್ನು ಮಹಜರು ಮಾಡಿದ್ದಾರೆ.ಬಾಲಕಿಯ ಮುಖ ಬ್ಲರ್ ಮಾಡದೇ ವೀಡಿಯೋ ಅಪಲೋಡ್ ಮಾಡಿದವರಿಗೂ ಸಂಕಷ್ಟ ಎದುರಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

> **ನಾನು ಎಲ್ಲಿಯೂ ಓಡಿ ಹೋಗಿಲ್ಲ. ಜಿಲ್ಲೆಯಲ್ಲಿದ್ದೇನೆ. ಮಠದ ಜಾತ್ರೆ ಆಮಂತ್ರಣ ಪತ್ರಿಕೆ ನೀಡಲು ಬಂದಿರುವೆ. ಪೊಲೀಸರು ಕರೆದಾಗ ಠಾಣೆಗೆ ಹೋಗಿ ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇನೆ.**
> **ಮಲ್ಲಿಕಾರ್ಜುನ ಮುತ್ಯಾ, ಮಹಲ್ ರೋಜಾ ಮಠ**

ಅರಣ್ಯ ಇಲಾಖೆ ನೇತೃತ್ವದಲ್ಲಿ ಕಾರ್ಯಾಚರಣೆ | ಅಧಿಕಾರಿಗಳು ಅಲರ್ಟ್

5 ರೆಸಾರ್ಟ್ ತೆರವು, ವಿದ್ಯುತ್ ಕಟ್

ಕೊಪ್ಪಳ: ಜಿಲ್ಲೆಯ ಗಂಗಾವತಿ ತಾಲೂಕು ಸಾಣಾಪುರ ಮತ್ತು ಆನೆಗುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಲೆ ಎತ್ತಿದ್ದ ಐದು ರೆಸಾರ್ಟ್‌ಗಳನ್ನು ಅರಣ್ಯ ಇಲಾಖೆ ನೇತೃತ್ವದಲ್ಲಿ ತೆರವು ಮಾಡಲಾಗಿದೆ. ಕೊಪ್ಪಳ ಜಿಲ್ಲೆಯ ವಿವಿಧ ಇಲಾಖೆ ಅಧಿಕಾರಿಗಳಿಗೆ ಉಪ ಲೋಕಾಯುಕ್ತರು ನೋಟೀಸ್ ನೀಡಿದ್ದರ ಹಿನ್ನೆಲೆ ಬುಧವಾರ ಮತ್ತು ಗುರುವಾರ ಕಾರ್ಯಾಚರಣೆ ಮಾಡಿದ್ದಾರೆ.

ತುಂಗಭದ್ರಾ ನದಿ ನೀರು ನಾಯಿ ಸಂರಕ್ಷಿತ ಪ್ರದೇಶದಲ್ಲಿ ಅಕ್ರಮವಾಗಿ ತಲೆ ಎತ್ತಿದ್ದ ಒಟ್ಟು ಐದು ರೆಸಾರ್ಟ್‌ಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ತೆರವು ಮಾಡಲಾಗಿದೆ. ಡಿಸಿಎಫ್ ನಿರ್ಮಲಾ, ಎಸಿಎಫ್ ಅಬ್ದುಲ್ಲಾ ಖಾದರ್ ಮುಲ್ಲಾ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಲಾಯಿತು.

ಸಾಣಾಪುರ ಗ್ರಾಮ ವ್ಯಾಪ್ತಿಯ ಹ್ಯಾಪಿ ಪ್ಲೇಸ್', ಐಲ್ಯಾಂಡ್ ವೈಬ್ಸ್' ಮತ್ತು ರ‍್ಯಾಂಬೊ' ರೆಸಾರ್ಟ್ ತೆರವು ಮಾಡಲಾಗಿದೆ. ವಿರುಪಾಪುರ ಗಡ್ಡಿ ಗ್ರಾಮ ವ್ಯಾಪ್ತಿಯ ತುಂಗಭದ್ರಾ ನೀರು ನಾಯಿ ಸಂರಕ್ಷಿತ ಪ್ರದೇಶದಲ್ಲಿದ್ದ ಹಿಡನ್ ಬೀಚ್ ಮತ್ತು ವೈಟ್ ಸ್ಯಾಂಡ್ ರೆಸಾರ್ಟ್ ತೆರವುಗೊಳಿಸಲಾಯಿತು. ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಎಲ್ಲ 5 ರೆಸಾರ್ಟ್ ನೆಲಸಮ ಮಾಡುವಲ್ಲಿ ಯಶಸ್ವಿಯಾದರು. ಈ ಮೂಲಕ ಗಂಗಾವತಿ ಅರಣ್ಯ ವಲಯ ವ್ಯಾಪ್ತಿಯಲ್ಲಿ ಒಟ್ಟು 5 ಅಕ್ರಮ ರೆಸಾರ್ಟ್ ಧ್ವಂಸಗೊಳಿಸಿದಂತಾಗಿದೆ.

ವಿದ್ಯುತ್ ಕಡಿತ: ಉಳಿದಂತೆ ತಹಸೀಲ್ದಾರ್ ನೇತೃತ್ವದಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ರೇಸಾರ್ಟ್‌ಗಳ ವಿದ್ಯುತ್ ಕಡಿತ ಮಾಡಲಾಯಿತು. ಗಂಗಾವತಿ ತಾಲೂಕಿನ ಸಾಣಾಪುರ, ಆನೆಗುಂದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ತಲೆ ಎತ್ತಿರುವ ರೇಸಾರ್ಟ್, ಹೋಂ ಸ್ಟೇ ಕಾನೂನು ಅನುಸಾರ ತೆರವಿಗೆ ನಿರ್ಧರಿಸಿ, ಸಂಬಂಧಿಸಿದ ರೇಸಾರ್ಟ್ ಮಾಲಕರಿಗೆ ನೋಟೀಸ್ ನೀಡಲಾಗಿತ್ತು. ಗಂಗಾವತಿ ತಾಲೂಕು ವ್ಯಾಪ್ತಿಯ ವಿವಿಧ ಗ್ರಾಮದಲ್ಲಿ 50 ರೆಸಾರ್ಟ್ ಹಾಗೂ 47 ಹೋಂ ಸ್ಟೇಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ.

ಗಂಗಾವತಿ ತಾಲೂಕಿನ ಸಾಣಾಪುರ ಮತ್ತು ಆನೆಗುಂದಿ ಗ್ರಾಪಂ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳ ರೆಸಾರ್ಟ್ ನೆಲಸಮ ಮಾಡಿದರು.

> **ಉಪ ಲೋಕಾಯುಕ್ತ ಬಿ.ವೀರಪ್ಪ ಅವರು ನೋಟೀಸ್ ನೀಡಿರುವ ಹಿನ್ನೆಲೆ ಗಂಗಾವತಿ ತಾಲೂಕಿನ 5 ರೆಸಾರ್ಟ್ ತೆರವು ಮಾಡಲಾಗಿದೆ. ತುಂಗಭದ್ರಾ ನದಿ ನೀರು ನಾಯಿ ಸಂರಕ್ಷಿತ ಪ್ರದೇಶಗಳಲ್ಲಿ ಇದ್ದ ಐದು ರೆಸಾರ್ಟ್ ನೆಲಸಮ ಮಾಡಲಾಗಿದೆ. ಜತೆಗೆ ಸಂಬಂಧಿಸಿದ ವಿವಿಧ ಇಲಾಖೆ ಅಧಿಕಾರಿಗಳು ವಿದ್ಯುತ್ ಸಂಪರ್ಕ ಕಡಿತ ಮಾಡಲಾಗಿದೆ.**
> **-ಅಬ್ದುಲ್ ಫಾರುಕ್ ಮುಲ್ಲ, ಎಸಿಎಫ್, ಕೊಪ್ಪಳ**

ಅಂತಾರಾಜ್ಯ ಗಾಂಜಾ ಪೆಡ್ಲರ್ ಕೇರಳ ಪೊಲೀಸರ ಬಲೆಗೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಕೇರಳ ಪೊಲೀಸರು ಭರ್ಜರಿ ಬೇಟಿ ನಡೆಸಿ, ಕುಖ್ಯಾತ ಅಂತರರಾಜ್ಯ ಗಾಂಜಾ ಪೆಡ್ಲರ್‌ನನ್ನು ಬಂಧಿಸಿದ್ದಾರೆ.

ಅಸ್ಸಾಂ ಮೂಲದ ಧೀರೇಶ್ ಕುಟುಮ್ (27) ಬಂಧಿತ ಆರೋಪಿ. ಎಲೆಕ್ಟ್ರಾನಿಕ್ ಸಿಟಿ ಸಮೀಪದ ಮೈಲಸಂದ್ರದಲ್ಲಿ ದಾಳಿ ನಡೆಸಿ, 1 ಕೋಟಿ ರು. ಮೌಲ್ಯದ 2 ಕೆ.ಜಿ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಕೇರಳ ಮಾದಕವಸ್ತು ವಿರೋಧಿ ವಿಶೇಷ ಕಾರ್ಯಪಡೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿತು. ಸೆರೆಲ್ಯಾಕ್ ಪಾಕೆಟ್‌ಗಳಲ್ಲಿ ಎಂಡಿಎಂಎ ಡ್ರಗ್ಸ್ ಮಾರಾಟ ಮಾಡಲಾಗುತ್ತಿತ್ತು. ರಮೇಶ್ ರೆಡ್ಡಿ ಬಡಾವಣೆಯ ಮನೆಯೊಂದರಲ್ಲಿ ಪೊಲೀಸರು ಜಪ್ತಿ ಮಾಡಿದ್ದಾರೆ. ಸತ್ಯಜಿತ್ ನೇತೃತ್ವದ ತಂಡದಿಂದ ದಾಳಿ ನಡೆದಿತ್ತು. ದಾಳಿ ವೇಳೆ 2 ಕೆ.ಜಿ ತೂಕದ ನಾಲ್ಕು ಪ್ಯಾಕೆಟ್, 15ಕ್ಕೂ ಅಧಿಕ ಖಾಲಿ ಯಾದ ಸೆರೆಲ್ಯಾಕ್ ಪ್ಯಾಕೆಟ್‌ಗಳು ಪತ್ತೆಯಾಗಿವೆ. ಸ್ವಿಗ್ಗಿ ಜೊಮ್ಯಾಟೊ ಡೆಲಿವರಿ ಬಾಯ್ ರೀತಿ ಎಂಡಿಎಂಎ ಸರಬರಾಜು ಮಾಡಲಾಗುತ್ತಿತ್ತು. ಕೇರಳದ ಮಲ್ಲಪುರಂನಲ್ಲಿ ಆರೋಪಿ ಧೀರೇಶ್ ಸಹಚರರು ಸಿಕ್ಕಿಬಿದ್ದಿದ್ದರು. ವಾರದ ಹಿಂದೆ 1 ಕೆ.ಜಿ ಎಂಡಿಎಂಎ ಸಹಿತ 8 ಮಂದಿ ಬಂಧಿಸಲಾಗಿತ್ತು. ವಿಚಾರಣೆ ವೇಳೆ ಕಿಂಗ್‌ಪಿನ್ ಧೀರೇಶ್ ಬಗ್ಗೆ ಮಾಹಿತಿ ಸಿಕ್ಕಿತ್ತು. ಆರೋಪಿ ಧೀರೇಶ್ ತಂಗಿ ಪತಿ ನೈಜೀರಿಯಾ ಮೂಲದವನು. ಆತನ ಮೂಲಕ ಎಂಡಿಎಂಎ ಡ್ರಗ್ಸ್ ಅಸ್ಸಾಂಗೆ ರವಾನೆಯಾಗುತ್ತಿತ್ತು. ಅಸ್ಸಾಂನಲ್ಲಿರುವ ತಂಗಿ ಮೂಲಕ ಕೇರಳ, ಕರ್ನಾಟಕಕ್ಕೆ ಸಾಗಣೆ ಮಾಡಲಾಗುತ್ತಿತ್ತು. ಪ್ರಕರಣ ಸಂಬಂಧ ಕೇರಳ ಪೊಲೀಸರಿಂದ 9 ಮಂದಿಯನ್ನು ಬಂಧಿಸಲಾಗಿದೆ. ಒಟ್ಟು ಮೂರು ಕೆ.ಜಿಯಷ್ಟು ಎಂಡಿಎಂಎ ಜಪ್ತಿ ಮಾಡಲಾಗಿದೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13(12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **27.11.2025** ರಂದು ಕರೆದು ಸಾಲಗಾರ **ಪಂಧಿಕುಂಟಾ ಧನಶೇಖರ್ ಅಲಿಯಾಸ್ ಪಿ ಧನಶೇಖರ್ ಅಲಿಯಾಸ್ ಧನಶೇಖರ್ ಪಂಧಿಕುಂಟಾ ಮತ್ತು ಗೀತಾ ಕಾಮಸಾನಿ ಅಲಿಯಾಸ್ ಕೆ ಗೀತಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 26,20,317.24 (ಇಪ್ಪತ್ತಾರು ಲಕ್ಷ ಇಪ್ಪತ್ತು ಸಾವಿರದ ಮುನ್ನೂರ ಹದಿನೇಳು ರೂಪಾಯಿಗಳು ಮತ್ತು ಇಪ್ಪತ್ತನಾಲ್ಕು ಪೈಸೆ ಮಾತ್ರ)** ಸಾಲ ಖಾತೆ ನಂ. **HHLMAL00399075** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **25.11.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **24.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 26,20,317.24 (ಇಪ್ಪತ್ತಾರು ಲಕ್ಷ ಇಪ್ಪತ್ತು ಸಾವಿರದ ಮುನ್ನೂರ ಹದಿನೇಳು ರೂಪಾಯಿಗಳು ಮತ್ತು ಇಪ್ಪತ್ತನಾಲ್ಕು ಪೈಸೆ ಮಾತ್ರ) 25.11.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ವಸತಿ ಅಪಾರ್ಟ್‌ಮೆಂಟನ ಆ ಎಲ್ಲಾ ತುಣುಕು ಮತ್ತು ಪಾರ್ಸೆಲ್, ಫ್ಲಾಟ್ ಸಂಖ್ಯೆ 306, ಮೂರನೇ ಮಹಡಿ, 1125.0 ಚದರ ಅಡಿಗಳಷ್ಟು ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣವನ್ನು ಹೊಂದಿದೆ. ಬೆಂಗಳೂರು ಜಿಲ್ಲೆಯ ಅತ್ತಿಬೆಲೆ ಹೋಬಳಿಯ ಗೊಲ್ಲಹಳ್ಳಿ ಗ್ರಾಮದಲ್ಲಿ ನೆಲೆಗೊಂಡಿರುವ ''ಆರ್ ಎಸ್ ಹ್ಯಾಪಿ ಹೋಮ್ಸ್'' ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟನ ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದಲ್ಲಿ ಪಾಲು ಸೇರಿದಂತೆ, ಬೇಸ್ಮೆಂಟ್ ಮಹಡಿಯಲ್ಲಿ ಒಂದು ಮುಚ್ಚಿದ ಕಾರು ಪಾರ್ಕಿಂಗ್ ಸ್ಥಳವಿದೆ ಮತ್ತು ಆಸ್ತಿ ಹೊಂದಿರುವ ಸೈಟ್ ಸಂಖ್ಯೆ 7 ಹಳೆಯ ಖಾತಾ ಸಂಖ್ಯೆ 88/23/1, 22/2, ನಂತರ ಖಾತಾ ಸಂಖ್ಯೆ 140/22/2/07 ಹೊಸ ಖಾತಾ ಸಂಖ್ಯೆ 142/22/2/07 ಅನ್ನು ಪರಿವರ್ತಿತ ಸರ್ವೆಯಲ್ಲಿ ರಚಿಸಲಾಗಿದೆ. ನಂ. 22/2 (ಪರಿವರ್ತಿಸಲಾಗಿದೆ ಆರ್ಡರ್ ಸಂಖ್ಯೆ. ಎಎಲ್‌ಎನ್ ಸಂಖ್ಯೆ. (ಅ) (ಅ) ಎಸ್.ಆರ್. 8/09-10 ದಿನಾಂಕ 20-08-2009) ಬೆಂಗಳೂರು- 560100, ಕರ್ನಾಟಕ 212 ಚದರ ಅಡಿಗಳ ಜೊತೆಗೆ, ಸದರಿ ಆಸ್ತಿ/ಅಪಾರ್ಟ್‌ಮೆಂಟ್ ಸಂಕೀರ್ಣದ ಭೂಮಿಯಲ್ಲಿ ಅವಿಭಜಿತ ಪಾಲು, ಹಕ್ಕು ಶೀರ್ಷಿಕೆ ಮತ್ತು ಬಡ್ಡಿಯನ್ನು ಹೊಂದಿದೆ. ಮತ್ತು ಫ್ಲಾಟ್ ಅನ್ನು ಈ ಕೆಳಗಿನಂತೆ ಬೌಂಡ್ ಮಾಡಲಾಗಿದೆ:

ಪೂರ್ವ : ಫ್ಲಾಟ್ ನಂ. 305
ಪಶ್ಚಿಮದಲ್ಲಿ : ಫ್ಲಾಟ್ ನಂ. 307
ಉತ್ತರದಲ್ಲಿ : ಫ್ಲಾಟ್ ನಂ. 302
ದಕ್ಷಿಣದಲ್ಲಿ : ಖಾಸಗಿ ಭೂಮಿ

ಅಧಿಕಾರವಿರುವ ಅಧಿಕಾರಿ
ದಿನಾಂಕ: 24.02.2026 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13(12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **19.11.2025** ರಂದು ಕರೆದು ಸಾಲಗಾರ **ಶ್ರೀನಿವಾಸ್ ಎಮ್ ಬಿ ಮತ್ತು ತುಲಸಿ ಎಮ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 76,69,362.95 (ಎಪ್ಪತ್ತಾರು ಲಕ್ಷದ ಅರವತ್ತೊಂಬತ್ತು ಸಾವಿರದ ಮೂರುನೂರ ಅರವತ್ತೆರಡು ರೂಪಾಯಿಗಳು ಮತ್ತು ತೊಂಬತ್ತೈದು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 1 ರ ಮೇಲೆ) ಮತ್ತು ರೂ. 2,41,102.52 (ಎರಡು ಲಕ್ಷದ ನಲವತ್ತು ಒಂದು ಸಾವಿರದ ನೂರ ಎರಡು ರೂಪಾಯಿಗಳು ಮತ್ತು ಐವತ್ತೆರಡು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 2 ರ ಮೇಲೆ) ಒಟ್ಟು ಬಾಕಿ ಮೊತ್ತವನ್ನು ಹೊಂದಿರುವ ರೂ. 79,10,465.47 (ಎಪ್ಪತ್ತೊಂಬತ್ತು ಲಕ್ಷ ಹತ್ತು ಸಾವಿರದ ನಾಲ್ಕುನೂರ ಅರವತ್ತೈದು ರೂಪಾಯಿಗಳು ಮತ್ತು ನಲವತ್ತೇಳು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ.1 ಮತ್ತು 2 ರ ಮೇಲೆ)** ಸಾಲ ಖಾತೆ ನಂ. **HHLMAL00526408 & HHEMAL00526407** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **11.11.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **23.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 76,69,362.95 (ಎಪ್ಪತ್ತಾರು ಲಕ್ಷದ ಅರವತ್ತೊಂಬತ್ತು ಸಾವಿರದ ಮೂರುನೂರ ಅರವತ್ತೆರಡು ರೂಪಾಯಿಗಳು ಮತ್ತು ತೊಂಬತ್ತೈದು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 1 ರ ಮೇಲೆ) ಮತ್ತು ರೂ. 2,41,102.52 (ಎರಡು ಲಕ್ಷದ ನಲವತ್ತು ಒಂದು ಸಾವಿರದ ನೂರ ಎರಡು ರೂಪಾಯಿಗಳು ಮತ್ತು ಐವತ್ತೆರಡು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 2 ರ ಮೇಲೆ) ಒಟ್ಟು ಬಾಕಿ ಮೊತ್ತವನ್ನು ಹೊಂದಿರುವ ರೂ. 79,10,465.47 (ಎಪ್ಪತ್ತೊಂಬತ್ತು ಲಕ್ಷ ಹತ್ತು ಸಾವಿರದ ನಾಲ್ಕುನೂರ ಅರವತ್ತೈದು ರೂಪಾಯಿಗಳು ಮತ್ತು ನಲವತ್ತೇಳು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ.1 ಮತ್ತು 2 ರ ಮೇಲೆ) 11.11.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ನೆಲಮಹಡಿಯಲ್ಲಿ 3 ಮಲಗುವ ಕೋಣೆಗಳನ್ನು ಒಳಗೊಂಡಿರುವ, 1000 ಚದರ ಅಡಿಗಳಷ್ಟು ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿರುವ, ಲಾಬಿಗಳು, ಪ್ಯಾಸೇಜ್, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ''ಗುರು ಸದನ'' ಕಟ್ಟಡದಲ್ಲಿ ಒಂದು ಮುಚ್ಚಿದ ಪಾರ್ಕಿಂಗ್ ಸ್ಥಳವನ್ನು ಒಳಗೊಂಡಂತೆ, ನೆಲಮಹಡಿಯಲ್ಲಿ ಫ್ಲಾಟ್ ಸಂಖ್ಯೆ 101 ರಲ್ಲಿರುವ ಎಲ್ಲಾ ಭೂಮಿ / ಆಸ್ತಿಯ ತುಣುಕುಗಳು, ಪ್ರಸ್ತುತ ಪುರಸಭೆ ಸಂಖ್ಯೆ 1, ಹಳೆಯ ಪುರಸಭೆ ಸಂಖ್ಯೆ 6 ರಲ್ಲಿರುವ ಆಸ್ತಿಯ ಪಶ್ಚಿಮ ಭಾಗದಲ್ಲಿ ನಿರ್ಮಿಸಲಾಗಿದೆ. 29-106-1, ನರಗುಂದ ದೇವರ ಮುತ್ತ ಲೇನ್ (ತೆಂಗಿನ ಮರಧಾ ಮಾತಡೆ ಲೇನ್) ಕಾಟನ್ಪೇಟ್, ಬೆಂಗಳೂರು - 560053 ನಲ್ಲಿದೆ. ಇದರ ಜೊತೆಗೆ 200 ಚದರ ಅಡಿಗಳಷ್ಟು ಅವಿಭಜಿತ ಹಂಚಿಕೆ, ಹಕ್ಕುಗಳು, ಶೀರ್ಷಿಕೆ ಬಡ್ಡಿಯನ್ನು ಈ ಆಸ್ತಿಯಲ್ಲಿ ನೀಡಲಾಗಿದೆ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 23.02.2026 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)

ನೆಹರು ತಾರಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವ ಮಧು ಬಂಗಾರಪ್ಪ

ವಿದ್ಯಾರ್ಥಿಗಳಲ್ಲಿ ವೈಚಾರಿಕತೆ ಮನೋಭಾವನೆ ಬೆಳೆಸಬೇಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಂದಿನ ಯುವ ಪೀಳಿಗೆ ಸೋಶಿಯಲ್ ಮೀಡಿಯಾ ಬಳಕೆಯಲ್ಲಿ ಎಚ್ಚರಿಕೆ ವಹಿಸಿ. ಸಾಮಾಜಿಕ ಜಾಲತಾಣಗಳು ನಮ್ಮನ್ನು ದಾರಿತಪ್ಪಿಸದಂತೆ ನೋಡಿಕೊಳ್ಳಬೇಕು ಮತ್ತು ಅಲ್ಲಿ ಸಿಗುವ ಮಾಹಿತಿ ಸತ್ಯವೇ ಅಥವಾ ಸುಳ್ಳೇ ಎಂದು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಬೇಕು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದ ಜವಾಹರಲಾಲ್ ನೆಹರು ತಾರಾಲಯದಲ್ಲಿ ಗುರುವಾರ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಸರ್. ಸಿ.ವಿ. ರಾಮನ್ ಅವರ ರಾಮನ್ ಎಫೆಕ್ಟ್ ಸಂಶೋಧನೆಯ ಸ್ಮರಣಾರ್ಥವಾಗಿ ಹಮ್ಮಿಕೊಳ್ಳಲಾಗಿದೆ. ಸಂವಿಧಾನದ 51(ಜೆ) ವಿಧಿಯ ಆಶಯದಂತೆ ಪ್ರತಿಯೊಬ್ಬ ನಾಗರಿಕರಲ್ಲಿ, ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯನ್ನು ಬೆಳೆಸುವುದು ನಮ್ಮ ಮೂಲಭೂತ ಕರ್ತವ್ಯವಾಗಿದೆ. ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಇನೋವೇಟಿವ್ ಸಿಸ್ಟಮ್‌ಗಳ ಕಡೆಗೆ ಗಮನ ಹರಿಸಬೇಕು. ವಿದ್ಯಾರ್ಥಿಗಳು ಆಕಾಶವೇ ಎಲ್ಲೆ ಎಂಬಂತೆ ನಿರಂತರ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕು. ರಾಜ್ಯದ ಸರಕಾರಿ ಶಾಲೆಗಳ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನ ಮತ್ತು ವಿಜ್ಞಾನದ ಅರಿವು ಮೂಡಿಸಲು ಶಾಲಾ ಶಿಕ್ಷಣ ಇಲಾಖೆಯು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯೊಂದಿಗೆ ಸದಾ ಕೈಜೋಡಿಸಲಿದೆ ಎಂದರು.

60ಕ್ಕೂ ಹೆಚ್ಚು ವಸತಿ ಶಾಲೆಗಳಲ್ಲಿ 'ಇನ್ನೋವೇಶನ್ ಲ್ಯಾಬ್': ಕಾರ್ಯಕ್ರಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಭೋಸರಾಜು ಮಾತನಾಡಿ, ಶಾಲಾ ಹಂತದಲ್ಲೇ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಮತ್ತು ಪ್ರಾತ್ಯಕ್ಷಿಕೆ ಹಾಗೂ ಚಟುವಟಿಕೆಗಳ ಮೂಲಕ ವಿಜ್ಞಾನ ಕಲಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ರಾಜ್ಯದ 60ಕ್ಕೂ ಹೆಚ್ಚು ವಸತಿ ಶಾಲೆಗಳಲ್ಲಿ ಇನ್ನೋವೇಶನ್ ಲ್ಯಾಬ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ತಂತ್ರಜ್ಞಾನದತ್ತ ಸೆಳೆಯಲು ರಾಜ್ಯಾದ್ಯಂತ 'ನೆಹರು ಸ್ಟೀಮ್ ಲ್ಯಾಬ್' ಹಾಗೂ 'ಇನ್ನೋವೇಶನ್ ಲ್ಯಾಬ್'ಗಳನ್ನು ಸ್ಥಾಪಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ, ಕಲ್ಯಾಣ ಕರ್ನಾಟಕ ಭಾಗದ 'ಕರ್ನಾಟಕ ಪಬ್ಲಿಕ್ ಶಾಲೆ'ಗಳಲ್ಲಿ ನವೀನ ಮಾದರಿಯ ನೆಹರು ಸ್ಟೀಮ್ ಲ್ಯಾಬ್'ಗಳನ್ನು ನಿರ್ಮಿಸಲಾಗುತ್ತಿದೆ ಎಂದರು.

ವಿಜ್ಞಾನವು ಜನಜೀವನದ ಸುಧಾರಣೆಯ ಪ್ರಮುಖ ಭಾಗವಾಗಬೇಕು. 'ಸರ್ವರಿಗೂ ವಿಜ್ಞಾನ' ಮತ್ತು 'ಸುಲಭ ವಿಜ್ಞಾನ' ಎಂಬ ಆಶಯದೊಂದಿಗೆ ನಾವು ಶಾಲಾ ಹಂತದಲ್ಲೇ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಹೆಚ್ಚಿಸುವ ಸದುದ್ದೇಶ ಹೊಂದಿದ್ದೇವೆ. ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ಚಟುವಟಿಕೆ ಆಧಾರಿತ ಕಲಿಕೆಯನ್ನು ಉತ್ತೇಜಿಸಲು ಕಲ್ಯಾಣ ಕರ್ನಾಟಕದ ಶಾಲೆಗಳಲ್ಲಿ 'ನೆಹರು ಸ್ಟೀಮ್ ಲ್ಯಾಬ್' ಹಾಗೂ ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ 'ಇನ್ನೋವೇಶನ್ ಲ್ಯಾಬ್'ಗಳನ್ನು ನಿರ್ಮಿಸಲಾಗುತ್ತಿದೆ. ಇದು ಗ್ರಾಮೀಣ ವಿದ್ಯಾರ್ಥಿಗಳಲ್ಲಿ ನಾವೀನ್ಯತೆ (Innovation) ಮತ್ತು ಭವಿಷ್ಯದ ತಂತ್ರಜ್ಞಾನಗಳ ಬಗ್ಗೆ ಒಲವು ಮೂಡಿಸಲು ದೊಡ್ಡ ಮಟ್ಟದಲ್ಲಿ ನೆರವಾಗಲಿದೆ ಎಂದರು.

ಈ ವೇಳೆ ವಿಜ್ಞಾನ ದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಕುರಿತು ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಬಾಹ್ಯಾಕಾಶ ಆಯೋಗದ ಸದಸ್ಯ ಎ.ಎಸ್. ಕಿರಣ್ ಕುಮಾರ್, ವಿಜ್ಞಾನ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ.ಮಂಜುಳಾ.ಎನ್ ಇನ್ನಿತರರಿದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಕುರಿತು ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

> **ವಿದ್ಯಾರ್ಥಿಗಳ ಮೊಬೈಲ್ ಬಳಕೆಯನ್ನು ಕಡಿಮೆ ಮಾಡಬೇಕು. ಓದು ಹಾಗೂ ಕ್ರೀಡಾ ಚಟುವಟಿಕೆಗಳ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ತಮಗೆ ದೊರೆತಿರುವಂತಹ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ಮೂಲಕ ಹೊಸ ಅನ್ವೇಷಣೆಗಳ ಮಾಡಲು ಮುಂದಾಗಬೇಕು.**
> **- ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ**

ಮಕ್ಕಳು ಮೊಬೈಲ್ ಚಟಕ್ಕೆ ಬೀಳುವಲ್ಲಿ ಪೋಷಕರ ಪಾತ್ರ ಹೆಚ್ಚು

ಬೆಂಗಳೂರು: 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸುವ ಕುರಿತು ರಾಜ್ಯ ಸರಕಾರ ಆಲೋಚಿಸುತ್ತಿದ್ದು, ಈ ನಿಟ್ಟಿನಲ್ಲಿ ಮಕ್ಕಳು, ಪೋಷಕರು ಮತ್ತು ತಜ್ಞರ ಅಭಿಪ್ರಾಯ ಪಡೆದು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ ಮೊಬೈಲ್ ಬಿಡಿ, ಪುಸ್ತಕ ಹಿಡಿಯಿರಿ ಎಂಬ ಆಂದೋಲನವನ್ನು ರೂಪಿಸಲಾಗುತ್ತಿದೆ. ಮುಖ್ಯಮಂತ್ರಿಗಳು ಈಗಾಗಲೇ ಎರಡು-ಮೂರು ಬಾರಿ ಈ ಬಗ್ಗೆ ಎಚ್ಚರಿಸಿದ್ದಾರೆ. ಇದನ್ನು ಕೇವಲ ತರಗತಿಗಳಿಗೆ ಸೀಮಿತಗೊಳಿಸದೆ, ಒಂದು ಜವಾಬ್ದಾರಿಯುತ ತೀರ್ಮಾನವಾಗಿ ಜಾರಿಗೆ ತರಬೇಕಿದೆ. ಈ ಕುರಿತು ವಿಸ್ತೃತ ಚರ್ಚೆಯ ಅಗತ್ಯವಿದೆ ಎಂದರು.

ಅಭಿಪ್ರಾಯ ಸಂಗ್ರಹದ ನಂತರ ತೀರ್ಮಾನ ಕೈಗೊಳ್ಳಲಾಗುವುದು. ಯಾವುದೇ ತೀರ್ಮಾನ ತೆಗೆದುಕೊಂಡರು ಅದು ಮಕ್ಕಳ ಹಿತದೃಷ್ಟಿಯಿಂದಲೇ ಇರುತ್ತದೆ. ಕೇವಲ ಮಕ್ಕಳಷ್ಟೇ ಅಲ್ಲ, ಶಿಕ್ಷಕರು ಮತ್ತು ಪೋಷಕರ ಜತೆಗೆ ಚರ್ಚೆ ಮಾಡಬೇಕಿದೆ. ಪೋಷಕರು ಈ ವಿಷಯದಲ್ಲಿ ಹೆಚ್ಚಿನ ಜವಾಬ್ದಾರಿ ತೋರಬೇಕು. ಸದ್ಯಕ್ಕೆ ಈ ವಿಚಾರ ಚರ್ಚೆಯ ಹಂತದಲ್ಲಿದ್ದು, ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ಶೀಘ್ರವೇ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

IN THE COURT OF THE HON'BLE XI ADDL. CITY CIVIL AND SESSIONS JUDGE AT BANGALORE (CCH-8)
P AND SC. No. 521/2025

BETWEEN: 1. Smt. Pramila B Patil, W/o Late Baliram Kisan Patil, age about 68 years, R/at. No.2719, 14th Cross main road, Near Attiguppe Bus Stop, RPC Layout, Vijayanagar, Bangalore-560040. ... **PETITIONER No.1**

2. Sri. Deepak B Patil, S/o Late Baliram Kisan Patil, age about 49 years, R/at. No.2719, 14th Cross main road, Near Attiguppe Bus Stop, RPC Layout, Vijayanagar, Bangalore-560040. ... **PETITIONER No.2**

3. Sri. Nitin B Patil, S/o Late Baliram Kisan Patil, age about 46 years, R/at.No.2719, 14th Cross main road, Near Attiguppe Bus Stop, RPC Layout, Vijayanagar, Bangalore-560040. ... **PETITIONER No.3**

AND: NIL ... RESPONDENT

PUBLIC NOTICE

Whereas the above named Petitioners has made petition to this Court under Section 372 of Indian Succession Act for Succession Certificate in favour of the Petitioners, in respect of schedule mentioned below, the below mentioned schedule has held by Late Baliram Kisan Patil Husband of the petitioner No.1 and father of the 2 and 3 petitioners herein who expired on 28/02/2024.

Interested parties are hereby called to appear in this court in person or by pleader duly instructed on **04/04/2026** at **11:00 A.M,** inform to show-cause against the petitioners failing wherein the appearance will be heard and Considered Respondents are nil

SCHEDULE

E) A/c. No. 10562725467, State Bank of India, RPC layout Branch, Bangalore, presently having balance of Rs.2,73,121/- (Two Lakhs Seventy three thousand one hundred twenty-one rupees).

F) A/c. No.34670737312, State Bank of India, RPC layout Branch, Bangalore, presently having balance of Rs.4,824/- (Four thousand eight hundred twenty-four).

G) A/c. No.11511325484, State Bank of India, Chopada Branch, Mumbai, presently having balance of Rs.23,229/- (Twenty-three thousand two hundred twenty nine).

H) The CRYPTO CURRENCY from "ZebPay", ticket Number No.1493524, details as follows:

Name	Quantity	INR value
INR	7996.03	7996.03
USDT	18531.265228	1597765.68795816
IST	10000	3573.88
NCASH	3351.168539	2186.99
IQ	782.85	264.49

The CRYPTO CURRENCY Distinctive total amount of Rs. 16,117,84/- (Sixteen Lakhs eleven thousand seven hundred and eighty four rupees)

Given under my hand and seal of the Court, on this 20/02/2026

By order of the Court, Senior Sheristedar, City Civil Court, Bengaluru

SANMUKH REDDY, Advocate
No. 728, 1st floor, 8th Main Road, RPC Layout, Bengaluru-560104. Ph-9019702515

Form No. INC-26
[Pursuant to rule 30 the Companies (Incorporation) Rules, 2014]
Advertisement to be published in the newspaper for change of registered office of the company from one state to another
Before The Central Government (Regional Director, South East Region)

In the matter of Section 13(4) of the Companies Act, 2013 read with Rule 30 of the Companies (Incorporation) Rules, 2014
AND
In the matter of DUTCHWERK INDIA PRIVATE LIMITED having its registered office at No 299A, 1st Cross, Btm 2nd Stage, 7th Main, Micro Layout Bangalore Karnataka 560076
...Petitioner

Notice is hereby given to the General Public that the company proposes to make application to the Central Government under section 13 of the Companies Act, 2013 seeking confirmation of alteration of the Memorandum of Association of the Company in terms of the special resolution passed at the Extra ordinary general meeting held on 25th February 2026 and to enable the company to change its Registered Office from **"State of Karnataka" to "State of Tamil Nadu".**

Any person whose interest is likely to be affected by the proposed change of the registered office of the company may deliver either on the MCA-21 portal (www.mca.gov.in) by filing investor complaint form or cause to be delivered or send by registered post of his/her objections supported by an affidavit stating the nature of his/her interest and grounds of opposition to the Regional Director, South East Region at the address 3rd Floor, Corporate Bhavan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad-500068, Telangana within fourteen days of the date of publication of this notice with a copy to the Applicant Company at its registered office at the address mentioned below:
No 299A, 1st Cross, Btm 2nd Stage, 7th Main, Micro Layout Bangalore Karnataka 560076

For and on behalf of the Applicant
For DUTCHWERK INDIA PRIVATE LIMITED
Sd/-
Director
Date: 27-02-2026 **Mohamed Hashique**
Place: Bangalore **DIN: 08844795**

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13(12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **27.11.2025** ರಂದು ಕರೆದು ಸಾಲಗಾರ **ಎನ್ ಆರ್ ಅಶೋಕ್ ಅಲಿಯಾಸ್ ಎನ್ ಆರ್ ಅಶೋಕ ಮಾಲಕ ಶ್ರೀಕಾ ವಾಟರ್ ಸಪ್ಲೈ, ಚರಣ್ ಅಲಿಯಾಸ್ ಚರಣ್ ಎ ಪ್ರೊಪ್ರೈಟರ್ ಮಂಜುನಾಥ ವಾಟರ್ ಸಪ್ಲೈ, ಎಸ್ ಸವಿತಾ ಅಲಿಯಾಸ್ ಸವಿತಾ ಮತ್ತು ಕಾರ್ತಿಕ್ ರೆಡ್ಡಿ ಎ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 74,80,711.89 (ಎಪ್ಪತ್ತನಾಲ್ಕು ಲಕ್ಷದ ಎಂಬತ್ತು ಸಾವಿರದ ಏಳುನೂರ ಹನ್ನೊಂದು ರೂಪಾಯಿಗಳು ಮತ್ತು ಎಂಬತ್ತೊಂಬತ್ತು ಪೈಸೆ ಮಾತ್ರ)** ಸಾಲ ಖಾತೆ ನಂ. **HLAPBGM00490821** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **25.11.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **24.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 74,80,711.89 (ಎಪ್ಪತ್ತನಾಲ್ಕು ಲಕ್ಷದ ಎಂಬತ್ತು ಸಾವಿರದ ಏಳುನೂರ ಹನ್ನೊಂದು ರೂಪಾಯಿಗಳು ಮತ್ತು ಎಂಬತ್ತೊಂಬತ್ತು ಪೈಸೆ ಮಾತ್ರ) 25.11.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಕೃಷಿಯಿಂದ ಕೃಷಿಯೇತರ ನಿವಾಸ ಉದ್ದೇಶಕ್ಕೆ ಪರಿವರ್ತನೆಯಾದ, ಪರಿವರ್ತಿತ ಸರ್ವೇ ಸಂಖ್ಯೆ 46 ರಲ್ಲಿ ರೂಪುಗೊಂಡ, ಸ್ಥಿರ ಆಸ್ತಿ ಹೊಂದಿರುವ ಸೈಟ್ ಸಂಖ್ಯೆ 864 ರ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಅದರ ಆದೇಶ ಸಂಖ್ಯೆ ಬಿಡಿಎಸ್. ಎಎಲ್‌ಎನ್ (ಇ): ಎಸ್‌ಆರ್: 42/2003- 2004, ದಿನಾಂಕ: 05.07.2003, ವಿಶೇಷ ಉಪ ಆಯುಕ್ತರು ಹೊರಡಿಸಿದ್ದಾರೆ, ಬೆಂಗಳೂರು ಜಿಲ್ಲೆ ''ಫರ್ನ್ಸ್ ಪ್ಯಾರಡೈಸ್'' ನಲ್ಲಿದೆ, ದೊಡ್ಡನೆಕ್ಕುಂಡಿ, ಕೆ.ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 77 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 80 ಅಡಿ, ಒಟ್ಟು ಅಳತೆ 6160 ಚದರ ಅಡಿ. ಮತ್ತು ಇವುಗಳಿಗೆ ಬದ್ಧವಾಗಿದೆ:

ಪೂರ್ವ : ರಸ್ತೆ
ಪಶ್ಚಿಮದಲ್ಲಿ : ಸೈಟ್ ಸಂಖ್ಯೆ 863
ಉತ್ತರದಲ್ಲಿ : ಸೈಟ್ ಸಂಖ್ಯೆ 865
ದಕ್ಷಿಣದಲ್ಲಿ : ರಸ್ತೆ

ಅಧಿಕಾರವಿರುವ ಅಧಿಕಾರಿ
ದಿನಾಂಕ: 24.02.2026 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)

ದೆಹಲಿಯಲ್ಲಿ ಯುವ ಕಾಂಗ್ರೆಸ್ ಬೃಹತ್ ಪ್ರತಿಭಟನೆ

ದೆಹಲಿ: ಭಾರತೀಯ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಉದಯ್ ಭಾನು ಚಿಬ್ ಅವರ ಬಂಧನವನ್ನು ಖಂಡಿಸಿ ರಾಷ್ಟ್ರ ರಾಜಧಾನಿಯಲ್ಲಿ ಬೃಹತ್ ಪ್ರತಿಭಟನೆ ನಡೆದಿದ್ದು, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಮಂಜುನಾಥ್ ಗೌಡ ಅವರ ನೇತೃತ್ವದಲ್ಲಿ ರಾಜ್ಯದ ನೂರಾರು ಕಾರ್ಯಕರ್ತರು ದೆಹಲಿಗೆ ತೆರಳಿ ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಈ ಕುರಿತು ಮಂಜುನಾಥ್ ಗೌಡ ಮಾತನಾಡಿ, ಫೆ. 20 ರಂದು ದೆಹಲಿಯ ಭಾರತ್ ಮಂಟಪದಲ್ಲಿ ನಡೆದ ಇಂಡಿಯಾ ಎಐ ಇಂಪ್ಯಾಕ್ಟ್ ಸಮ್ಮಿಟ್ ವೇಳೆ ಯುವ ಕಾಂಗ್ರೆಸ್ ಕಾರ್ಯಕರ್ತರು ಅರೆನಗ್ನ ಪ್ರತಿಭಟನೆ ನಡೆಸಿದ್ದರು. ಈ ಘಟನೆಯ ಹಿಂದೆ ಉದಯ್ ಭಾನು ಚಿಬ್ ಅವರ ಕೈವಾಡವಿದೆ ಎಂದು ಆರೋಪಿಸಿ ದೆಹಲಿ ಪೊಲೀಸರು ಅವರನ್ನು ಬಂಧಿಸಿದ್ದರು. ಇದನ್ನು ಕೇಂದ್ರ ಸರಕಾರದ ರಾಜಕೀಯ ಸೇಡಿನ ನಡೆ ಎಂದು ಟೀಕಿಸಿ ದೆಹಲಿಯ ಬೀದಿಗಳಲ್ಲಿ ಪ್ರತಿಭಟನೆ ಮಾಡಲಾಗುತ್ತಿದೆ ಎಂದರು.

ಫೆಬ್ರವರಿ 23 ಮತ್ತು 24 ರಂದು ನಡೆದ ಈ ಉಗ್ರರೂಪದ ಹೋರಾಟದಲ್ಲಿ ಕಾರ್ಯಕರ್ತರು ರೈಲು ಹಳಿಗಳ ಮೇಲೆ ನಿಂತು ರೈಲು ರೋಕೋ ಚಳುವಳಿ ನಡೆಸಲಾಗಿದೆ. ಇದರಿಂದಾಗಿ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ ಇದರಿಂದ ಕರ್ನಾಟಕದಿಂದ ಹೋದ ನೂರಾರು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ರಾಷ್ಟ್ರೀಯ ಅಧ್ಯಕ್ಷರ ಬಿಡುಗಡೆಯಾಗುವವರೆಗೂ ಹೋರಾಟ ಮುಂದುವರಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತೀಯ ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಉದಯ್ ಭಾನು ಚಿಬ್ ಅವರ ಬಂಧನ ಖಂಡಿಸಿ ದೆಹಲಿಯಲ್ಲಿ ರಾಜ್ಯದ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಂಗೀತೋತ್ಸವ

ಬೆಂಗಳೂರು: ಶ್ರೀ ಗುರು ಸಮರ್ಥ ಸಂಗೀತ ವಿದ್ಯಾಲಯ ಟ್ರಸ್ಟ್ ವತಿಯಿಂದ ಮಾ.1 ರಂದು ಮಧ್ಯಾಹ್ನ 3 ಗಂಟೆಗೆ ನಗರದ ಜಯನಗರದ ಜೆ.ಎಸ್.ಎಸ್ ಸಭಾಂಗಣದಲ್ಲಿ ಹಿಂದೂಸ್ತಾನಿ ಸಂಗೀತೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂತಾರಾಷ್ಟ್ರೀಯ ತಬಲಾ ವಾದಕ ಡಾ. ಸತೀಶ್ ಹಂಪಿಹೊಳೆ, ಸಿತಾರ್ ವಾದಕ ಉಸ್ತಾದ್ ಹಫೀಝ್ ಬಾಲೇಖಾನ್, ಶಿಕ್ಷಣ ತಜ್ಞ ಡಾ.ಅರವಿಂದ್ ಜಿ.ಕುಲಕರ್ಣಿ ಸೇರಿ ಇನ್ನಿತರರು ಉಪಸ್ಥಿತರಿರಲಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ.ಪ್ರತಾಬ್.ಜಿ. ಬಿನ್ ಗುಣಶೇಖರನ್ ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಮಾಲೀಕರಾಗಿದ್ದು ಇವರು ಬೆಂಗಳೂರು, ಬೆಂಗಳೂರು ದಕ್ಷಿಣ ತಾಲ್ಲೂಕಿನ ಉಪ-ನೋಂದಣಿ ಕಚೇರಿಯಲ್ಲಿ ದಿನಾಂಕದ 28/6/2006, ದಾಖಲೆ ಸಂಖ್ಯೆ 8092 / 2006-07, ಪುಸ್ತಕ-1, ಸಿಡಿ ಸಂಖ್ಯೆ 252 ರಲ್ಲಿ ಸಂಗ್ರಹಿಸಲಾಗಿರುವ, ಮತ್ತು ಶ್ರೀ.ಭಾಸ್ಕರನ್.ಎ ಪರವಾಗಿ ಶ್ರೀ.ಸುರೇಶ್.ವಿ. ಅವರು ಬರೆದುಕೊಟ್ಟಿರುವ ಮೂಲ ವಾರಾಟ ಪತ್ರವನ್ನು ಕಳೆದುಕೊಂಡಿರುತ್ತಾರೆ ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿಯ ದೊಡ್ಡನಾಗಮಂಗಲ ಗ್ರಾಮದಲ್ಲಿರುವ, ಪ್ರಸ್ತುತ ಕೋನಪ್ಪನ ಅಗ್ರಹಾರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ವಿ.ಪಿ. ಖಾತಾ ಸಂಖ್ಯೆ 101, ಅಸೆಸ್ಮೆಂಟ್ ಸಂಖ್ಯೆ 101 (ಹಳೆಯ ಸಂಖ್ಯೆ 10/1) ರ ವಸತಿ ಖಾಲಿ ನಿವೇಶನ ಸಂಖ್ಯೆ 45 (ಹಿಂದೆ ಮಧ್ಯ ಭಾಗ, ಪ್ರಸ್ತುತ ಉತ್ತರ ಭಾಗದ ಅರ್ಧ ಭಾಗ) ಹೊಂದಿರುವ ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ, ಉತ್ತರದಿಂದ ದಕ್ಷಿಣಕ್ಕೆ 20 ಅಡಿ, ಒಟ್ಟಾರೆ 600 ಚದರ ಅಡಿ, ಎಲ್ಲಾ ಹಕ್ಕುಗಳು, ಪರಿಕರಗಳು, ಕೆಳಗೆ ಅಥವಾ ಮೇಲೆ ಸೇರಿ ಈ ಸ್ವತ್ತಿಗೆ ಚಕ್ಕುಬಂದಿ:-ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ಹಿಂದೆ ಸೈಟ್ ಸಂಖ್ಯೆ 45ರ ಉಳಿದ ಭಾಗ, ಪ್ರಸ್ತುತ ಸೈಟ್ ಸಂಖ್ಯೆ 45/ಎ, ದಕ್ಷಿಣಕ್ಕೆ: ಸೈಟ್ ಸಂಖ್ಯೆ 45 ರ ಉಳಿದ ಭಾಗ.

ಎನ್. ಜಗದೀಶ್ ಕುಮಾರ್, ವಕೀಲರು,
ನಂ.30/ 1, 2ನೇ ಮಹಡಿ, 7ನೇ ಕ್ರಾಸ್, ಎನ್.ಆರ್. ಕಾಲೋನಿ ಬಸ್ ನಿಲ್ದಾಣದ ಹತ್ತಿರ, ಹೋಟೆಲ್ ದ್ವಾರಕಾ ಎದುರು, ಬೆಂಗಳೂರು-560019.,

IN THE COURT OF THE SENIOR CIVIL JUDGE HOSAKOTE, BENGALURU RURAL
O .S. No. 2209 / 2022

BETWEEN: SMT.SHANTHA BAI,
D/o. Late Shankar Rao, Aged about 53 years, R/at: Immareddihalli (Village & Post) Chintamani Taluk, Chikkaballapur District Karnataka-563 123.
..Plaintiff

AND: SMT.GEETHA BAI & Others **..Defendants**

Summons / Notice to Defendant No.11 & 12.

DEFENDANT No.11:
SRI.NARAYANASWAMY, S/o.Anjappa Das. Aged about 59 years, R/at: Kadugodi Village. Bidrahalli Hobli. Bangalore East Taluk Bengaluru-560067.

DEFENDANT NO.12:
SRI.N.H.BHASKAR REDDY,
S/o.NHP Shiva Reddy, Aged about 50 years, Rat: C-17, Kuduremukh Colony. Sarjapur Road, 2 Block, Koramangala, Bengaluru 560 034.

Whereas the Plaintiff has filed the above case against you The Purchasers of below said Suit Schedule Property) for the Partition and Separate Possession of 1/7 Share in Respect of Agricultural Property Bearing **Sy. No. 148/4, land measuring to an extent of 33 Guntas situated at Amanikere Village, Kasaba Hobli, Hosakote Taluk. Bengaluru Rural District, Karnataka 562 114**, bounded on **East by :** Chikka Hulluru Hanumantharayappa's Property, **West by :** Dasarahalli Krishnappa's Property, **North by :** Chikka Hulluru Chowdappa's Property and **South by :** Munishappa's Property And other reliefs as prayed for in the Plaint.

You are hereby summoned to appear in person or through pleader on **10-04-2026 at 11.00 am** before the Hon'ble Senior Civil Judge at Hosakote to answer all the material questions relating to the above case, failing which the matter will be heard and decided in your absence.

Given under my hand and seal of this Court on 23-02-2026 at Hosakote.

BY ORDER OF THE COURT Sheristedar
Senior Civil Judge & JMFC Hosakote

ಗ್ಯಾರಂಟಿಗಳ ಬಗ್ಗೆ ಸ್ಪಷ್ಟನೆ ಕೊಡಲಿ

ಬೆಂಗಳೂರು: ಗ್ಯಾರಂಟಿಗಳ ಬಗ್ಗೆ ಜನರಲ್ಲಿ ಗೊಂದಲ ಮೂಡಿಸದೇ ಸರಕಾರ ಒಂದು ಸ್ಪಷ್ಟ ನಿರ್ಧಾರ ತಿಳಿಸಬೇಕು ಎಂದು ಮಾಜಿ ಸಚಿವ ಅಶ್ವತ್ಥನಾರಾಯಣ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮತಗಳಿಗಾಗಿ ಗ್ಯಾರಂಟಿಗಳನ್ನು ಜಾರಿಗೆ ತಂದರು. ಈಗ ಆ ಗ್ಯಾರಂಟಿಗಳ ಮೇಲೆಯೇ ಅವರಿಗೆ ನಂಬಿಕೆ ಇಲ್ಲದಾಗಿದೆ. ಅಲ್ಲಿ ಇಲ್ಲಿ ಮಾತಾಡಿ ಗೊಂದಲ ಮೂಡಿಸುವ ಬದಲು ನಿಮ ಉದ್ದೇಶ ಏನು ಹೇಳಿ? ಎಂದು ಪ್ರಶ್ನಿಸಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ಗ್ಯಾರಂಟಿಗಳು ಸರಕಾರಕ್ಕೆ ಹೊರೆಯಾಗಿವೆ ಎಂದು ಹೇಳಿದ್ದಾರೆ. ಮುಂದೆ ನಾನು ಹಾಗೆ ಹೇಳೇ ಎಂದು ಉಲ್ಟಾ ಹೊಡೆಯುತ್ತಾರೆ. ಹಾಗಾಗಿ ಗ್ಯಾರಂಟಿಗಳ ಬಗ್ಗೆ ಮೊದಲು ಸರಕಾರ ಸ್ಪಷ್ಟತೆ ಕೊಡಲಿ ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಮಕ್ಕಳ ನಾಪತ್ತೆ ಪ್ರಕರಣ ಹೆಚ್ಚಳ ವಿಚಾರವಾಗಿ ಪ್ರತಿಕ್ರಿಯಿಸಿ, ಇದು ಬಹಳ ದುಃಖಕರ ವಿಚಾರ. ಸರಕಾರ ಇದರ ಗಂಭೀರತೆ, ಸೂಕ್ಷ್ಮತೆ ಅರ್ಥ ಮಾಡಿಕೊಂಡು ಇದರ ಹಿಂದಿನ ಜಾಲಗಳನ್ನು ಪತ್ತೆ ಹಚ್ಚಬೇಕು. ಇದೇ ರೀತಿ ಅಕ್ರಮ ಬಾಂಗ್ಲಾ ನೆಲೆಗಳ ಮೇಲೆ ಪೊಲೀಸರು ದಾಳಿ ನಡೆಸಿರುವುದು ಉತ್ತಮ ಬೆಳವಣಿಗೆ. ರಾಜ್ಯದಲ್ಲಿ 25 ಲಕ್ಷ ಅಕ್ರಮ ಬಾಂಗ್ಲನ್ನರು ಇದ್ದಾರೆ. ಎಲ್ಲರನ್ನೂ ಪತ್ತೆ ಹಚ್ಚಿ ವಾಪಸ್ ಅವರ ದೇಶಕ್ಕೆ ಕಳಿಸಲಿ ಎಂದರು.

ಪರಿಷ್ಕರಣೆ ಇಲ್ಲ, ನಿಲ್ಲಿಸುವುದೂ ಇಲ್ಲ

ಗ್ಯಾರಂಟಿ ಯೋಜನೆಗಳಿಂದ ಸರಕಾರಕ್ಕೆ ಹೊರೆಯಾಗುತ್ತಿದೆ. ಆದರೂ ನಾವು ಯಾವುದೇ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ ಎಂದು ಹೇಳಿದ್ದೇವೆ. ಯಾವುದೇ ರೀತಿಯ ಪರಿಷ್ಕರಣೆಯನ್ನೂ ಮಾಡುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸ್ಪಷ್ಟಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಮೃತಪಟ್ಟಿರುವ ಕೆಲವರಿಗೆ ಗ್ಯಾರಂಟಿ ಯೋಜನೆಯ ಹಣ ಸಂದಾಯವಾಗಿದೆ. ಪಡಿತರ ಅಕ್ಕಿಯನ್ನೂ ಸಹ ಮೃತಪಟ್ಟಿರುವವರ ಹೆಸರಿನಲ್ಲಿ ಪಡೆಯಲಾಗುತ್ತಿದೆ. ಗೃಹ ಜ್ಯೋತಿಯಲ್ಲಿ ಈ ಸಮಸ್ಯೆ ಎದುರಾಗುವುದಿಲ್ಲ. ಮೃತ ಪಟ್ಟಿರುವವರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ತೆಗೆದುಕೊಳ್ಳಲಾಗಿದೆ. ಈ ರೀತಿ ದುರುಪಯೋಗ ವಾಗುವುದನ್ನು ತಪ್ಪಿಸಬೇಕು. ಮೃತಪಟ್ಟವರ ಲೆಕ್ಕ ಸಿಗುತ್ತಿಲ್ಲ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು ಎಂದು ಸರಕಾರ ಚರ್ಚೆ ಮಾಡುತ್ತಿದೆ ಎಂದರು.

ಅಕ್ರಮ ವಲಸಿಗರ ಪತ್ತೆ ಕಾರ್ಯಾಚರಣೆ

ಬೆಂಗಳೂರು: ಅಕ್ರಮ ಬಾಂಗ್ಲಾ ವಲಸಿಗರ ವಿರುದ್ಧ ಬೆಂಗಳೂರು ಪೊಲೀಸರ ಕಾರ್ಯಾಚರಣೆ ಚುರುಕುಗೊಂಡಿದೆ. ನಗರದ ಪೂರ್ವ ವಿಭಾಗದ ರಾಮಮೂರ್ತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಕೆ. ಚನ್ನಸಂದ್ರ, ಹಾಗೂ ಕಲ್ಕೆರೆ ಪ್ರದೇಶದ ವಿವಿಧೆಡೆ ಪ್ಲೈವುಡ್ ಅಂಗಡಿ, ಗೋದಾಮು ಹಾಗೂ ಮನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ವಿವಿಧ ಸ್ತರಗಳಲ್ಲಿ ಪೊಲೀಸರು ತಪಾಸಣೆಗೊಳಪಡಿಸಿದ್ದಾರೆ.

ಈ ವೇಳೆ 1 ಸಾವಿರಕ್ಕೂ ಅಧಿಕ ಸಂಶಯಾಸ್ಪದ ವ್ಯಕ್ತಿಗಳ ಆಧಾರ್ ಕಾರ್ಡ್, ವಿದ್ಯಾಭ್ಯಾಸ ಮಾಡಿರುವ ಮೂಲ ಅಂಕಪಟ್ಟಿ, ಬ್ಯಾಂಕ್ ಖಾತೆ, ಪಾಸ್‌ಪೋರ್ಟ್ ವಿವಿಧ ದಾಖಲೆಗಳು ಹಾಗೂ ಫೋನ್ ಕರೆ ಮತ್ತು ಸಕ್ರಿಯರಾಗಿರುವ ವಾಟ್ಸ್ ಆಪ್ ಗ್ರೂಪ್‌ಗಳನ್ನು ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಓರ್ವ ನೈಜೀರಿಯಾ ಪ್ರಜೆ ಸೇರಿದಂತೆ 11 ಜನ ಸಂಶಯಾಸ್ಪದ ಅಕ್ರಮ ನಿವಾಸಿಗಳು ಪತ್ತೆಯಾಗಿದ್ದು, ಆ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದರು.

ಕಾರ್ಯಾಚರಣೆಯನ್ನು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಪೂರ್ವ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರ ಮಾರ್ಗದರ್ಶನದಲ್ಲಿ ಉಪ ಪೊಲೀಸ್ ಆಯುಕ್ತ ಡಾ. ವಿಕ್ರಂ ಅಮಟೆ ಹಾಗೂ ಎಸಿಪಿ ಉಮಾಶಂಕರ್ ನೇತೃತ್ವದಲ್ಲಿ ನಡೆಸಲಾಗಿದೆ.

IN THE COURT OF THE JUNIOR CIVIL JUDGE AT VIRAJ PET.
O.S.No: 69/2024

Plaintiff : Smt. V.G. Jayalaxmi
-VS-
Defendants : Smt. V.R. Pushpalatha and another.

To,
Smt. V.R. Pushpalatha, aged 48 years, W/o: V.N.Ravi, r/a: # 15, Srivenkateshwara Nilaya, 3rd. Cross, Attur Main Road, Yelahanka, Bengaluru-64: - Defendant No:1.

PUBLIC NOTICE

It is hereby notified that the Plaintiff has filed the above suit against you and another for the relief of Permanent Injunction restraining you from withdraw the Life Insurance Policy Certificate No: 723192151 held at Life Insurance Corporation Virajpet branch, in the name of the Plaintiff and your father late. Sri. V.J.Ganesh.

The above case is now posted for Appearance your appearance on: **07/04/2026.**

Hence you are hereby notified to appear before this Hon'ble Court on the said date without fail either by you personally or through advocate. failing which the plaintiff will proceed further placing you exparte.

By the Order of the Hon'ble Court,
Chief Ministerial Officer
Civil Judge (JR. DVILUDGE AND JMFC) VIRAJPET

VIRAJPET
Dt: 13-02-2026
Sri V.P. RAMESH, BAL, LL.B
Advocate & Notary

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಕನಕಪುರ
ಸಿ.ಮಿಸ್.ನಂ. 136/2025

ಅರ್ಜಿದಾರರು : ಶ್ರೀಮತಿ ನಿಂಗಮ್ಮ ಕೋಂ ಲೇಟ್ ಶಿವಲಿಂಗೇಗೌಡ ವಯಸ್ಸು 74 ವರ್ಷ ವಾಸ: ಹೊಸಕಬ್ಬಾಳು ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇನ್ನೊಬ್ಬರು
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಸೀಲ್ದಾರ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ನಂ.1 ರವರ ಗಂಡ ಮತ್ತು 2ನೇ ಅರ್ಜಿದಾರರ ತಂದೆಯವರಾದ ಶಿವಲಿಂಗೇಗೌಡ ಬಿನ್ ಲೇಟ್ ಚಿಕ್ಕಣ್ಣೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಹೊಸಕಬ್ಬಾಳು ಗ್ರಾಮದಲ್ಲಿ ದಿನಾಂಕ 15.10.1974 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 01.04.2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2026ರ ಫೆಬ್ರವರಿ 26ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಪ್ರದೀಪ್. ಎಸ್.ಡಿ., ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 26/02/2026

ವಾಯು ಗುಣಮಟ್ಟ ಸೂಚ್ಯಂಕ 100ರ ಗಡಿ ದಾಟಿದರೆ ಜಿಬಿಎಗೆ ನೋಟಿಸ್ ನೀಡಿ: ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ

ರಾಜಧಾನಿಯ ಮಾಲಿನ್ಯ ನಿಯಂತ್ರಣಕ್ಕೆ ನಿರ್ದಿಷ್ಟ ಮಾನದಂಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರ ರಾಜಧಾನಿ ದೆಹಲಿಯಂತೆ ಬೆಂಗಳೂರು ಸಹ ಮತ್ತೊಂದು ಗ್ಯಾಸ್ ಛೇಂಬರ್ ಆಗದಂತೆ ಕ್ರಮ ವಹಿಸಲು ಶೀಘ್ರವೇ ನಗರದ ಎಲ್ಲ 28 ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ನಗರ ಶಾಸಕ ಸುರೇಶ್ ಕುಮಾರ್ ಅವರ ಕೋರಿಕೆಯ ಮೇರೆಗೆ ಗುರುವಾರ ಆಯೋಜಿಸಿದ್ದ ಉನ್ನತಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ, ಜಲ ಮಾಲಿನ್ಯ ಮತ್ತು ಶಬ್ದ ಮಾಲಿನ್ಯ ಹೆಚ್ಚಾಗುತ್ತಿದ್ದು ಇದರ ನಿಯಂತ್ರಣಕ್ಕೆ ಪಕ್ಷಾತೀತವಾಗಿ ಎಲ್ಲ ಜನಪ್ರತಿನಿಧಿಗಳ ಸಹಕಾರದ ಅಗತ್ಯವಿದೆ. ಈಗಾಗಲೇ ಬೆಂಗಳೂರಿನ 11 ಸ್ಥಳಗಳಲ್ಲಿ ಸ್ಥಾಪಿತ ಮತ್ತು 13 ಸಂಚಾರಿ ಘಟಕಗಳ ಮೂಲಕ ವಾಯು ಗುಣಮಟ್ಟ ಸೂಚ್ಯಂಕದ ಮೌಲ್ಯಮಾಪನ ಮಾಡಲಾಗುತ್ತಿದೆ. ವಾಯು ಗುಣಮಟ್ಟ ಸೂಚ್ಯಂಕ ಮೌಲ್ಯವು 100 ದಾಟಿದರೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿ ನಿಗದಿತ ಕಾಲಮಿತಿಯಲ್ಲಿ ನಿಯಂತ್ರಿಸಲು ಸೂಚಿಸಿ. ಕ್ರಮ ವಹಿಸದಿದ್ದರೆ ನಿಯಮಾನುಸಾರ ಮೊಕದ್ದಮೆ ದಾಖಲಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಉಪ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಶೀಘ್ರವೇ ಅವರ ಅಧ್ಯಕ್ಷತೆಯಲ್ಲೇ ಬೆಂಗಳೂರು ನಗರದ ಎಲ್ಲ ಜನಪ್ರತಿನಿಧಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದರು.

ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಅವರ ನೇತೃತ್ವ ದಲ್ಲಿ ಗುರುವಾರ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು. ಈ ವೇಳೆ ಶಾಸಕ ಸುರೇಶ್ ಕುಮಾರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಏಕಬಳಕೆ ಪ್ಲಾಸ್ಟಿಕ್: ಜನಜಾಗೃತಿಯೊಂದೇ ಮಾರ್ಗ

ಏಕ ಬಳಕೆ ಪ್ಲಾಸ್ಟಿಕ್ ತ್ಯಾಜ್ಯ ಸಮಸ್ಯೆ ಬೆಂಗಳೂರಿನಲ್ಲಿ ವಿಪರೀತವಾಗಿದ್ದು, ಇದರ ನಿಯಂತ್ರಣಕ್ಕೆ ಸ್ಥಳೀಯ ಸಂಸ್ಥೆಗಳು ಹಾಗೂ ಇನ್ನಿತರ ಇಲಾಖೆಗಳ ಸಹಯೋಗದಲ್ಲಿ ಜಾಗೃತ ದಳ ರಚಿಸಿ ಕ್ರಮ ವಹಿಸಿ ಎಂದು ಸೂಚಿಸಲಾಗಿದೆ. ನಗರ ಸೇರಿದಂತೆ ರಾಜ್ಯದಲ್ಲಿ ಎಷ್ಟು ತ್ಯಾಜ್ಯ ಶುದ್ಧೀಕರಣ ಘಟಕಗಳಿವೆ. ಅವುಗಳ ಪೈಕಿ ಎಷ್ಟು ಕಾರ್ಯನಿರ್ವಹಿಸುತ್ತಿದೆ. ಅವುಗಳ ಸ್ಥಾಪಿತ ಸಾಮರ್ಥ್ಯ ಎಷ್ಟು ಮತ್ತು ಪ್ರಸ್ತುತ ಎಷ್ಟು ಎಂ.ಎಲ್.ಡಿ. ದ್ರವ ತ್ಯಾಜ್ಯ ಸಂಸ್ಕರಣೆ ಆಗುತ್ತಿದೆ. ಎಷ್ಟು ಎಂ.ಎಲ್.ಡಿ. ನೀರು ಸಂಸ್ಕರಣೆ ಆಗದೆ ಜಲ ಮೂಲ ಸೇರುತ್ತಿದೆ ಎಂಬುದರ ಬಗ್ಗೆ ಪರಿಸರ ಇಲಾಖೆಯಿಂದ ಖುದ್ದು ಪರಿಶೀಲನೆ ನಡೆಸಿ 1 ತಿಂಗಳೊಳಗೆ ವರದಿ ಸಲ್ಲಿಸುವಂತೆ ಹೇಳಲಾಗಿದೆ ಎಂದು ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದರು.

ಬೆಂಗಳೂರು ನಗರದಲ್ಲಿ ರಸ್ತೆಯಲ್ಲಿನ ಧೂಳಿನಿಂದಾಗಿ ವಾಯು ಗುಣಮಟ್ಟ ಕ್ಷೀಣಿಸುತ್ತಿದ್ದು, ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ವೈದ್ಯರು ಬೆಂಗಳೂರು ಹೊರ ವಲಯಕ್ಕೆ ಹೋಗುವಂತೆ ಸಲಹೆ ನೀಡುತ್ತಿದ್ದಾರೆ. ವಾಯು ಗುಣಮಟ್ಟ ಕಾಪಾಡಲು ತುರ್ತು ಕ್ರಮ ಕೈಗೊಳ್ಳಬೇಕು.

– **ಸುರೇಶ್ ಕುಮಾರ್**, ಶಾಸಕ

ಕೆಲವೇ ದಶಕಗಳ ಹಿಂದೆ ನಿವೃತ್ತರ ಸ್ವರ್ಗ, ಹವಾನಿಯಂತ್ರಿತ ನಗರ ಎಂದು ಖ್ಯಾತಿ ಪಡೆದಿದ್ದ ಉದ್ಯಾನ ನಗರಿ ಬೆಂಗಳೂರಿನಲ್ಲೂ ಇಂದು ಬಿಸಿಲ ಬೇಗೆ ಹೆಚ್ಚುತ್ತಿದೆ. ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ ಇದಕ್ಕೆ ಕಾರಣವಾಗಿದ್ದರೂ, ನಗರದ ಹಸಿರು ಹೊದಿಕೆ ಹೆಚ್ಚಿಸಿ ನಗರದ ವಾಯು ಗುಣಮಟ್ಟ ರಕ್ಷಿಸಲು ಎಲ್ಲ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

– **ಈಶ್ವರ ಖಂಡ್ರೆ**, ಅರಣ್ಯ ಸಚಿವ

ಬ್ಯಾಂಕ್ ಆಫ್ ಬರೋಡ / बैंक ऑफ़ बड़ौदा / Bank of Baroda

ಪ್ರಾದೇಶಿಕ ಕಚೇರಿ, ಬೆಂಗಳೂರು ದಕ್ಷಿಣ : 4ನೇ ಮಹಡಿ, 41/2, ಎಂ.ಜಿ ರಸ್ತೆ, ಟ್ರಿನಿಟಿ ವೃತ್ತ, ಬೆಂಗಳೂರು–560001.

ನಮ್ಮ ಅತ್ಯಂತ ಮೌಲ್ಯಯುತ ಗ್ರಾಹಕರ ಗಮನಕ್ಕಾಗಿ

ಕೆಳಗೆ ಸೂಚಿಸಲಾದ ವಿಳಾಸದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಾಖೆಯನ್ನು ಹೊಸ ವಿಳಾಸಕ್ಕೆ ಸ್ಥಳಾಂತರಿಸಲಾಗುವುದು. ಅತೀ ಶೀಘ್ರದಲ್ಲಿ ಹೊಸ ವಿಳಾಸದಲ್ಲಿ ಕಾರ್ಯನಿರ್ವಹಿಸಲಿದೆ. ಸದರಿ ಆವರಣದಿಂದ ಎಲ್ಲಾ ರೀತಿಯ ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಬ್ಯಾಂಕ್/ಶಾಖೆಯ ಹೆಸರು	ಪ್ರಸ್ತುತ ವಿಳಾಸ	ಪ್ರಸ್ತಾವಿತ ವಿಳಾಸ
ಬ್ಯಾಂಕ್ ಆಫ್ ಬರೋಡಾ ವೈಟ್‌ಫೀಲ್ಡ್ ಶಾಖೆ	ಬ್ಯಾಂಕ್ ಆಫ್ ಬರೋಡಾ ನಂ. 274, 1ನೇ ಮಹಡಿ, ವೈಟ್‌ಫೀಲ್ಡ್ ಮುಖ್ಯ ರಸ್ತೆ ವೈಟ್‌ಫೀಲ್ಡ್, ಬೆಂಗಳೂರು–560066 VJWHIT@bankofbaroda.bank.in ಶಾಖೆಯ ಮುಖ್ಯಸ್ಥರು : 91763 74455 & 8618182139	ಬ್ಯಾಂಕ್ ಆಫ್ ಬರೋಡಾ ಸಂಖ್ಯೆ: 48/2, "ಇರಾ ಸ್ಕೇರ್", ಬೋರ್‌ವೆಲ್ ಮುಖ್ಯ ರಸ್ತೆ ವೈಟ್‌ಫೀಲ್ಡ್, ಬೆಂಗಳೂರು–560066 VJWHIT@bankofbaroda.bank.in ಶಾಖೆಯ ಮುಖ್ಯಸ್ಥರು : 91763 74455 & 8618182139

ನಮ್ಮ ಮೇಲೆ ತಿಳಿಸಿದ ಶಾಖೆಯ ಎಲ್ಲಾ ಲಾಕರ್ ಹೊಂದಿರುವ ಗ್ರಾಹಕರಿಗೆ ನಾವು ತಿಳಿಸಲು ಬಯಸುವುದೇನೆಂದರೆ ಲಾಕರ್ ಅನ್ನು ಪ್ರಸ್ತಾವಿತ ಆವರಣಕ್ಕೆ ಸ್ಥಳಾಂತರಿಸುವಾಗ ಹೆಚ್ಚಿನ ಕಾಳಜಿ ವಹಿಸಲಾಗುವುದು. ಆದಾಗ್ಯೂ, ಸ್ಥಳಾಂತರದ ಸಮಯದಲ್ಲಿ ಅಪಾಯ ಮತ್ತು ನಷ್ಟವನ್ನು ಕಡಿಮೆ ಮಾಡಲು, ಲಾಕರ್ ಸೌಲಭ್ಯ ಹೊಂದಿರುವ ಯಾವುದೇ ಗ್ರಾಹಕರು ಸ್ಥಳಾಂತರಗೊಳ್ಳುವ ಮೊದಲು ತಮ್ಮ ವಸ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಬಯಸಿದರೆ ಮತ್ತು ಲಾಕರ್‌ಗಳನ್ನು ಪ್ರಸ್ತಾವಿತ ಸ್ಥಳಕ್ಕೆ ಸ್ಥಳಾಂತರಿಸಿದ ನಂತರ ಅದನ್ನು ಮರು ಠೇವಣಿ ಇಡಲು ಬಯಸಿದರೆ ಶಾಖೆಯು ಸ್ಥಳಾಂತರಗೊಳ್ಳುವ ಮೊದಲು ಸಂಬಂಧಪಟ್ಟ ಶಾಖೆಯ ಮುಖ್ಯಸ್ಥರನ್ನು ಸಂಪರ್ಕಿಸಬೇಕೆಂದು ವಿನಂತಿಸುತ್ತೇವೆ.

ಈ ನಿಟ್ಟಿನಲ್ಲಿ ನಿಮಗೆ ಉಂಟಾದ ಅನಾನುಕೂಲತೆಗೆ ನಾವು ಪ್ರಾಮಾಣಿಕವಾಗಿ ವಿಷಾದಿಸುತ್ತೇವೆ ಮತ್ತು ಎಲ್ಲಾ ಸಮಯದಲ್ಲೂ ನಮ್ಮ ಅತ್ಯುತ್ತಮ ಸೇವೆಗಳ ಬಗ್ಗೆ ನಿಮಗೆ ಭರವಸೆ ನೀಡುತ್ತೇವೆ.

ದಿನಾಂಕ: 26.02.2026
ಸ್ಥಳ: ಬೆಂಗಳೂರು
ಸಹಿ/– ಪ್ರಾದೇಶಿಕ ಮುಖ್ಯಸ್ಥರು, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ದಕ್ಷಿಣ

ದಿನಪತ್ರಿಕೆ ವಿತರಕರಾಗಿ ಕಾರ್ಯನಿರ್ವಹಿಸುತ್ತಲೇ ಕರ್ನಾಟಕ ರಾಜ್ಯ ನ್ಯಾಯಾಂಗ ಸೇವೆಗೆ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಶಶಾಂಕ್ ಎಚ್ ಅವರನ್ನುದಿನಪತ್ರಿಕೆ ವಿತರಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಲ್. ಜೀವನ್ ಸನ್ಮಾನಿಸಿದರು. ಈ ವೇಳೆ ಸಮಿತಿಯ ಅಧ್ಯಕ್ಷ ಆರ್. ಪ್ರಸನ್ನ ಕುಮಾರ್, ಮೈಸೂರ್ ಬ್ಯಾಂಕ್ ಕಾಲೋನಿಯ ದಿನಪತ್ರಿಕೆ ವಿತರಕರಾದ ಶರತ್, ಶಿವಕುಮಾರ್, ರಾಜೀವ್ ಸೇರಿದಂತೆ ಇನ್ನಿತರರು ಇದ್ದರು.

ಡಾ.ಟಿ.ವಿ.ರಾವ್‌ಗೆ ಜೀವಮಾನ ಸಾಧನೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರಿನ ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಎಕ್ಸಲೆನ್ಸ್ (ಐಎಸ್‌ಎಂಇ) ಆಯೋಜಿಸಿದ್ದ ಮ್ಯಾನೇಜ್‌ಮೆಂಟ್‌ನಲ್ಲಿ ಸಮಕಾಲೀನ ಸಮಸ್ಯೆಗಳ ಕುರಿತು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಎಚ್ ಆರ್‌ಡಿ ನೆಟ್ವರ್ಕ್‌ನ ಸಹ-ಸಂಸ್ಥಾಪಕ ಡಾ. ಟಿ.ವಿ. ರಾವ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೃತಕ ಬುದ್ಧಿಮತ್ತೆ, ಸಂಶೋಧನಾ ನೀತಿಶಾಸ್ತ್ರ ಮತ್ತು ಉದ್ಯಮ-ಸಿದ್ಧ ವಿಧಾನಗಳ ಕುರಿತು ಸಮ್ಮೇಳನದಲ್ಲಿ ಮಹತ್ತರ ಚರ್ಚೆ ನಡೆಸಲಾಯಿತು. ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಂಸ್ಥೆ ನಿರ್ಮಾಣಕ್ಕೆ ಡಾ. ರಾವ್ ಅವರ ದಶಕಗಳ ಕೊಡುಗೆಯನ್ನು ಗುರುತಿಸಿ ಈ ಗೌರವ ನೀಡಲಾಯಿತು. ಇಂದು ಎಐ ಎಲ್ಲವನ್ನೂ ಮಾಡಬಹುದು. ಆದರೆ ಅದು ಮಾನವ ಸಂಪನ್ಮೂಲವನ್ನು ಮೀರಲು ಸಾಧ್ಯವಿಲ್ಲ. ಆದ್ದರಿಂದ ನಾವು ಕೇವಲ ಎಐ ಮೇಲೆ ಮಾತ್ರ ಅವಲಂಬಿತವಾಗಬಾರದು ಎಂದು ರಾವ್ ಈ ಸಂದರ್ಭದಲ್ಲಿ ಕರೆ ನೀಡಿದರು. ಐಎಸ್‌ಎಂಇ ಸಂಸ್ಥಾಪಕ, ನಿರ್ದೇಶಕ ಡಾ.ನಿತಿನ್ ಗಾರ್ಗ್ ಈ ಸಂದರ್ಭದಲ್ಲಿ ಹಾಜರಿದ್ದರು. ಐಎಸ್‌ಎಂಇ ಮತ್ತೋರ್ವ ನಿರ್ದೇಶಕರಾದ ಡಾ.ಪಲ್ಲವಿ ಗಾರ್ಗ್ ಸಮಕಾಲೀನ ಸಮಸ್ಯೆಗಳ ಕುರಿತು ಮಾತನಾಡಿದರು.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 18.03.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 98,59,692.80/– (ರೂಪಾಯಿ ತೊಂಭತ್ತೆಂಟು ಲಕ್ಷದ ಐವತ್ತೊಂಭತ್ತು ಸಾವಿರದ ಆರುನೂರ ತೊಂಭತ್ತೆರಡು ಮತ್ತು ಎಂಭತ್ತು ಪೈಸೆ ಮಾತ್ರ) ಜೊತೆಗೆ ದಿನಾಂಕ: 24.02.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಶಕ್ತಿವೇಲ್ ನಟರಾಜನ್,** ನಂ. 105 ಸಿ ಬ್ಲಾಕ್ 1ನೇ ಮಹಡಿ, ಪೂರ್ವಿ ಲೋಟಸ್ ಅಪಾರ್ಟ್‌ಮೆಂಟ್, ಸೋಮಸಂದ್ರಪಾಳ್ಯ ಮುಖ್ಯ ರಸ್ತೆ, ಬೆಂಗಳೂರು– 560068 **(2) ಅಮೃತಾ ಶಕ್ತಿವೇಲ್,** ನಂ. 105 ಸಿ ಬ್ಲಾಕ್ 1ನೇ ಮಹಡಿ, ಪೂರ್ವಿ ಲೋಟಸ್ ಅಪಾರ್ಟ್‌ಮೆಂಟ್, ಸೋಮಸಂದ್ರಪಾಳ್ಯ ಮುಖ್ಯ ರಸ್ತೆ, ಬೆಂಗಳೂರು–560068, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 17.03.2026 ರ ಸಂಜೆ 6.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಅಪಾರ್ಟ್‌ಮೆಂಟ್ ಫ್ಲಾಟ್ ನಂ. ಸಿ–04, ನೆಲಮಹಡಿ, ಸಿ ಬ್ಲಾಕ್, "ಕಿಂಗ್ಸ್ ಸ್ಕ್ವೇರ್", ಅಪಾರ್ಟ್‌ಮೆಂಟ್ ಸ್ವತ್ತಿನ ಸರ್ವೆ ನಂ. 189, ಈ ಆಸ್ತಿಯು ಕೊಡತ್ತಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560035 ರಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ಶಿವನಂಜಪ್ಪ ರವರ ಭೂಮಿಯ ಸರ್ವೆ ನಂ. 188, ಪಶ್ಚಿಮಕ್ಕೆ : ಶಿವಹನುಮಂತಪ್ಪ ರವರ ಸ್ವತ್ತಿನ ಸರ್ವೆ ನಂ. 190, ಉತ್ತರಕ್ಕೆ : ಕೃಷ್ಣ ರೆಡ್ಡಿ ರವರ ಭೂಮಿಯ ಸರ್ವೆ ನಂ. 192, ದಕ್ಷಿಣಕ್ಕೆ : 40 ಅಡಿ ರಸ್ತೆ, ನಂತರ ಸರ್ವೆ ನಂ. 79	₹. 38.48	₹. 3.85	₹. 1.00	26.02.2026 ಬೆಳಿಗ್ಗೆ 10.00 ರಿಂದ ಸಂಜೆ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ
2	ಅಪಾರ್ಟ್‌ಮೆಂಟ್ ಫ್ಲಾಟ್ ನಂ. ಬಿ–04, ನೆಲಮಹಡಿ, ಬಿ ಬ್ಲಾಕ್, "ಕಿಂಗ್ಸ್ ಸ್ಕ್ವೇರ್", ಅಪಾರ್ಟ್‌ಮೆಂಟ್ ಸ್ವತ್ತಿನ ಸರ್ವೆ ನಂ. 189, ಈ ಆಸ್ತಿಯು ಕೊಡತ್ತಿ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560035 ರಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ಶಿವನಂಜಪ್ಪ ರವರ ಭೂಮಿಯ ಸರ್ವೆ ನಂ. 188, ಪಶ್ಚಿಮಕ್ಕೆ : ಶಿವಹನುಮಂತಪ್ಪ ರವರ ಸ್ವತ್ತಿನ ಸರ್ವೆ ನಂ. 190, ಉತ್ತರಕ್ಕೆ : ಕೃಷ್ಣ ರೆಡ್ಡಿ ರವರ ಭೂಮಿಯ ಸರ್ವೆ ನಂ. 192, ದಕ್ಷಿಣಕ್ಕೆ : 40 ಅಡಿ ರಸ್ತೆ, ನಂತರ ಸರ್ವೆ ನಂ. 79	₹. 38.48	₹. 3.85	₹. 1.00	

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೊವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9535093706 ಮತ್ತು 9039609346)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 26.02.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **13.06.2025** ರಂದು ಕರೆದು ಸಾಲಗಾರ **ಕೆ ಮಹೇಂದ್ರನ್ ಮತ್ತು ಪುಷ್ಪಲತಾ ಡಿ ಅಲಿಯಾಸ್ ಡಿ ಪುಷ್ಪಲತಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 34,91,805.05 (ಮೂವತ್ತನಾಲ್ಕು ಲಕ್ಷದ ತೊಂಬತ್ತೊಂದು ಸಾವಿರದ ಎಂಟುನೂರ ಐದು ರೂಪಾಯಿಗಳು ಮತ್ತು ಐದು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBGM00519753** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನುತಲುಪಿ 60 ದಿನಗಳಾಗುವುದರೊಳಗೆ **13.06.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **24.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 34,91,805.05 (ಮೂವತ್ತನಾಲ್ಕು ಲಕ್ಷದ ತೊಂಬತ್ತೊಂದು ಸಾವಿರದ ಎಂಟುನೂರ ಐದು ರೂಪಾಯಿಗಳು ಮತ್ತು ಐದು ಪೈಸೆ ಮಾತ್ರ) 13.06.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಎರಡು ಮಲಗುವ ಕೋಣೆಗಳ ಅಪಾರ್ಟ್ಮೆಂಟ್ ಸಂಖ್ಯೆ 1701, 510.64 ಚದರ ಅಡಿ ಕಾರ್ಪೆಟ್ ವಿಸ್ತೀರ್ಣ ಮತ್ತು 726.71 ಚದರ ಅಡಿ ಮಾರಾಟ ಮಾಡಬಹುದಾದ ವಿಸ್ತೀರ್ಣವನ್ನು ಹೊಂದಿದೆ, ವಿಂಗ್ ಚ3, ಬ್ಲಾಕ್-ಚ ನ 17 ನೇ ಮಹಡಿಯಲ್ಲಿ, ಇ ಖಾತಾ ಸಂಖ್ಯೆ 150200302600221960 ನೊಂದಿಗೆ, ''ವಿಬಿಹೆಚ್ಸಿ ಪಾಮ್ಡೇವನ್ II'' ಎಂದು ಕರೆಯಲ್ಪಡುವ ಯೋಜನೆಯಲ್ಲಿ, ಭೂ ಬೇರಿಂಗ್ ಸರ್ವೆಯಲ್ಲಿ ಸಂಖ್ಯೆ. 25, 28/1, 28/2, 29/4, 29/6, 29/7, 29/9, 29/10, 29/11, 29/12, 29/13, 29/14, 29/15 ಮತ್ತು 32/1ಅ, ಕೆಂಗೇರಿ ಹೋಬಳಿಯ ದೊಡ್ಡಬೆಲೆ ಗ್ರಾಮದಲ್ಲಿ, ಒಂದು ಬೇಸ್ಮೆಂಟ್ ಮುಚ್ಚಿದ ಕಾರು ಪಾರ್ಕಿಂಗ್ ಸ್ಥಳ/ಗಳು ಜೊತೆಗೆ ಸಾಮಾನ್ಯ ಪ್ರದೇಶದಲ್ಲಿ ಅನುಪಾತದ ಪಾಲು ಮತ್ತು ಸಾಮಾನ್ಯ ಪ್ರದೇಶದ ಬಳಕೆಗೆ ವಿಶೇಷವಲ್ಲದ ಹಕ್ಕು, 304.74 ಚದರ ಅಡಿಗಳಷ್ಟು ಸಾಮಾನ್ಯ ಸೌಲಭ್ಯಗಳು ಮತ್ತು ಸೌಲಭ್ಯಗಳು, ಯೋಜನೆಯ ಹೇಳಲಾದ ಭೂಮಿ, ಬೆಂಗಳೂರು ಗ್ರಾಮಾಂತರ - ಬೆಂಗಳೂರು ದಕ್ಷಿಣ ಕರ್ನಾಟಕ

ದಿನಾಂಕ: 24.02.2026
ಸ್ಥಳ : ಬೆಂಗಳೂರು
ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **27.11.2025** ರಂದು ಕರೆದು ಸಾಲಗಾರ **ಲಕ್ಷ್ಮೀಪ್ರಿಯಾ ದಾಶ್ ಮತ್ತು ಪ್ರಿಯದರ್ಶಿ ಮಿಶ್ರಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 41,50,381.92 (ನಲವತ್ತೊಂದು ಲಕ್ಷ ಐವತ್ತು ಸಾವಿರದ ಮೂರುನೂರ ಎಂಬತ್ತೊಂದು ರೂಪಾಯಿಗಳು ಮತ್ತು ತೊಂಬತ್ತೆರಡು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 1 ರ ಮೇಲೆ) ಮತ್ತು ರೂ. 1,36,251.38 (ಒಂದು ಲಕ್ಷ ಮೂವತ್ತಾರು ಸಾವಿರದ ಎರಡು ನೂರ ಐವತ್ತೊಂದು ರೂಪಾಯಿಗಳು ಮತ್ತು ಮೂವತ್ತೆಂಟು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 2 ರ ಮೇಲೆ) ಒಟ್ಟು ಬಾಕಿ ಮೊತ್ತವನ್ನು ಹೊಂದಿರುವ ರೂ. 42,86,633.30 (ನಲವತ್ತೆರಡು ಲಕ್ಷ ಎಂಬತ್ತಾರು ಸಾವಿರದ ಆರುನೂರ ಮೂವತ್ತಮೂರು ರೂಪಾಯಿಗಳು ಮತ್ತು ಮೂವತ್ತು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 1 ಮತ್ತು 2 ರ ಮೇಲೆ)** ಸಾಲ ಖಾತೆ ನಂ. **HHLBAN00383806 & HHEBNE00384592** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **25.11.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **24.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 41,50,381.92 (ನಲವತ್ತೊಂದು ಲಕ್ಷ ಐವತ್ತು ಸಾವಿರದ ಮೂರುನೂರ ಎಂಬತ್ತೊಂದು ರೂಪಾಯಿಗಳು ಮತ್ತು ತೊಂಬತ್ತೆರಡು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 1 ರ ಮೇಲೆ) ಮತ್ತು ರೂ. 1,36,251.38 (ಒಂದು ಲಕ್ಷ ಮೂವತ್ತಾರು ಸಾವಿರದ ಎರಡು ನೂರ ಐವತ್ತೊಂದು ರೂಪಾಯಿಗಳು ಮತ್ತು ಮೂವತ್ತೆಂಟು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 2 ರ ಮೇಲೆ) ಒಟ್ಟು ಬಾಕಿ ಮೊತ್ತವನ್ನು ಹೊಂದಿರುವ ರೂ. 42,86,633.30 (ನಲವತ್ತೆರಡು ಲಕ್ಷ ಎಂಬತ್ತಾರು ಸಾವಿರದ ಆರುನೂರ ಮೂವತ್ತಮೂರು ರೂಪಾಯಿಗಳು ಮತ್ತು ಮೂವತ್ತು ಪೈಸೆ ಮಾತ್ರ) (ಸಾಲ ಸೌಲಭ್ಯ ನಂ. 1 ಮತ್ತು 2 ರ ಮೇಲೆ) 25.11.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ವಸತಿ ಅಪಾರ್ಟ್ಮೆಂಟ್ ಬೇರಿಂಗ್ ಫ್ಲಾಟ್ ಸಂಖ್ಯೆ 205, 2ನೇ ಮಹಡಿಯಲ್ಲಿ 1375 ಚದರ ಅಡಿ ಅಳತೆಯ ಸೂಪರ್ ಬಿಲ್ಟ್-ಅಪ್ ಪ್ರದೇಶದ 997 ಚದರ ಅಡಿ ಕಾರ್ಪೆಟ್ ಪ್ರದೇಶದೊಂದಿಗೆ. ಬ್ಲಾಕ್ನಲ್ಲಿ- ಸರ್ವೆಯಲ್ಲಿ ನಿರ್ಮಿಸಲಾದ ವಿಮ್ಯಾಕ್ಸ್ ಲಾರೆಲ್ ನಲ್ಲಿ ಕಟ್ಟಡ. ಸಂಖ್ಯೆ 19/2 (ಹಳೆಯ ಸರ್ವೆ ಸಂಖ್ಯೆ 19), ಸರ್ವೆ ಸಂಖ್ಯೆ 20/2 (ಹಳೆಯ ಸಂಖ್ಯೆ 20), ಸರ್ವೆ ಸಂಖ್ಯೆ 22/1 ಸರ್ವೆ ಸಂಖ್ಯೆ 22/6 (ಹಳೆಯ ಸಂಖ್ಯೆ 22/3) ಇಂಡಲೇಬಲ್ ಗ್ರಾಮ, ಅಟ್ಟಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು- 562107, ಕರ್ನಾಟಕ, 488 ಚದರ ಅಡಿಗಳೊಂದಿಗೆ. ಕಟ್ಟಡದ ಸದರಿ ಆಸ್ತಿಯಲ್ಲಿ ಅವಿಭಜಿತ ಪಾಲು, ಬಲ ಟೈಲ್ ಮತ್ತು ಆಸಕ್ತಿ. ಮೇಲಿನ ಬೇಸ್ಮೆಂಟ್ ಮಹಡಿಯಲ್ಲಿ ಒಂದು ಕಾರು ಪಾರ್ಕಿಂಗ್ ಸ್ಥಳ ಬೇರಿಂಗ್ ಸಂಖ್ಯೆ. ಪ -205 ಜೊತೆಗೆ

ದಿನಾಂಕ: 24.02.2026
ಸ್ಥಳ : ಬೆಂಗಳೂರು
ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)

ಆಟೋ ಚಾಲಕರ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮ: ರಾಮಲಿಂಗಾರೆಡ್ಡಿ

ಮಹಿಳೆಯರು ಮತ್ತು ಮಂಗಳಮುಖಿಯರಿಗೆ ಉಚಿತ ಆಟೋ ಚಾಲನಾ ಹಾಗೂ ಕೌಶಲ್ಯ ತರಬೇತಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು. ಈ ವೇಳೆ ಸಿಜಿಐ ಪ್ರತಿನಿಧಿ ಸುಧಾಕರ್ ಪೈ, ಇಎಸ್ ನಿರ್ದೇಶಕ ಶ್ರೀನಿವಾಸ ರಾಘವನ್, ಬಿ.ಪ್ಯಾಕ್ ಕಾರ್ಯಕ್ರಮ ಮುಖ್ಯಸ್ಥ ರಾಘವೇಂದ್ರ ಪೂಜಾರಿ ಎಚ್. ಎಸ್., ನಮ್ಮ ಸಾರಥಿ ಅಧ್ಯಕ್ಷ ಸಂಪತ್ ಮತ್ತು ದೇವಿಕಾ, ಪೀಸ್ ಆಟೋ ಅಧ್ಯಕ್ಷ ರಘು ನಾರಾಯಣ ಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು: ಮಹಿಳೆಯರು ಮತ್ತು ಮಂಗಳಮುಖಿಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಉಚಿತ ಆಟೋ ಚಾಲನಾ ತರಬೇತಿ ನೀಡುತ್ತಿರುವುದು ಶ್ಲಾಘನೀಯವಾಗಿದ್ದು, ಸರಕಾರದಿಂದಲೂ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಬಿ.ಪ್ಯಾಕ್ ಹಾಗೂ ಸಿಜಿಐ ಸಹಯೋಗದಲ್ಲಿ ಗುರುವಾರ ಬಿಟಿಎಂ ಲೇಔಟ್‌ನಲ್ಲಿ ಆಯೋಜಿಸಿದ್ದ ಮಹಿಳೆಯರು ಮತ್ತು ಮಂಗಳಮುಖಿಯರಿಗೆ ಉಚಿತ ಆಟೋ ಚಾಲನಾ ಹಾಗೂ ಕೌಶಲ್ಯ ತರಬೇತಿಗೆ ಚಾಲನೆ ನೀಡಿ ನಂತರ ಮಾತನಾಡಿದ ಅವರು, ಮಹಿಳೆಯರು ಹಾಗೂ ಮಂಗಳಮುಖಿಯರನ್ನು ಆರ್ಥಿಕವಾಗಿ ಬಲಪಡಿಸುವ ಕೆಲಸ ಮಾಡುತ್ತಿರುವುದು ಪ್ರಶಂಸನೀಯ. ಇಂದು ಬೆಂಗಳೂರಿನ ಯಾವುದೇ ಜಾಗಕ್ಕೆ ತೆರಳಬೇಕಿದ್ದರೂ ಆಟೋ ಅನಿವಾರ್ಯವಾಗಿದ್ದು, ಬೆಂಗಳೂರಿಗರ ಬೆನ್ನೆಲುಬಾಗಿ ನಿಂತಿದೆ. ಹೀಗಾಗಿ ಆಟೋ ಚಾಲಕರ ಸಮುದಾಯಕ್ಕೆ ಇನ್ನಷ್ಟು ಯೋಜನೆ ಹಾಗೂ ಸೌಲಭ್ಯ ಒದಗಿಸಿಕೊಡುವ ನಿಟ್ಟಿನಲ್ಲಿ ಸರಕಾರದೊಂದಿಗೆ ಚರ್ಚಿಸಿ ರಾಜ್ಯ ಬಜೆಟ್ ನಂತರ ಕ್ರಮ ಕೈಗೊಳ್ಳಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಸಿಜಿಐ ಪ್ರತಿನಿಧಿ ಸುಧಾಕರ್ ಪೈ, ಇಎಸ್ ನಿರ್ದೇಶಕ ಶ್ರೀನಿವಾಸ ರಾಘವನ್, ಬಿ.ಪ್ಯಾಕ್ ಕಾರ್ಯಕ್ರಮ ಮುಖ್ಯಸ್ಥ ರಾಘವೇಂದ್ರ, ಪೂಜಾರಿ ಎಚ್.ಎಸ್., ನಮ್ಮ ಸಾರಥಿ ಅಧ್ಯಕ್ಷ ಸಂಪತ್ ಮತ್ತು ದೇವಿಕಾ, ಪೀಸ್ ಆಟೋ ಅಧ್ಯಕ್ಷ ರಘು ನಾರಾಯಣ ಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಚಾಲನಾ ತರಬೇತಿ

ಬಿ.ಪ್ಯಾಕ್ ಹಾಗೂ ಸಿಜಿಐ ಸಂಸ್ಥೆಯು ಸಿಎಸ್‌ಆರ್ ಅಡಿಯಲ್ಲಿ ಮಹಿಳೆ ಯರು ಮತ್ತು ತೃತೀಯ ಲಿಂಗಿಗಳಿಗಳು ವೃತ್ತಿಪರ ಆಟೋ ಚಾಲಕರಾಗಿ ರೂಪುಗೊಳ್ಳಲು ಉಚಿತ ತರಬೇತಿ ನೀಡುತ್ತಾ ಬಂದಿದ್ದು, ಇದುವರೆಗೂ 9 ವಿಧಾನ ಸಭಾ ಕ್ಷೇತ್ರದಾದ್ಯಂತ 500ಕ್ಕೂ ಹೆಚ್ಚು ಮಹಿಳೆಯರು ಹಾಗೂ ಮಂಗಳಮುಖಿಯರಿಗೆ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲೂ ಈ ಕಾರ್ಯಕ್ರಮವನ್ನು ಮುಂದುವರೆಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಸಚಿವ ರಾಮಲಿಂಗರೆಡ್ಡಿ ತಿಳಿಸಿದರು.

ಅಧ್ಯಕ್ಷರಾಗಿ ವೈ.ವಿ.ರಾಜು ಆಯ್ಕೆ

ಬೆಂಗಳೂರು: ಟೆಕ್ಸ್‌ಟೈಲ್ಸ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧ್ಯಕ್ಷ ರಾಗಿ ವೈ.ವಿ.ರಾಜು ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. 2023– 24 ರಿಂದ 2027–28 ನೇ ಸಾಲಿನ ಉಳಿದ ಅವಧಿಗೆ ಅಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬ್ಯಾಂಕಿನ ನಿರ್ದೇಶಕರಾದ ಎಣ್ಣೆಗೆರೆ ಆರ್.ವೆಂಟಕರಾಮಯ್ಯ ಅಲಿಯಾಸ್ ವೈ.ವಿ. ರಾಜು ಅವರು ಅವಿರೋಧವಾಗಿ ಆಯ್ಕೆಯಾಗಿ ದ್ದಾರೆ ಎಂದು ಮುಖ್ಯ ಕಾರ್ಯನಿರ್ವಾಹಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೂಪರ್-8, ಗುಂಪು-1ರ ಪಂದ್ಯ: ಅಭಿಷೇಕ್ 55, ಹಾರ್ದಿಕ್ 50 ರನ್ ತಿಲಕ್ ವರ್ಮಾ 44 | ಜಿಂಬಾಬ್ವೆ ವಿರುದ್ಧ ಸೂರ್ಯ ಪಡೆಗೆ 72 ರನ್ ಜಯ

ಅಬ್ಬರಿಸಿ ಗೆದ್ದ ಭಾರತದ ಸೆಮೀಸ್ ಆಸೆ ಜೀವಂತ

ಚೆನ್ನೈ: ಟಿ20 ವಿಶ್ವಕಪ್ ಸೂಪರ್-8 ಹಂತದ ಗುಂಪು-1ರ ಪಂದ್ಯದಲ್ಲಿ ಭಾರತ ಗುರುವಾರ ಜಿಂಬಾಬ್ವೆ ವಿರುದ್ಧ 72 ರನ್‌ಗಳಿಂದ ಗೆಲುವು ಸಾಧಿಸಿದೆ. ಇದರೊಂದಿಗೆ ತಂಡದ ಸೆಮಿಫೈನಲ್ ಆಸೆ ಜೀವಂತವುಳಿದಿದೆ. ಮಾ.1ರಂದು ಭಾರತ-ವೆಸ್ಟ್ ಇಂಡೀಸ್ ನಡುವೆ ಪಂದ್ಯ ನಡೆಯಲಿದೆ. ಇಲ್ಲಿ ಗೆದ್ದ ತಂಡ ಸೆಮಿಫೈನಲ್‌ಗೇರಲಿದೆ. ಹಾಗಾಗಿ ಭಾರತಕ್ಕೆ ಗೆಲುವು ಅನಿವಾರ್ಯವಾಗಿದೆ. ಒಂದು ವೇಳೆ ಮಾ.1ರ ಪಂದ್ಯ ರದ್ದಾದರೆ ಭಾರತದ ರನ್ ರೇಟ್ ಕಡಿಮೆಯಿರುವುದರಿಂದ ಸೆಮಿಫೈನಲ್ ಗೇರುವುದು ಕಷ್ಟವಾಗಲಿದೆ.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡ ಜಿಂಬಾಬ್ವೆ ಪೂರ್ಣವಾಗಿ ಎಡವಿತು. ಆ ತಂಡದ ಬೌಲರ್‌ಗಳನ್ನು ಎಡೆಬಿಡದೇ ಚಚ್ಚಿದ ಭಾರತ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 256 ರನ್ ಗಳಿಸಿತು. ಈ ಬೃಹತ್ ಮೊತ್ತವನ್ನು ಬೆನ್ನತ್ತಿದ ಜಿಂಬಾಬ್ವೆ ಪರ ಬ್ರಿಯಾನ್ ಬೆನೆಟ್ ಸಿಡಿದರೂ ಅದರಿಂದ ತಂಡಕ್ಕೆ ಉಪಯೋಗವಾಗಲಿಲ್ಲ. ಬೆನೆಟ್ 59 ಎಸೆತಗಳಲ್ಲಿ 8 ಬೌಂಡರಿ, 6 ಸಿಕ್ಸರ್‌ಗಳಿಂದ 97 ರನ್ ಸಿಡಿಸಿದರು. ನಾಯಕ ಸಿಕಂದರ್ ರಾಜಾ 31 ರನ್ ಗಳಿಸಿದರು.

ಭಾರತದ ಪರ ಉತ್ತಮವಾಗಿ ಇನಿಂಗ್ಸ್ ಆರಂಭಿಸಿದರೂ ಸಂಜು ಸ್ಯಾಮ್ಸನ್ (24) ದೊಡ್ಡ ಮೊತ್ತ ಗಳಿಸಲು ವಿಫಲವಾದರು. ಸ್ಫೋಟಕ ಬ್ಯಾಟಿಂಗ್ ನಡೆಸಿತು. ಲಯ ಕಳೆದುಕೊಂಡಿದ್ದ ಅಭಿಷೇಕ್ ಶರ್ಮಾ, ಹಾರ್ದಿಕ್ ಪಾಂಡ್ಯ, ತಿಲಕ್ ವರ್ಮಾ ಕೂಡ ಸಿಡಿದು ತಂಡದ ಮೊತ್ತವನ್ನು ಏರಿಸಿದರು. ಇತ್ತೀಚೆಗೆ ಸತತವಾಗಿ ವಿಫಲವಾಗಿದ್ದ ಅಭಿಷೇಕ್ ಶರ್ಮಾ 30 ಎಸೆತಗಳಲ್ಲಿ 55 ರನ್ ಸಿಡಿಸಿದರು. ಇದರಲ್ಲಿ ಸರಿಯಾಗಿ 4 ಬೌಂಡರಿ, 4 ಸಿಕ್ಸರ್‌ಗಳಿದ್ದವು. ಇಶಾನ್ ಕಿಶನ್ 38 ರನ್‌ಗೆ ಆಟ ಮುಗಿಸಿದರು.

ನಾಯಕ ಸೂರ್ಯಕುಮಾರ್ ಯಾದವ್ 33 ರನ್‌ಗಳಿಗೆ ಔಟಾದರು. ಹಾರ್ದಿಕ್ ಪಾಂಡ್ಯ ಅಬ್ಬರಿಸಿದರು. ಅವರು ಬರೀ 23 ಎಸೆತಗಳಲ್ಲಿ 50 ರನ್ ಗಳಿಸಿದರು. 2 ಬೌಂಡರಿ, 4 ಸಿಕ್ಸರ್‌ಗಳೊಂದಿಗೆ ಅವರು ಮೈದಾನದ ತುಂಬೆಲ್ಲ ಚೆಂಡನ್ನು ತಳ್ಳಾಡಿದರು. ಜಿಂಬಾಬ್ವೆ ಬೌಲರ್‌ಗಳು ಪೂರ್ಣ ತಬ್ಬಿಬ್ಬಾಗಿದ್ದರು. ಇನ್ನು ತಿಲಕ್ ವರ್ಮಾ ಬರೀ 16 ಎಸೆತಗಳಲ್ಲಿ 44 ರನ್ ಸಿಡಿಸಿದರು. ಈ ಆಟದಲ್ಲಿ 3 ಬೌಂಡರಿ, 4 ಸಿಕ್ಸರ್‌ಗಳಿದ್ದವು. ಜಿಂಬಾಬ್ವೆಯ ಯಾವ ಬೌಲರ್‌ಗಳೂ ಭಾರತದ ಆಸ್ಫೋಟವನ್ನು ತಡೆಯಲು ಸಾಧ್ಯವಾಗಲಿಲ್ಲ. ಸ್ಯಾಮ್ಸನ್-ಅಭಿಷೇಕ್ ಮೊದಲ ವಿಕೆಟ್‌ಗೆ 48 ರನ್ ಒಗ್ಗೂಡಿಸಿದರು. 2ನೇ ವಿಕೆಟ್‌ಗೆ ಇಶಾನ್-ಅಭಿಷೇಕ್ 72 ರನ್ ಸೇರಿಸಿದರು. 5ನೇ ವಿಕೆಟ್‌ಗೆ ಹಾರ್ದಿಕ್-ತಿಲಕ್ 84 ರನ್ ಕೂಡಿಸಿ ತಂಡದ ಮೊತ್ತವನ್ನು ಉಬ್ಬಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್, 256/4 (ಅಭಿಷೇಕ್ ಶರ್ಮಾ 55, ಹಾರ್ದಿಕ್ ಪಾಂಡ್ಯ 50, ತಿಲಕ್ ವರ್ಮಾ 44, ಇಶಾನ್ ಕಿಶನ್ 38, ಸೂರ್ಯಕುಮಾರ್ ಯಾದವ್ 33). ಜಿಂಬಾಬ್ವೆ 20 ಓವರ್, 184/6 (ಬ್ರಿಯಾನ್ ಬೆನೆಟ್ 97, ಸಿಕಂದರ್ ರಾಜಾ 31, ಅರ್ಷದೀಪ್ 24ಕ್ಕೆ 3).

ಮಾ.1ರಂದು ಭಾರತ ಗೆದ್ದರಷ್ಟೇ ಸೆಮೀಸ್‌ಗೆ

ಗುಂಪು-1ರಿಂದ ದ.ಆಫ್ರಿಕಾ ಈಗಾಗಲೇ ಸೆಮಿಫೈನಲ್‌ಗೇರಿದೆ. ಈ ಗುಂಪಿನಿಂದ ಇನ್ನೊಂದು ತಂಡ ನಿರ್ಧಾರವಾಗಬೇಕಿದೆ. ಮಾ.1ಕ್ಕೆ ಭಾರತ-ವೆಸ್ಟ್ ಇಂಡೀಸ್ ಪಂದ್ಯವಿದೆ. ಇಲ್ಲಿ ಭಾರತ ಗೆದ್ದರೆ ನಿಶ್ಚಿಂತೆಯಿಂದ ಸೆಮಿಫೈನಲ್‌ಗೇರಲಿದೆ. ಸೋತರೆ ವಿಂಡೀಸ್ ಸೆಮಿಫೈನಲ್‌ಗೇರಲಿದೆ. ಒಂದು ವೇಳೆ ಕೋಲ್ಕತಾದಲ್ಲಿ ನಡೆಯುವ ಪಂದ್ಯ ಮಳೆಯಿಂದ ರದ್ದಾದರೆ ಭಾರತ ಸಂಕಷ್ಟಕ್ಕೆ ಸಿಲುಕಲಿದೆ. ಸೂರ್ಯ ಪಡೆಯ ರನ್‌ರೇಟ್ ಕಡಿಮೆಯಿರುವುದರಿಂದ ವಿಂಡೀಸ್ ಉಪಾಂತ್ಯಕ್ಕೇರಲಿದೆ.

ಸ್ಯಾಮ್ಸನ್ ವೈಫಲ್ಯ: ಪರ-ವಿರೋಧ ಚರ್ಚೆ

ಸತತ ವೈಫಲ್ಯದ ಬಳಿಕವೂ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಮತ್ತೊಂದು ಅವಕಾಶ ಪಡೆದಿರುವ ಸಂಜು ಸ್ಯಾಮ್ಸನ್ ಅವರು ತಮಗೆ ಸಿಕ್ಕ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರಾ? ಈ ಬಗ್ಗೆ ಇದೀಗ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅವರು ಬರೀ 24 ರನ್‌ಗೆ ಆಲೌಟಾಗಿದ್ದನ್ನು ನೆಟ್ಟಿಗರು ಟೀಕಿಸಿದ್ದಾರೆ. ಆದರೆ ಭಾರತ ತಂಡದ ಮಾಜಿ ಆಲ್ರೌಂಡರ್ ಇರ್ಫಾನ್ ಪಠಾಣ್ ಅವರು ಮಾತ್ರ ಸಂಜು ಸ್ಯಾಮ್ಸನ್ ಪರವಾಗಿ ಬ್ಯಾಟಿಂಗ್ ಮಾಡಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಂಜು ಅವರು ತಮಗೆ ನೀಡಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಸೂಪರ್-8, ಗುಂಪು 1ರ ಪಂದ್ಯ: ಬಲಿಷ್ಠ ವೆಸ್ಟ್ ಇಂಡೀಸ್‌ಗೆ 9 ವಿಕೆಟ್‌ಗಳ ಸೋಲು ಹರಿಣ ಪಡೆ ಪರ ಸಿಡಿದ ನಾಯಕ ಮಾರ್ಕ್ರಮ್ ಅಜೇಯ 82, ಕಾಕ್ 47, ರ್‍ಯಾನ್ 45

ವಿಂಡೀಸನ್ನು ಮಣಿಸಿ ದ.ಆಫ್ರಿಕಾ ಸೆಮೀಸ್‌ಗೆ

ಅಹ್ಮದಾಬಾದ್: ನಾಯಕ ಏಡನ್ ಮಾರ್ಕ್ರಮ್ ಅವರ ಅಜೇಯ ಅರ್ಧಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ವೆಸ್ಟ್ ಇಂಡೀಸ್ ಅನ್ನು ಗುರುವಾರ 9 ವಿಕೆಟ್‌ಗಳಿಂದ ಸೋಲಿಸಿದೆ. ಇಲ್ಲಿ ನಡೆದ ಟಿ20 ವಿಶ್ವಕಪ್ ಸೂಪರ್-8 ಹಂತದ ಗುಂಪು-1ರ ಪಂದ್ಯದಲ್ಲಿ ಹರಿಣ ಪಡೆ ಅದ್ಭುತ ಆಟವಾಡಿತು. ಇಲ್ಲಿಗೆ ದ.ಆಫ್ರಿಕಾ ಸೆಮಿಫೈನಲ್‌ಗೇರಿದೆ. ಇನ್ನೊಂದು ಸ್ಥಾನಕ್ಕಾಗಿ ಈ ಗುಂಪಿನಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವೆ ಪೈಪೋಟಿಯಿದೆ.

ಅಹ್ಮದಾಬಾದ್‌ನ ನರೇಂದ್ರ ಮೋದಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 176 ರನ್ ಗಳಿಸಿತು. ಇದಕ್ಕುತ್ತರವಾಗಿ ದಕ್ಷಿಣ ಆಫ್ರಿಕಾ ತಂಡ 16.1 ಓವರ್‌ಗಳಲ್ಲಿ ಕೇವಲ 1 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮಾರ್ಕ್ರಮ್ 46 ಎಸೆತಗಳಲ್ಲಿ ಅಜೇಯ 82, 7 ಬೌಂಡರಿ, 4 ಸಿಕ್ಸರ್), ಕ್ವಿಂಟನ್ ಡಿ ಕಾಕ್ (24 ಎಸೆತಗಳಲ್ಲಿ 47), ರ್‍ಯಾನ್ ರಿಕಲ್ಟನ್ (28 ಎಸೆತಗಳಲ್ಲಿ ಅಜೇಯ 45) ವಿಂಡೀಸ್ ಬೌಲಿಂಗ್ ಪಾಳೆಯಕ್ಕೆ ಪಂದ್ಯದಲ್ಲಿ ಹಿಡಿತ ಸಾಧಿಸಲು ಅವಕಾಶವನ್ನೇ ನೀಡಲಿಲ್ಲ.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ವೆಸ್ಟ್ ಇಂಡೀಸ್ ತಂಡಕ್ಕೆ ದಕ್ಷಿಣ ಆಫ್ರಿಕಾದ ಬೌಲರ್‌ಗಳು ಬಹಳ ಕಾಟ ನೀಡಿದರು. ಅಗ್ರ ಕ್ರಮಾಂಕದ ಯಾವ ಆಟಗಾರರನ್ನೂ ಸಹ ನೆಲೆ ಕಂಡುಕೊಳ್ಳಲು ಬಿಡಲೇ ಇಲ್ಲ. ಹೀಗಾಗಿ 11ನೇ ಓವರ್‌ನಲ್ಲಿ 83 ರನ್ ಗಳಾಗಬೇಕಾದರೆ 7 ವಿಕೆಟ್‌ಗಳನ್ನು ಕಳೆದುಕೊಂಡ ವಿಂಡೀಸ್ ಅಕ್ಷರಶಃ ಸಂಕಷ್ಟದಲ್ಲಿ ಸಿಲುಕಿತ್ತು.

ಈ ಸಂದರ್ಭದಲ್ಲಿ ಅನುಭವಿ ಜೇಸನ್ ಹೋಲ್ಡರ್ (31 ಎಸೆತಗಳಲ್ಲಿ 49 ರನ್) ಮತ್ತು ರೊಮಾರಿಯೋ ಶೆಫರ್ಡ್ (37 ಎಸೆತಗಳಲ್ಲಿ ಅಜೇಯ 52 ರನ್) ಅವರು 8ನೇ ವಿಕೆಟ್‌ಗೆ 91 ರನ್ ಗಳ ಜೊತೆಯಾಟ ಆಡಿದರು. ಜೊತೆಗೆ ವೇಗವಾಗಿ ರನ್ ಸಹ ಗಳಿಸಿದರು. ಇದರಿಂದಾಗಿ ವಿಂಡೀಸ್ ಸ್ಪರ್ಧಾತ್ಮಕ ಮೊತ್ತ ಕಲೆ ಹಾಕುವಂತಾಯಿತು. ದಕ್ಷಿಣ ಆಫ್ರಿಕಾ ಪರ ಲುಂಗಿ ಎನ್‌ಗಿಡಿ 3 ವಿಕೆಟ್ ಕಬಳಿಸಿದರು. ಇನ್ನು ಕ್ಯಾಗಿಸೋ ರಬಾಡ ಮತ್ತು ಕಾರ್ಬಿನ್ ಬಾಷ್ ಅವರು ತಲಾ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 176/8 (ರೊಮಾರಿಯೋ ಶೆಫರ್ಡ್ ಅಜೇಯ 52, ಜೇಸನ್ ಹೋಲ್ಡರ್ 49, ಲುಂಗಿ ಎನ್‌ಗಿಡಿ 30ಕ್ಕೆ 3, ಕಾರ್ಬಿನ್ ಬಾಷ್ 31ಕ್ಕೆ 2). ದಕ್ಷಿಣ ಆಫ್ರಿಕಾ 16.1 ಓವರ್, (177/1, ಏಡನ್ ಮಾರ್ಕ್ರಮ್ ಅಜೇಯ 82, ಕ್ವಿಂಟನ್ ಡಿ ಕಾಕ್ 47, ರ್‍ಯಾನ್ ರಿಕಲ್ಟನ್ ಅಜೇಯ 45, ರೋಸ್ಟನ್ ಚೇಸ್ 46ಕ್ಕೆ 1).

ಜಮ್ಮುಕಾಶ್ಮೀರ 1ನೇ ಇನಿಂಗ್ಸ್ 584 | ರಾಜ್ಯ 1ನೇ ಇನಿಂಗ್ಸ್ 220/5, ಇನಿಂಗ್ಸ್ ಹಿನ್ನಡೆಯತ್ತ ಕರ್ನಾಟಕಕ್ಕೆ ಇನಿಂಗ್ಸ್ ಮುನ್ನಡೆ ಸಿಗದಿದ್ದರೆ, ಟ್ರೋಫಿ ಗೆಲ್ಲಲು ಪಂದ್ಯ ಗೆಲ್ಲುವುದು ಅನಿವಾರ್ಯ

ರಣಜಿ ಫೈನಲ್: ರಾಜ್ಯಕ್ಕೆ ಪ್ರಶಸ್ತಿ ತಪ್ಪುವ ಭೀತಿ

ಹುಬ್ಬಳ್ಳಿ: ಇಲ್ಲಿ ನಡೆಯುತ್ತಿರುವ ರಣಜಿ ಫೈನಲ್ ಪಂದ್ಯದಲ್ಲಿ ದುರ್ಬಲವೆಂದು ಭಾವಿಸಲಾಗಿದ್ದ ಜಮ್ಮುಕಾಶ್ಮೀರದ ವಿರುದ್ಧ ಕರ್ನಾಟಕ ಸೋಲಿನತ್ತ ಧಾವಿಸಿದೆ. 2014ರ ನಂತರ ಮತ್ತೊಮ್ಮೆ ಪ್ರಶಸ್ತಿ ಗೆಲ್ಲುವ ಸಾಧ್ಯತೆಯನ್ನು ಸದ್ಯದ ಮಟ್ಟಿಗೆ ದೂರ ಮಾಡಿಕೊಂಡಿದೆ. ಪಂದ್ಯದ 3ನೇ ದಿನವಾದ ಗುರುವಾರ ಜಮ್ಮುಕಾಶ್ಮೀರ 1ನೇ ಇನಿಂಗ್ಸ್‌ನಲ್ಲಿ 584 ರನ್‌ಗಳಿಸಿ ಆಲೌಟಾಯಿತು. 2ನೇ ಇನಿಂಗ್ಸ್ ಆರಂಭಿಸಿದ ಕರ್ನಾಟಕ ಪಟಪಟನೆ 5 ವಿಕೆಟ್ ಕಳೆದುಕೊಂಡು 220 ರನ್ ಗಳಿಸಿದೆ. ಪಂದ್ಯದಲ್ಲಿ ಜಮ್ಮುಕಾಶ್ಮೀರ ತಂಡ ಪ್ರಥಮ ಇನಿಂಗ್ಸ್ ಮುನ್ನಡೆ ಗಳಿಸಿದಲ್ಲಿ, ಪಂದ್ಯವನ್ನು ಡ್ರಾಗೊಳಿಸಿದರೂ ಸಾಕು ಟ್ರೋಫಿ ಗೆಲ್ಲಲಿದೆ. ಅದೇ ಕರ್ನಾಟಕಕ್ಕೆ ಪ್ರಥಮ ಇನಿಂಗ್ಸ್ ಮುನ್ನಡೆ ಪಡೆಯಲು ಸಾಧ್ಯವಾಗದೇ ಹೋದಲ್ಲಿ ಪಂದ್ಯವನ್ನು ಗೆಲ್ಲಲೇಬೇಕಿದೆ. ಇಲ್ಲವಾದಲ್ಲಿ ಪ್ರಶಸ್ತಿ ಕೈತಪ್ಪಲಿದೆ.

ಕರ್ನಾಟಕ ಪ್ರಥಮ ಇನಿಂಗ್ಸ್ ಹಿನ್ನಡೆಯಿಂದ ತಪ್ಪಿಸಿಕೊಳ್ಳಬೇಕಾದರೆ ಇನ್ನೂ 364 ರನ್ ಗಳಿಸಬೇಕಿದೆ. ಒಂದೆಡೆಯಿಂದ ವಿಕೆಟ್ ಬೀಳುತ್ತಿದ್ದರೂ ಮತ್ತೊಂದು ತುದಿಯಲ್ಲಿ ದೃಢವಾಗಿ ನಿಂತು ಅಜೇಯ ಶತಕ ಬಾರಿಸಿರುವ ಮಾಜಿ ನಾಯಕ ಮಾಯಾಂಕ್ ಅಗರ್ವಾಲ್ ಅವರೊಬ್ಬರೇ ಕರ್ನಾಟಕದ ಪಾಲಿನ ಏಕೈಕ ಆಶಾಕಿರಣವಾಗಿದ್ದಾರೆ.

ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡದ ಅನುಭವಿ ಬ್ಯಾಟರ್‌ಗಳು ಜಮ್ಮುಕಾಶ್ಮೀರದ ಶಿಸ್ತುಬದ್ಧ ಬೌಲಿಂಗ್ ದಾಳಿ ಮುಂದೆ ನಿರುತ್ತರರಾದರು. ಅನುಭವಿ ಕೆ.ಎಲ್.ರಾಹುಲ್ (13), ನಾಯಕ ದೇವದತ್ ಪಡಿಕ್ಕಲ್ (13), ಕರುಣ್ ನಾಯರ್ (0), ರವಿಚಂದ್ರನ್ ಸ್ಮರಣ್ (0) ಬೇಗನೇ ಪೆವಿಲಿಯನ್ ಸೇರಿಕೊಂಡರು.

ಮಾಯಾಂಕ್ ದಿಟ್ಟ ಹೋರಾಟ: ಈ ಹಂತದಲ್ಲಿ ಮಾಯಾಂಕ್ ಅಗರ್ವಾಲ್ ಅವರು ಸಹ ತಮ್ಮ ಶತಕವನ್ನು ಪೂರೈಸಿಕೊಂಡರು. ಇದೀಗ ವಿಕೆಟ್ ಕೀಪರ್ ಬ್ಯಾಟರ್ ಕೃತಿಕ್ ಕೃಷ್ಣ (27) ಅವರೊಂದಿಗೆ 6ನೇ ವಿಕೆಟ್ ಗೆ 58 ರನ್ ಜೊತೆಯಾಟ ಆಡಿರುವ ಅವರು ಶುಕ್ರವಾರಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ. 207 ಎಸೆತಗಳಿಂದ 17 ಬೌಂಡರಿಗಳಿದ್ದ 130 ರನ್ ಗಳಿಸಿದ್ದಾರೆ. ಕರ್ನಾಟಕದ ಪರ ಮಧ್ಯಮ ವೇಗಿ ಪ್ರಸಿದ್ಧ ಕೃಷ್ಣ ಅವರು 5 ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಜಮ್ಮುಕಾಶ್ಮೀರ 1ನೇ ಇನಿಂಗ್ಸ್ 584/10 (ಯವರ್ ಹಸನ್ 88, ಶುಭಂ ಪುಂಡಿರ್ 121, ಪರಸ್ ದೋಗ್ರಾ 70, ಪ್ರಸಿದ್ಧ ಕೃಷ್ಣ 98ಕ್ಕೆ 5). ಕರ್ನಾಟಕ 1ನೇ ಇನಿಂಗ್ಸ್ 220/5 (ಮಾಯಾಂಕ್ ಅಗರ್ವಾಲ್ ಅಜೇಯ 130, ಶ್ರೇಯಸ್ 27, ಕೃತಿಕ್ 27, ಅಖಿಬ್ ನಬಿ 32ಕ್ಕೆ 3, ಯದುವೀರ್ 31ಕ್ಕೆ 1)

ಒಂದ್ ಕಪ್ ಮಾತು

7ನೇ ವಿಕೆಟ್‌ಗೆ 84 ರನ್: ಮೆಕಾಂಚಿ, ಸ್ಯಾಂಟ್ನರ್ ದಾಖಲೆ

ಕೊಲಂಬೋ: ಟಿ20 ವಿಶ್ವಕಪ್‌ನ ಬುಧವಾರದ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡ ಶ್ರೀಲಂಕಾವನ್ನು 61 ರನ್‌ಗಳಿಂದ ಸೋಲಿಸಿತು. ಈ ಪಂದ್ಯದಲ್ಲಿ ಕಿವೀಸ್‌ನ ಕೋಲ್ ಮೆಕಾಂಚಿ ಮತ್ತು ಮಿಚೆಲ್ ಸ್ಯಾಂಟ್ನರ್ ವಿಶ್ವದಾಖಲೆ ನಿರ್ಮಿಸಿದ್ದಾರೆ. ಮೆಕಾಂಚಿ ಮತ್ತು ಸ್ಯಾಂಟ್ನರ್ ಅವರ 84 ರನ್‌ಗಳ ಪಾಲು ದಾರಿಕೆಯು ಟಿ20 ವಿಶ್ವಕಪ್ ಇತಿಹಾ ಸದಲ್ಲಿ ಏಳನೇ ವಿಕೆಟ್‌ಗೆ ದಾಖ ಲಾದ ಅತ್ಯಧಿಕ ಪಾಲುದಾರಿಕೆಯಾ ಗಿದೆ. ಇದಕ್ಕೂ ಮುನ್ನ ಈ ದಾಖಲೆ ಆಸ್ಟ್ರೇಲಿ ಯಾದ ಕ್ರಿಕೆಟ್ ದಂತಕಥೆಗ ಳಾದ ಮೈಕೆಲ್ ಹಸ್ಸಿ ಮತ್ತು ಸ್ಟೀವ್ ಸ್ಮಿತ್ ಜೋಡಿ ಹೆಸರಿನಲ್ಲಿತ್ತು. ಈ ಜೋಡಿ 2010 ರ ಪಂದ್ಯಾವಳಿಯಲ್ಲಿ 7ನೇ ವಿಕೆಟ್‌ಗೆ 74 ರನ್ ಕಲೆಹಾಕಿತ್ತು. ಇದೀಗ 16 ವರ್ಷಗಳ ಬಳಿಕ ಈ ದಾಖಲೆಯ ನ್ನು ನ್ಯೂಜಿಲೆಂಡ್ ಜೋಡಿ ಮುರಿದಿದೆ.

ಭಾರತ-ಜಿಂಬಾಬ್ವೆ ಪಂದ್ಯ ವೀಕ್ಷಣೆಗೆ ಉಚಿತ ಮೆಟ್ರೋ

ಚೆನ್ನೈ: ಗುರುವಾರ ನಡೆದ ನಡೆದ ಭಾರತ-ಜಿಂಬಾಬ್ವೆ ಟಿ20 ವಿಶ್ವಕಪ್ ಸೂಪರ್-8ರ ಹಂತದ ಪಂದ್ಯಕ್ಕೆ ಚೆನ್ನೈ ಮೆಟ್ರೋ ಉಚಿತ ಟಿಕೆಟ್‌ಗಳನ್ನು ಘೋಷಿಸಿತ್ತು. ಚೆನ್ನೈ ನಗರ ಸಾರಿಗೆ ಅಧಿ ಕಾರಿಗಳು ಪಂದ್ಯದ ದಿನದ ಸಂಚಾರವನ್ನು ನಿಯಂತ್ರಿಸಲು ಈ ಕ್ರಮವನ್ನು ತೆಗೆದುಕೊಂಡಿತ್ತು. ಚೆನ್ನೈ ಮೆಟ್ರೋ ರೈಲು ಲಿಮಿಟೆಡ್, ಪ್ರೇಕ್ಷಕರು ತಮ್ಮ ಪಂದ್ಯದ ಟಿಕೆಟ್ ಅನ್ನು ಬಳಸಿಕೊಂಡು ಉಚಿತವಾಗಿ ಪ್ರಯಾ ಣಿಸಲು ಅವಕಾಶ ನೀಡಿತ್ತು. ವಿಶಿಷ್ಟ ವಾದ ಕ್ಯೂಆರ್ ಕೋಡ್‌ಗಳೊಂದಿಗೆ ಎಂಬೆಡ್ ಮಾಡಲಾದ ಟಿಕೆಟ್‌ಗಳನ್ನು ಸ್ವಯಂಚಾಲಿತ ಶುಲ್ಕ ಸಂಗ್ರಹ ಗೇಟ್‌ಗಳಲ್ಲಿ ಸ್ಕ್ಯಾನ್ ಮಾಡಿ ಉಚಿತವಾಗಿ ಪ್ರಯಾಣಿಸಲು ವ್ಯವಸ್ಥೆ ಮಾಡಲಾಗಿತ್ತು. ಚೆನ್ನೈನಲ್ಲಿ ಇತ್ತೀಚೆಗೆ ಅಂತಾರಾಷ್ಟ್ರೀಯ ಪಂದ್ಯಗಳು ಕಡಿಮೆಯಾಗಿವೆ. ಆ ಮೈದಾನದಲ್ಲೇ ಹಲವು ದೋಷಗಳು, ಸರಕಾರದ ಮಾನದಂಡಗಳನ್ನು ಪಾಲಿಸದ ಸಮಸ್ಯೆಯಿಂದಾಗಿ ಹಲವು ವರ್ಷಗಳ ಕಾಲ ಅಲ್ಲಿ ಪಂದ್ಯಗಳನ್ನಾಡಿಸಲು ಸಾಧ್ಯವೇ ಆಗಿರಲಿಲ್ಲ.

ಟಿ20 ವಿಶ್ವಕಪ್‌ನಿಂದ ಹೊರಬಿದ್ದ ಬೆನ್ನಲ್ಲೇ ಬೇಸರಿಸಿದ ದಸುನ್

ಜನರ ಕ್ಷಮೆಯಾಚಿಸಿದ ಲಂಕಾ ನಾಯಕ ಶನಕ

ಕೊಲಂಬೋ: ಶ್ರೀಲಂಕಾ ತಂಡ ಟಿ20 ವಿಶ್ವಕಪ್‌ನಿಂದ ಹೊರಬಿದ್ದ ಬೆನ್ನಲ್ಲೇ ತಂಡದ ನಾಯಕ ದಸುನ್ ಶನಕ ಅಭಿಮಾನಿಗಳಲ್ಲಿ ಭಾವನಾತ್ಮಕವಾಗಿ ಕ್ಷಮೆಯಾಚಿಸಿದ್ದಾರೆ. ವೈಫಲ್ಯಗಳು, ಫಿಟ್ನೆಸ್ ಕಾಳಜಿಗಳು ಮತ್ತು ತಪ್ಪಿದ ಅವಕಾಶಗಳು, ನೋವಿನಿಂದ ಕೂಡಿದ ನಿರ್ಗಮನಕ್ಕೆ ಕಾರಣವೆಂದು ಒಪ್ಪಿಕೊಂಡರು.

ಸಹ-ಆತಿಥೇಯ ಶ್ರೀಲಂಕಾ ತಂಡವು ಇಂಗ್ಲೆಂಡ್ ವಿರುದ್ಧ 51 ರನ್‌ಗಳ ಸೋಲಿನಿಂದ ಬಳಲಿದ ಕೆಲವು ದಿನಗಳ ನಂತರ ನ್ಯೂಜಿಲೆಂಡ್ ವಿರುದ್ಧ 61 ರನ್‌ಗಳ ಹೀನಾಯ ಸೋಲಿನೊಂದಿಗೆ ಸೂಪರ್-8ರ ಹಂತದಲ್ಲಿ ಹೊರಬಿತ್ತು.

ಪಂದ್ಯದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾವನಾತ್ಮಕವಾಗಿ ಮಾತನಾಡಿದ ಶನಕ, ಸೋಲಿನಿಂದ ನಮಗೆ ತುಂಬಾ ವಿಷಾದವಿದೆ. ತವರಿನ ಅಭಿಮಾನಿಗಳಿಗೆ ನಾನು ಹೇಳಲು ಏನೂ ಇಲ್ಲ. ಅವರು ಸಂತೋಷಪಡಬಹುದಾದ ಯಾವುದೇ ಗೆಲುವನ್ನು ನಾವು ಅವರಿಗೆ ನೀಡಿಲ್ಲ, ಕ್ಷಮಿಸಿ ಎಂದರು. ಶ್ರೀಲಂಕಾ ತಂಡವು ನಿರ್ಣಾಯಕ ಕ್ಷಣಗಳನ್ನು, ವಿಶೇಷವಾಗಿ ಇಂಗ್ಲೆಂಡ್ ವಿರುದ್ಧದ ಪಂದ್ಯವನ್ನು ವ್ಯರ್ಥ ಮಾಡಿದೆ ಎಂದು ನಾಯಕ ಒಪ್ಪಿಕೊಂಡರು. ಇಂಗ್ಲೆಂಡ್ ಪಂದ್ಯವು ನಾವು ಗೆಲ್ಲಬಹುದಾಗಿದ್ದ ಪಂದ್ಯವಾಗಿತ್ತು. ನಾವು ಹೆಚ್ಚು ಬುದ್ಧಿವಂತರಾಗಿದ್ದರೆ, ನಾವು ಅದನ್ನು ಗೆಲ್ಲಬಹುದಿತ್ತು. ಆ ಪಂದ್ಯ ಏಕಪಕ್ಷೀಯ ಪಂದ್ಯವಾಗಿತ್ತು ಎಂದು ಅವರು ಹೇಳಿದರು. ದೇಶೀಯ ಕ್ರಿಕೆಟಿಗರನ್ನು ಗಮನದಲ್ಲಿಟ್ಟುಕೊಂಡೇ ತಂಡವನ್ನು, ತಂತ್ರಗಳನ್ನು ಸಿದ್ಧಪಡಿಸಲಾಗಿತ್ತು. ಆದರೆ ಪಿಚ್‌ಗಳು ನಿರೀಕ್ಷಿಸಿದಂತೆ ವರ್ತಿಸಲಿಲ್ಲ ಎಂದು ಹೇಳಿದರು. ಟೂರ್ನಮೆಂಟ್ ಆರಂಭವಾಗುವ ಮೊದಲು, ನಾನು ಉತ್ತಮ ವಿಕೆಟ್‌ಗಳನ್ನು ನಿರೀಕ್ಷಿಸಿದ್ದೇನೆ ಎಂದು ಹೇಳಿದ್ದೆ. ದುರದೃಷ್ಟವಶಾತ್, ಕೆಲವೊಮ್ಮೆ ನಾವು ಯೋಚಿಸದ ಸಣ್ಣ ಬದಲಾವಣೆಗಳಿಂದ ಪಂದ್ಯಗಳನ್ನು ಕಳೆದುಕೊಳ್ಳುತ್ತೇವೆ, ಈ ಬಗ್ಗೆ ನಮಗೆ ತುಂಬಾ ವಿಷಾದವಿದೆ ಎಂದರು.

ಸೂಪರ್-8 ಹಂತ: ಇಂದು ಇಂಗ್ಲೆಂಡ್-ನ್ಯೂಜಿಲೆಂಡ್ ಮಹತ್ವದ ಪಂದ್ಯ ಕಿವೀಸ್ ಸೋತರೂ ಸೆಮೀಸ್‌ಗೇರಲು ನಾಳೆ ಪಾಕ್‌ಗೆ ಭರ್ಜರಿ ಜಯ ಬೇಕು

ಇಂದು ಕಿವೀಸ್ ಗೆದ್ದರೆ ಪಾಕ್ ಔಟ್

ಕೊಲಂಬೋ: ಹಾಲಿ ಆವೃತ್ತಿಯ ಟಿ20 ವಿಶ್ವಕಪ್ ಟೂರ್ನಿ ಅಂತಿಮ ಹಂತಕ್ಕೆ ಬರುತ್ತಿದ್ದಂತೆ ಸೆಮಿಫೈನಲ್ ಲೆಕ್ಕಾಚಾರಗಳು ಚುರುಕುಗೊಂಡಿವೆ. ಬುಧವಾರ ರಾತ್ರಿ ಸೂಪರ್-8ರ ಹಂತದಲ್ಲಿ ನ್ಯೂಜಿಲೆಂಡ್ ವಿರುದ್ಧ 61 ರನ್‌ಗಳ ಹೀನಾಯ ಸೋಲು ಕಂಡ ಶ್ರೀಲಂಕಾ ಟೂರ್ನಿಯಿಂದ ಹೊರಬಿದ್ದಿದೆ. ಇದೀಗ ನ್ಯೂಜಿಲೆಂಡ್ ಮತ್ತು ಪಾಕಿಸ್ತಾನ ನಡುವೆ ಸೆಮಿಫೈನಲ್ ಪ್ರವೇಶದ ಪೈಪೋಟಿ ಏರ್ಪಟ್ಟಿದೆ. ಶುಕ್ರವಾರ ಇಲ್ಲಿನ ಆರ್.ಪ್ರೇಮದಾಸ ಮೈದಾನದಲ್ಲಿ ನ್ಯೂಜಿಲೆಂಡ್-ಇಂಗ್ಲೆಂಡ್ ಪಂದ್ಯ ನಡೆಯಲಿದೆ. ಇಲ್ಲಿ ನ್ಯೂಜಿಲೆಂಡ್ ಗೆದ್ದರೆ, ಅದು ಗುಂಪು-2ರಿಂದ 2ನೇ ತಂಡವಾಗಿ ಸೆಮಿಫೈನಲ್‌ಗೇರಲಿದೆ. ಪಾಕಿಸ್ತಾನ ಕೂಟದಿಂದ ಹೊರಬೀಳಲಿದೆ.

ನ್ಯೂಜಿಲೆಂಡ್ ಈಗ ಮೂರು ಅಂಕಗಳು ಮತ್ತು +3.050ರ ಉತ್ತಮ ರನ್ ರೇಟ್‌ನೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ. ಕಿವೀಸ್‌ಗೆ ಸೆಮಿಫೈನಲ್ ಅರ್ಹತೆ ಪಡೆಯಲು ಶುಕ್ರವಾರ ಕೊಲಂಬೋದಲ್ಲಿ ನಡೆಯುವ ತನ್ನ ಕೊನೆಯ ಸೂಪರ್ 8 ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಸೋಲಿಸಬೇಕಿದೆ. ಒಂದು ವೇಳೆ ಕಿವೀಸ್ ಸೋತರೆ, ಪಾಕಿಸ್ತಾನಕ್ಕೆ ಒಂದು ಆಯ್ಕೆಯುಳಿಯಲಿದೆ. ಇಂಗ್ಲೆಂಡ್‌ಗೆ ಶುಕ್ರವಾರ ಸೋತರೂ ಚಿಂತೆಯಿಲ್ಲ, ಅದು ಈಗಾಗಲೇ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ.





ಸ್ಥಳ: ಕೊಲಂಬೋ
ಪಂದ್ಯಾರಂಭ: ರಾ.7
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋಹಾಟ್‌ಸ್ಟಾರ್

ಪಾಕ್ ಲೆಕ್ಕಾಚಾರ: ಪಾಕಿಸ್ತಾನ ತಂಡದ ಸೆಮಿಫೈನಲ್ ಭವಿಷ್ಯ ಇಂಗ್ಲೆಂಡ್ ತಂಡದ ಮೇಲಿದೆ. ನ್ಯೂಜಿಲೆಂಡ್ ತಂಡ ಅಂತಿಮ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಗೆದ್ದರೆ ಪಾಕಿಸ್ತಾನ ಹೊರಬೀಳಲಿದೆ. ಇಂಗ್ಲೆಂಡ್ ತಂಡ ಗೆದ್ದರಷ್ಟೇ ಪಾಕ್‌ಗೆ ಒಂದು ಅವಕಾಶ ಸಿಗಲಿದೆ. ಇಲ್ಲೂ ಒಂದು ಲೆಕ್ಕಾಚಾರವಿದೆ. ಪಾಕ್ ಫೆ.28ರಂದು ನಡೆಯುವ ತನ್ನ ಕೊನೆಯ ಪಂದ್ಯದಲ್ಲಿ ಶ್ರೀಲಂಕಾವನ್ನು ದೊಡ್ಡ ಅಂತರದಲ್ಲಿ ಸೋಲಿಸಿ, ನೆಟ್ ರನ್ ರೇಟ್‌ನಲ್ಲಿ ಕಿವೀಸ್ ತಂಡವನ್ನು ಹಿಂದಿಕ್ಕಬೇಕು. ಆಗ ಮಾತ್ರ ಪಾಕ್ ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿದೆ. ನ್ಯೂಜಿಲೆಂಡ್ ತಂಡ ಇಂಗ್ಲೆಂಡ್ ವಿರುದ್ಧ 20 ರನ್ ಅಂತರದಿಂದ ಸೋತರೆ, ಪಾಕಿಸ್ತಾನ 50 ರನ್ ಅಂತರದಲ್ಲಿ ಗೆಲ್ಲಬೇಕು. ಆತಿಥೇಯ ಶ್ರೀಲಂಕಾಕ್ಕೆ ಉಳಿದಿರುವುದು ಲೆಕ್ಕಭರ್ತಿಯ ಪಂದ್ಯ ಮಾತ್ರ.

ಐಎಸ್ಸೆಲ್: ಬೆಂಗಳೂರು, ಪಂಜಾಬ್ ಪಂದ್ಯ ಇಂದು

ಬೆಂಗಳೂರು: ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಬೆಂಗಳೂರು ಎಫ್‌ಸಿ ಮತ್ತು ಪಂಜಾಬ್ ಎಫ್‌ಸಿ ತಂಡಗಳ ನಡುವೆ ಮಹತ್ವದ ಪಂದ್ಯ ನಡೆಯಲಿದೆ. ಪಂಜಾಬ್ ಎಫ್‌ಸಿ ತಂಡವು ತನ್ನ ನೆಲದಿಂದ ಹೊರಗೆ ಸತತ ಎರಡನೇ ಪಂದ್ಯವನ್ನು ಆಡಲಿಕ್ಕಾಗಿ ಬೆಂಗಳೂರಿಗೆ ಆಗಮಿಸಿದೆ. ಜಮ್ಶೆಡ್‌ಪುರ ಎಫ್‌ಸಿ ವಿರುದ್ಧದ 1-0 ಸೋಲಿನ ಬಳಿಕ ಚೇತರಿಸಿಕೊಳ್ಳುವ ಗುರಿ ಹೊಂದಿದೆ. ಮತ್ತೊಂದೆಡೆ, ಬೆಂಗಳೂರು ಎಫ್‌ಸಿ ಈ ಋತುವಿನ ತನ್ನ ಮೂರನೇ ಪಂದ್ಯಕ್ಕೆ ಸಜ್ಜಾಗಿದೆ. ನಾರ್ಥ್‌ಈಸ್ಟ್ ಯುನೈಟೆಡ್ ವಿರುದ್ಧದ ಪಂದ್ಯ 1-1 ಸಮಬಲದಲ್ಲಿ ಅಂತ್ಯಗೊಂಡ ನಂತರ, ಸುನೀಲ್ ಚೆಟ್ರಿ ಸಾರಥ್ಯದ ತಂಡವು ಗೆಲುವಿನ ಹಾದಿಗೆ ಮರಳಲು ಎದುರು ನೋಡುತ್ತಿದೆ. ಎರಡೂ ತಂಡಗಳು ಪೂರ್ಣ 3 ಅಂಕಗಳಿಗಾಗಿ ಹೋರಾಡಲಿರುವುದರಿಂದ ಮೈದಾನದಲ್ಲಿ ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ.

ಎರಡೂ ಕ್ಲಬ್‌ಗಳು ಹೊಸ ಆಟಗಾರರನ್ನು ಸೇರಿಸಿಕೊಂಡಿರುವುದು ಪಂದ್ಯದ ಕುತೂಹಲವನ್ನು ಹೆಚ್ಚಿಸಿದೆ. ಬೆಂಗಳೂರು ಎಫ್‌ಸಿ ತಂಡ ಮಧ್ಯಕ್ಷೇತ್ರ ವಿಭಾಗದಲ್ಲಿ ಬ್ರಾಯನ್ ಸಾಂಚೆಝ್ ಅವರ ಆಟ ಬಲ ತುಂಬಿದೆ. ವಿಂಗರ್ ಆಶಿಕ್ ಕುರುಣಿಯನ್ ಅವರ ವೇಗವು ಎದುರಾಳಿ ರಕ್ಷಣಾ ಪಡೆಯನ್ನು ಮಣಿಸಲು ಪ್ರಮುಖ ಅಸ್ತ್ರವಾಗಿದೆ. ಹಾಗೆಯೇ ಸಿರೋಜಿದ್ದಿನ್ ಕುಝಿಯೇವ್ ಅವರ ತಾಂತ್ರಿಕ ಕೌಶಲ್ಯವು ತಂಡಕ್ಕೆ ಹೊಸ ಚೈತನ್ಯ ನೀಡಲಿದೆ. ಪಂಜಾಬ್ ತಂಡವು ಮಿಡ್‌ಫೀಲ್ಡ್‌ನಲ್ಲಿ ಡ್ಯಾನಿ ರಾಮಿರೆಜ್‌ರನ್ನು ನಂಬಿಕೊಂಡಿದೆ. ಎಫಿಯಾಂಗ್ ನುಂಗುಸಿ ಇನ್ನೊಬ್ಬ ಪ್ರಮುಖ.

ಗಾಯದ ಕಾರಣ ನಾನು, ಸಕ್ಲೇನ್ ರಹಸ್ಯವಾಗಿ ಇಂಜೆಕ್ಷನ್ ತೆಗೆದುಕೊಳ್ಳುತ್ತಿದ್ದೆವು | ವಿವಾದಾತ್ಮಕ ಹೇಳಿಕೆ ನೀಡಿದ ಪಾಕಿಸ್ತಾನದ ಮಾಜಿ ವೇಗದ ಬೌಲರ್ ಶೋಯಬ್

ಸಚಿನ್ ವಿಕೆಟ್‌ಗಾಗಿ ಇಂಜೆಕ್ಷನ್ ಬಳಕೆ: ಅಖ್ತರ್!

ಕರಾಚಿ: ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ಪಂದ್ಯ ಎಂದ ಮೇಲೆ ಅಲ್ಲಿ ಜಿದ್ದಾಜಿದ್ದಿನ ಪೈಪೋಟಿ ಇದ್ದೇ ಇರುತ್ತದೆ. 90ರ ದಶಕದ ಪಂದ್ಯಗಳಂತೂ ವಿಶ್ವಶ್ರೇಷ್ಠ ಆಟಗಾರರ ಮುಖಾಮುಖಿಯಾಗಿರುತ್ತಿತ್ತು. ಬಹುತೇಕ ಇದು ಭಾರತದ ಪ್ರತಿಭಾವಂತ ಬ್ಯಾಟಿಂಗ್ ಮತ್ತು ಪಾಕಿಸ್ತಾನದ ಬಲಿಷ್ಠ ಬೌಲಿಂಗ್ ಪಡೆಗಳ ನಡುವಿನ ಹಣಾಹಣಿಯಾಗಿರುತ್ತಿತ್ತು ಎಂದರೂ ತಪ್ಪಲ್ಲ. ಈ ಕಾಳಗದಲ್ಲಿ ಎಲ್ಲರ ಗಮನ ಇರುತ್ತಿದ್ದುದು ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಕಡೆಗೆ. ಸಚಿನ್ ವಿಕೆಟ್ ಅನ್ನು ಯಾರು ಪಡೆಯುವುದು ಎಂದು ಪಾಕಿಸ್ತಾನದ ಬೌಲರ್‌ಗಳು ಪಣ ತೊಡುತ್ತಿದ್ದರಂತೆ. ಜೊತೆಗೆ ತಾನು ಮತ್ತು ಸ್ಪಿನ್ನರ್ ಸಕ್ಲೇನ್ ಮುಷ್ತಾಕ್ ಇಬ್ಬರೂ ಪಂದ್ಯವನ್ನು ಆಡುವ ಸಲುವಾಗಿ ರಹಸ್ಯವಾಗಿ ಮಾತ್ರೆ ಮತ್ತು ಇಂಜೆಕ್ಷನ್‌ಗಳನ್ನು ತೆಗೆದುಕೊಳ್ಳುತ್ತಿದ್ದೆವು ಎಂದು ವಿವಾದಾತ್ಮಕ ಹೇಳಿಕೆಯನ್ನು ನೀಡಿದ್ದಾರೆ.

90ರ ದಶಕದಲ್ಲಿ ಭಾರತದ ಬ್ಯಾಟಿಂಗ್ ವಿಭಾಗ ಬಹಳ ಬಲಿಷ್ಠವಾಗಿತ್ತು. ಸರ್ವಶ್ರೇಷ್ಠ ತೆಂಡೂಲ್ಕರ್, ಸ್ಫೋಟಕ ಹೊಡೆತಗಾರ ವೀರೇಂದ್ರ ಸೆಹ್ವಾಗ್, ಎಡಗೈ ಮಾಂತ್ರಿಕ ಸೌರವ್ ಗಂಗೂಲಿ, ಬಲಗೈ ಮಾಂತ್ರಿಕ ರಾಹುಲ್ ದ್ರಾವಿಡ್, ವಿವಿಎಸ್ ಲಕ್ಷ್ಮಣ್, ಮೊಹಮ್ಮದ್ ಕೈಫ್, ಯುವರಾಜ್ ಸಿಂಗ್ ಹೀಗೆ ಘಟಾನುಘಟಿಗಳು ಮತ್ತು ಯುವ ಪ್ರತಿಭಾವಂತರಿಂದ ಕೂಡಿದ್ದ ಬ್ಯಾಟಿಂಗ್ ಲೈನ್ ಅಪ್ ಭಾರತದ್ದು. ಅತ್ತ ಪಾಕಿಸ್ತಾನ ತಂಡದ ಬೌಲರ್‌ಗಳ ಪಟ್ಟಿಯಲ್ಲಿ ವಾಸೀಂ ಅಕ್ರಮ್, ವಖಾರ್ ಯೂನಸ್, ಶೊಯಬ್ ಅಖ್ತರ್, ಸಕ್ಲೇನ್ ಮುಷ್ತಾಕ್ ಹೀಗೆ ಒಬ್ಬರಿಗಿಂತ ಒಬ್ಬರು ಮಿಗಿಲಾದ ಬೌಲರ್‌ಗಳು. ಹೀಗಾಗಿ ಇತ್ತಂಡಗಳು ಮುಖಾಮುಖಿಯಾದಾಗಲೆಲ್ಲಾ ಶ್ರೇಷ್ಠ ಪ್ರದರ್ಶನವೇ ಹೊರಬಿದ್ದಿದೆ. ಮೈದಾನದಲ್ಲಿ ಎಂಥಹದ್ದೇ ವೈರತ್ವ ಇದ್ದರೂ ಮೈದಾನದ ಹೊರಗಡೆ ಎಲ್ಲರೂ ಉತ್ತಮ ಸ್ನೇಹ ಹೊಂದಿದ್ದಾರೆ. ಆದರೆ ಇದೀಗ ಅಖ್ತರ್ ಅವರು ಟಿವಿ ಲೈವ್ ಶೋನಲ್ಲಿ ಮಾತ್ರೆ ಮತ್ತು ಇಂಜೆಕ್ಷನ್ ತೆಗೆದುಕೊಂಡಿದ್ದಾಗಿ ನೀಡಿರುವ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ.

2012ರ ಬಳಿಕ ದ್ವಿಪಕ್ಷೀಯ ಸರಣಿಯಿಲ್ಲ: 90ರ ದಶಕದಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ದ್ವಿಪಕ್ಷೀಯ ಸರಣಿಗಳು ನಡೆಯುತ್ತಿದ್ದವು. ಆದರೆ ಪಾಕಿಸ್ತಾನದ ಉಗ್ರವಾದದಿಂದಾಗಿ 2012ರ ಬಳಿಕ ಆ ತಂಡದೊಂದಿಗೆ ಭಾರತ ದ್ವಿಪಕ್ಷೀಯ ಕ್ರಿಕೆಟ್ ಸರಣಿಗಳನ್ನು ಆಡಿಲ್ಲ. ಇದೀಗ ಐಸಿಸಿ ಮತ್ತು ಎಸಿಸಿ ಕೂಟಗಳಲ್ಲಿ ಮಾತ್ರ ಆಡುತ್ತಿವೆ. ಅದರಲ್ಲೂ ಭಾರತ ಅಥವಾ ಪಾಕಿಸ್ತಾನದ ನೆಲದಲ್ಲಿ ಪಂದ್ಯ ನಡೆಯುತ್ತಿಲ್ಲ. ಇದನ್ನು ತಟಸ್ಥ ತಾಣದಲ್ಲಿ ಆಡಿಸಲಾಗುತ್ತಿದೆ. ಹೀಗಾಗಿಯೇ ಕಳೆದ ವರ್ಷ ಪಾಕಿಸ್ತಾನ ಆಯೋಜಿಸಿದ ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಪಂದ್ಯಗಳನ್ನು ಭಾರತ ತಂಡ ದುಬೈನಲ್ಲಿ ಆಡಿತ್ತು. ಅದೇ ರೀತಿ ಇದೀಗ ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸುತ್ತಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತನ್ನೆಲ್ಲಾ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಡುತ್ತಿದೆ.

ಔಷಧ ಯಾವುದು ತಿಳಿಸಿ: ನೆಟ್ಟಿಗರ ಆಗ್ರಹ

ಸಕ್ಲೇನ್ ಮುಷ್ತಾಕ್ ಅವರು ಚೆನ್ನೈ ಮತ್ತು ದೆಹಲಿಯಲ್ಲಿ 10ಕ್ಕೂ ಹೆಚ್ಚು ವಿಕೆಟ್‌ಗಳನ್ನು ಪಡೆದಾಗ- ಅವರು ಮತ್ತು ನಾನು ಸಚಿನ್ ತೆಂಡೂಲ್ಕರ್ ಅವರ ವಿಕೆಟ್ ತೆಗೆಯುವ ಬಗ್ಗೆ ಪಣತೊಟ್ಟಿದ್ದೆವು. ಸಚಿನ್ ಅವರನ್ನು ಔಟ್ ಮಾಡುವುದಾಗಿ ಅವರು ಹೇಳಿದರು. ಈ ಬಾರಿ ಆ ಕೆಲಸ ನಾನು ಮಾಡುತ್ತೇನೆ, ಇದು ನನ್ನ ಸರದಿ ಎಂದು ನಾನು ಹೇಳಿದೆ ಎಂದು ಅಖ್ತರ್ ಹೇಳಿದರು. ಅವರು ಮುಂದುವರಿದು ಗಾಯದ ಸಮಸ್ಯೆ ಬಗ್ಗೆ ಮಾತನಾಡಿದರು. ಆ ಸಂದರ್ಭದಲ್ಲಿ ನನ್ನ ಮೊಣಕಾಲಿನಲ್ಲಿ ದ್ರವ ತುಂಬಿಕೊಂಡು ಊತ ಕಂಡುಬಂದಿತ್ತು. 1996ರಲ್ಲಿ ಸಕ್ಲೇನ್ ಅವರ ಮೊಣಕಾಲುಗಳಲ್ಲಿ ಊತವಿತ್ತು. 1997ರಲ್ಲಿ ನನ್ನ ಕಾಲುಗಳು ಬಾತಿದ್ದವು. ಈಗ ಪಂದ್ಯವನ್ನು ಆಡಲು ಸಾಧ್ಯವಾಗುವಂತೆ ನಾವಿಬ್ಬರೂ ರಹಸ್ಯವಾಗಿ ಮಾತ್ರೆಗಳು ಮತ್ತು ಇಂಜೆಕ್ಷನ್‌ಗಳನ್ನು ತೆಗೆದುಕೊಳ್ಳುತ್ತಿದ್ದೆವು. ತಂಡದ ಮ್ಯಾನೇಜ್‌ಮೆಂಟ್‌ನಲ್ಲಿರುವ ಯಾವುದೇ ಹಿರಿಯ ವ್ಯಕ್ತಿಯ ಗಮನಕ್ಕೆ ಇದು ಬಂದಿದ್ದರೆ, ಅವರು ಸಕ್ಲೇನ್‌ರನ್ನು ತಂಡದಿಂದ ಹೊರಗಿಡುತ್ತಿದ್ದರು. ನಾನು ಹೇಗಾದರೂ ಅವರ ಗುರಿಯಾಗಿದ್ದೆ' ಎಂದು ಹೇಳಿದ್ದಾರೆ. ಅವರು ಈ ಹೇಳಿಕೆಯ ಕ್ಲಿಪ್ಪಿಂಗ್ ಇದೀಗ ವೈರಲ್ ಆಗುತ್ತಿದ್ದು ಅಖ್ತರ್ ಅವರು ರಹಸ್ಯವಾಗಿ ತೆಗೆದುಕೊಳ್ಳುತ್ತಿದ್ದ ಮಾತ್ರೆ ಮತ್ತು ಇಂಜೆಕ್ಷನ್ ಯಾವುದು ಎಂದು ಪ್ರಶ್ನಿಸಿದ್ದಾರೆ. ನಿಷೇಧಿತ ಅಲ್ಲವಾಗಿದ್ದರೆ ರಹಸ್ಯವಾಗಿ, ಕಣ್ತಪ್ಪಿಸಿ ತೆಗೆದುಕೊಳ್ಳುವ ಅಗತ್ಯವೇನು? ಅದೇನು ಮಾದಕ ದ್ರವ್ಯವೇ ಎಂಬಿತ್ಯಾದಿ ಪ್ರಶ್ನೆಗಳು ಉದ್ಭವಿಸಿವೆ. ಇದು ಪಾಕಿಸ್ತಾನ ಕ್ರಿಕೆಟ್ ವಲಯದಲ್ಲಿ ತೀವ್ರ ಮುಜುಗರಕ್ಕೂ ಕಾರಣವಾಗಿದೆ.


ಸಾಮಾಜಿಕ ಕಳಕಳಿಯಿಂದ ಸತತ 50 ವಸಂತಗಳ
ಸುದೀರ್ಘ ಹೋರಾಟದಲ್ಲಿ ನಾಡಿನ ಸಮಸ್ತ ಜನತೆಯ
ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ನಮ್ಮೆಲ್ಲ ನೆಚ್ಚಿನ
ರೈತ ನಾಯಕರು ಹಾಗೂ ಅಭಿವೃದ್ಧಿಯ ಹರಿಕಾರರಾದ
ಸನ್ಮಾನ್ಯ ಶ್ರೀ ಯಡಿಯೂರಪ್ಪನವರ
ಕೊಡುಗೆ ಅಪಾರ-ಅಗಾಧ. ಅವರ ಈ ಅವಿರತ ಪರಿಶ್ರಮ
ಹಾಗೂ ಹೋರಾಟ ದಕ್ಷಿಣ ಭಾರತದಲ್ಲಿ ಭಾರತೀಯ
ಜನತಾ ಪಕ್ಷ ಚುಕ್ಕಾಣಿ ಹಿಡಿಯುವತ್ತ ಯಶಸ್ವಿಯಾಗಿದೆ.
ಇಂತಹ ಧೀಮಂತ
ನಾಯಕರ ಸಾಧನೆಗೆ
ನಮ್ಮ ಅಭಿನಂದನೆಗಳು
ಹಾಗೂ ಹುಟ್ಟುಹಬ್ಬದ
ಶುಭಾಶಯಗಳು.
ಶ್ರೀ ಎಸ್. ರುದ್ರೇಗೌಡ
ವಿಧಾನ ಪರಿಷತ್ ಮಾಜಿ ಶಾಸಕರು
ಹಾಗೂ
ಛೇರ್ಮನ್,
ಶಾಂತಲಾ ಸಮೂಹ ಸಂಸ್ಥೆಗಳು,
ಮಾಚೇನಹಳ್ಳಿ, ಶಿವಮೊಗ್ಗ.

ವಕೀಲರ ಸ್ಮರಿಸುವ ಹೊಸ ಹಾಡು

ನ್ಯಾಯಾಂಗ ವ್ಯವಸ್ಥೆಯ ಬೆನ್ನೆಲುಬಾಗಿ ನಿಂತು, ಸತ್ಯ ಮತ್ತು ನ್ಯಾಯಕ್ಕಾಗಿ ಹಗಲಿರುಳು ಶ್ರಮಿಸುವ ವಕೀಲರ ವೃತ್ತಿ ಬದುಕನ್ನು ಆಧರಿಸಿದ ಆಲ್ಬಂ ಗೀತೆ ಬಿಡುಗಡೆಯಾಗಿದೆ. ನ್ಯಾಯ ಅನ್ಯಾಯ.. ಎಂಬ ಗೀತೆ

ಇದಾಗಿದ್ದು, ಭಾರತೀಯ ಸಂಗೀತ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಸಂಪೂರ್ಣವಾಗಿ ವಕೀಲರ ವೃತ್ತಿಗೆ ಅರ್ಪಿತವಾದ ಗೀತೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ವಕೀಲರು ತನ್ನ ಮೇಲೆ ನಂಬಿಕೆ ಇಟ್ಟ ಕಕ್ಷಿದಾರರ ಪಾಲಿನ ಆಶಾಕಿರಣ. ಕೋರ್ಟ್ ಹಾಲ್‌ನಲ್ಲಿ, ಕಡತಗಳ ಮಧ್ಯೆ ತನ್ನ ವೈಯಕ್ತಿಕ ಬದುಕನ್ನು ಮರೆತು, ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಕೊಡಿಸಲು ಅಹೋರಾತ್ರಿ ಹೋರಾಡುತ್ತಾರೆ. ವಕೀಲರ ಈ ನಿಸ್ವಾರ್ಥ ಸೇವೆ, ಧೈರ್ಯ ಮತ್ತು ತ್ಯಾಗವನ್ನು ಈ ಹಾಡಿನ ಮೂಲಕ ಸಮಾಜಕ್ಕೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

ವಕೀಲರಾದ ಜಿ.ನಾರಾಯಣಸ್ವಾಮಿ ಈ ವಿಶಿಷ್ಟ ಪರಿಕಲ್ಪನೆಯನ್ನು ಜನರ ಮುಂದಿಡುತ್ತಿದ್ದಾರೆ. ವೃತ್ತಿ ಬಾಂಧವರ ಮೇಲಿರುವ ಗೌರವದಿಂದ ಅವರು ಈ ಸಾಹಸಕ್ಕೆ ಮುಂದಾಗಿದ್ದು, ಹಾಡಿನಲ್ಲಿಯೂ ಕಾಣಿಸಿಕೊಂಡಿದ್ದಾರೆ. ಕರಿಬಸವ ತಡಕಲ್ ಈ ಹಾಡಿಗೆ ಸಾಹಿತ್ಯ ಬರೆದಿದ್ದು ಹಾಡಿಗೂ ದನಿಯಾಗಿದ್ದಾರೆ. ಸಂಗೀತ ಸಂಯೋಜಕಿ ಮಾನಸಾ ಹೊಳ್ಳ ಸಂಗೀತದ ಮೂಲಕ ಈ ಹಾಡಿಗೆ ಶಕ್ತಿ ತುಂಬಿದ್ದಾರೆ. ನಿರ್ದೇಶಕ ಜೀವನ್ ಹಳ್ಳಿಕಾರ್ ನಿರ್ದೇಶನದಲ್ಲಿ ನ್ಯಾಯ ಅನ್ಯಾಯ ಹಾಡು ಅರ್ಥಪೂರ್ಣವಾಗಿ ಮೂಡಿಬಂದಿದೆ. ನ್ಯಾಯ, ನೀತಿ ಮತ್ತು ಕಾನೂನಿನ ಮಹತ್ವವನ್ನು ಈ ಗೀತೆಯಲ್ಲಿ ಸಾರುವ ಪ್ರಯತ್ನ ಮಾಡಲಾಗಿದ್ದು, ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವಲ್ಲಿ ವಕೀಲರ ಪಾತ್ರವನ್ನು ಈ ಗೀತೆ ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡಲಿದೆ.

ವಕೀಲರ ವೃತ್ತಿ ಜೀವನವು ಒತ್ತಡ ಮತ್ತು ಸವಾಲುಗಳಿಂದ ಕೂಡಿದ್ದರೂ, ನ್ಯಾಯ ಸಿಕ್ಕಾಗ ಆಗುವ ಸಂತೋಷ ಬಹು ದೊಡ್ಡದು. ಪ್ರತಿಯೊಬ್ಬರಿಗೂ ಸ್ಫೂರ್ತಿ ನೀಡಲು ಮತ್ತು ಸಾರ್ವಜನಿಕರಲ್ಲಿ ವಕೀಲರ ಬಗ್ಗೆ ಗೌರವ ಹೆಚ್ಚಿಸಲು ಈ ನ್ಯಾಯ ಅನ್ಯಾಯ ಆಲ್ಬಂ ಸಾಂಗ್ ಅನ್ನು ನಿರ್ಮಾಣ ಮಾಡಲಾಗಿದೆ ಎನ್ನುತ್ತಾರೆ ನಾರಾಯಣಸ್ವಾಮಿ.

ಹಾಡಿನಲ್ಲಿ ರಾಯರ ದರ್ಶನ

ಲಕ್ಷ್ಮೀ ಗಣೇಶ ಪ್ರೊಡಕ್ಷನ್‌ನಲ್ಲಿ ಮಂತ್ರಾಲಯದ ಗುರು ರಾಘವೇಂದ್ರ ಸ್ವಾಮಿಗಳ ಆಲ್ಬಂ ಸಾಂಗ್ ಸಿದ್ಧವಾಗಿದೆ. ರಾಯರ ದರ್ಶನ ಶೀರ್ಷಿಕೆಯಲ್ಲಿ ಸಿದ್ಧವಾಗಿರುವ ಈಆಲ್ಬಂ ಸಾಂಗ್‌ನ ಟೀಸರ್ ಬಿಡುಗಡೆ ಮಾಡಲಾಯಿತು. ರಾಯರ ವರ್ಧಂತಿಯಂದೇ ತೀರ್ಥರು ಹಾಗೂ ಪೋಸ್ಟರ್ ರಿಲೀಸ್ ಮಾಡಿರುವುದು ವಿಶೇಷ. ಮಂತ್ರಾಲಯದ ಯತಿಗಳಾದ ಸುಬದೇಂದ್ರ ತಿರ್ಥರು ಟೀಸರ್ ಹಾಗೂ ಪೋಸ್ಟರ್ ರಿಲೀಸ್ ಮಾಡಿದರು. ಈ ಸಂದರ್ಭದಲ್ಲಿ ನವರಸ ನಾಯಕ ಜಗ್ಗೇಶ್, ರಿಷಭ್ ಶೆಟ್ಟಿ, ಲಕ್ಷ್ಮೀ ಗಣೇಶ , ಸುಗುಣಾ ರಘು, ಮತ್ತಿತರರು ಹಾಜರಿದ್ದರು. ಒಂದು ಚಿತ್ರವನ್ನ ನೋಡಿ ಚೆನ್ನಾಗಿಲ್ಲ ಎನ್ನುವುದು ಸುಲಭ. ಆದರೆ ಅದರ ಹಿಂದೆ ಸಾಕಷ್ಟು ಶ್ರಮವಿರುತ್ತದೆ. ಅದೇ ರೀತಿ ಶ್ರಮವಹಿಸಿ ಆಲ್ಬಂ ಸಾಂಗ್ ಮಾಡುತ್ತಿದ್ದಾರೆ. ಹಾಡು ಯಶಸ್ವಿಯಾಗಲಿ ಎಂದು ಒಳ್ಳೆಯದಾಗಲಿ ಆದಷ್ಟು ಬೇಗ ಸಾಂಗ್ ರಿಲೀಸ್ ಆಗಲಿ ಎಂದು ತೀರ್ಥರು ಆಶೀರ್ವದಿಸಿದರು ಆಶೀರ್ವದಿಸಿದರು. ರಘು ಭಟ್ ನಿರ್ದೇಶನದ ಈ ಗೀತೆಗೆ ನಾಗಾರ್ಜುನ ಶರ್ಮ ಸಾಹಿತ್ಯ ರಚಿಸಿದ್ದು, ಸಿ.ಆರ್.ಬಾಬಿ ಹಾಗೂ ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ.

ಅಶೋಕನ ಸಂಚಾರ ಆರಂಭ

ವಿ ಟಾಕೀಸ್

ನಟ ನೀನಾಸಂ ಸತ್ತಿಶ್ ಎಂತಹ ಪಾತ್ರ ನೀಡಿದರೂ ನಿಭಾಯಿಸಬಲ್ಲರು. ಅವರ ಸಿನಿ ಕೆರಿಯರ್‌ನಲ್ಲಿ ಗೆಲುವು-ಸೋಲು ಎಲ್ಲವನ್ನೂ ಕಂಡಿದ್ದಾರೆ. ಸತ್ತಿಶ್ ಒಂದಷ್ಟು ಗ್ಯಾಪ್ ಬಳಿಕ ಮತ್ತೆ ಹೊಸ ಅವತಾರದಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ದಿ ರೈಸ್ ಆಫ್ ಅಶೋಕ ಸಿನಿಮಾದ ಮೂಲಕ ರೆಟ್ರೋ ಲುಕ್‌ನಲ್ಲಿ ತೆರೆಗೆ ಬರಲಿದ್ದಾರೆ. ತಮ್ಮ ಸಿನಿಮಾದ ಕುರಿತಂತೆ ನೀನಾಸಂ ಸತೀಶ್ ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ದಿ ರೈಸ್ ಆಫ್ ಅಶೋಕನ ಬಗ್ಗೆ ನಿರೀಕ್ಷೆ ಹೇಗಿದೆ?

ನೀನಾಸಂ ಸತಿಶ್ : ದಿ ರೈಸ್ ಆಫ್ ಅಶೋಕ ಮೇಲೆ ಸಾಕಷ್ಟು ನಂಬಿಕೆಯಿದೆ. ಹಾಗಿಯೇ ಎಲ್ಲವನ್ನೂ ಈ ಸಿನಿಮಾಕ್ಕಾಗಿಯೇ ಹಾಕಿದ್ದೀನಿ. ಅಶೋಕನಿಗಾಗಿಯೇ ಸಾಕಷ್ಟು ಸಿನಿಮಾಗಳನ್ನು ಕೈಬಿಟ್ಟಿದ್ದೀನಿ. ಯಾಕೆಂದರೆ ತೆರೆಯ ಹಿಂದಿನ ಕೆಲಸಕ್ಕೆ ಸಾಕಷ್ಟು ಸಮಯ ಕೊಡಬೇಕಿತ್ತು. ಚಿತ್ರಕಥೆ ಸೇರಿದಂತೆ ಸಿನಿಮಾದ ಬರವಣಿಗೆ ಹಾಗೂ ತಾಂತ್ರಿಕ ಕೆಲಸಗಳಲ್ಲಿಯೂ ತೊಡಗಿಸಿಕೊಳ್ಳಬೇಕಿತ್ತು. ಹೀಗಾಗಿ ಸಾಕಷ್ಟು ಪ್ರಾಜೆಕ್ಟ್ ಒಪ್ಪಿಕೊಳ್ಳಲು ಸಾಧ್ಯವಾಗಲಿಲ್ಲ. ನಿಜವಾಗಿಯೂ ಅಶೋಕ ಚಂದನವನದ ಚಂದದ ಚಿತ್ರಗಳಲ್ಲಿ ಒಂದಾಗಲಿದೆ. ಈ ಚಿತ್ರ ಕನ್ನಡದ ಜತೆಗೆ ತಮಿಳು-ತೆಲುಗಿನಲ್ಲಿಯೂ ತೆರೆಗೆ ಬರಲಿದೆ.

ಅಶೋಕ ರೆಟ್ರೋ ಲುಕ್ ನಲ್ಲಿ ಸಾಗುವ ಸ್ಟೋರಿಯೆ?

ಸತೀಶ್: ದಿ ರೈಸ್ ಆಫ್ ಅಶೋಕ ಎಪ್ಪತ್ತರ ಕಾಲಘಟ್ಟದಲ್ಲಿ ನಡೆಯುವ ಕಥೆಯನ್ನು ಒಳಗೊಂಡಿದೆ. ಕ್ರಾಂತಿಕಾರಿ ಯುವಕನ ಹೋರಾಟ, ಬದುಕು, ಸಂಘರ್ಷ ಈ ಚಿತ್ರದಲ್ಲಿದೆ. ಈ ಸಿನಿಮಾದಲ್ಲಿ ನಾನು ಕ್ರಾಂತಿಕಾರಿ ಯುವಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನ್ನನ್ನು ಈ ಹಿಂದಿನ ಸಿನಿಮಾಗಳಿಗಿಂತ ಹೊಸ ಲುಕ್‌ನಲ್ಲಿ ನೋಡಬಹುದು. ನಟನೆಯ ಜತೆಗೆ ಸಾಹಿತ್ಯ, ಗಾಯನ ಹಾಗೂ ನಿರ್ಮಾಣದಲ್ಲಿಯೂ ಕೈಜೋಡಿದ್ದೇನೆ. ಬಿ.ಸುರೇಶ್, ಸಂಪತ್ ಮೈತ್ರೇಯ, ಗೋಪಾಲಕೃಷ್ಣ ದೇಶಪಾಂಡೆ ಹಾಗೂ ಯಶ್ ಶೆಟ್ಟಿ ಸೇರಿದಂತೆ ಹಲವರು ಚಿತ್ರದಲ್ಲಿ ಅದ್ಭುತವಾಗಿ ಅಭಿನಯಿಸಿದ್ದಾರೆ.

ಪರಭಾಷೆಯಲ್ಲಿಯೂ ಅಶೋಕ ಅಬ್ಬರಿಸಲಿದ್ದಾನಾ?

ಸತೀಶ್ : ಕೆಜಿಎಫ್, ಕಾಂತಾರ ಸಿನಿಮಾಗಳ ಬಳಿಕ ಅಶೋಕ ಪರಭಾಷೆಯಲ್ಲಿ ದೊಡ್ಡ ಮಟ್ಟಕ್ಕೆ ಬಿಡುಗಡೆಯಾಗುತ್ತಿದೆ. ಈಗಾಗಲೇ ಸಿನಿಮಾ ನೋಡಿ ಮೆಚ್ಚಿಕೊಂಡಿರುವ ತೆಲುಗಿನ ಕಲಾಸೃಷ್ಟಿ ಸಂಸ್ಥೆ ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿ ವಿತರಣೆ ಹಕ್ಕು ಪಡೆದುಕೊಂಡಿದ್ದಾರೆ. ಇನ್ನು ತಮಿಳಿನಲ್ಲಿ ಕರುಮಾರಿ ಸಿನಿಮಾಸ್ ಸಂಸ್ಥೆ ತಮಿಳುನಾಡಿನಾದ್ಯಂತ ವಿತರಿಸಲು ಮುಂದಾಗಿದೆ. ಇಬ್ಬರೂ ಒಂದೊಳ್ಳೆ ಮೊತ್ತ ಕೊಟ್ಟು ಖರೀದಿಸಿದ್ದಾರೆ. ಅಲ್ಲಿಯೂ ಅಶೋಕನ ಹವಾ ಜೋರಾಗಿಯೇ ಇದೆ. ಸೆನ್ಸಾರ್ ಮಂಡಳಿ ಅಶೋಕನನ್ನು ನೋಡಿ ಮೆಚ್ಚಿಕೊಂಡಾಡಿದೆ.

ಅಶೋಕನಿಗೆ ಸಾಕಷ್ಟ ವಿಘ್ನಗಳು ಎದಿರಾದವಲ್ಲ ?

ಸತೀಶ್ : ಆರಂಭದಲ್ಲಿ ಸಾರಾಗವಾಗಿ ಸಾಗಿದ ಅಶೋಕನಿಗೆ ಬಳಿಕ ಹಲವು ಅಡೆತಡೆಗಳು ಎದಿರಾದವು. ಈ ಚಿತ್ರದ ನಿರ್ದೇಶಕ ವಿನೋದ್ ಧೋಂಡಾಳೆ ತೀರಿಕೊಂಡರು. ಆರ್ಥಿಕ ಮುಗ್ಗಟ್ಟು, ತಾಂತ್ರಿಕ ತೊಡಕು ಸೇರಿದಂತೆ ಸಾಕಷ್ಟು ತೊಂದರೆಗಳು ತಲೆದೂರಿದವು. ಹಾಗಾಗಿ ಈ ಸಿನಿಮಾದ ಕಥೆ ಮುಗಿಯಿತು, ರಿಲೀಸ್ ಆಗುವ ಮಾತೇ ಇಲ್ಲ ಎಂದುಕೊಂಡರು. ಇದೆಲ್ಲವನ್ನೂ ನಮ್ಮ ತಂಡ ಚಾಲೆಂಜ್ ಆಗಿ ತೆಗೆದುಕೊಂಡು ಇದೀಗ ಬಿಡುಗಡೆಯ ಹಂತದವರೆಗೂ ತಂದು ನಿಲ್ಲಿಸಿದ್ದೇವೆ.

ಬೆಳ್ಳಿತೆರೆಯಲಿ ವೀರ ಕಂಬಳ

ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು ನಮ್ಮ ನಾಡಿನ ಹೆಮ್ಮೆಯ ಕಥೆಯನ್ನು ಹೊತ್ತುಬಂದಿದ್ದಾರೆ. ಈ ಬಾರಿ

ತುಳುನಾಡಿನ ವೈಭವವನ್ನು ಬೆಳ್ಳಿತೆರೆಯಲ್ಲಿ ಸಾರುತ್ತಿದ್ದಾರೆ. ಕರಾವಳಿ ಭಾಗದ ಸಾಂಪ್ರದಾಯಿಕ ಕ್ರೀಡೆ ಕಂಬಳದ ಕಥೆಯನ್ನು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ಕಂಬಳದ ಜತೆಗೆ ತುಳುನಾಡಿನ ಸಾಂಪ್ರದಾಯಿಕ ಆಚಾರ ವಿಚಾರಗಳು ಕೂಡ ಚಿತ್ರದಲ್ಲಿವೆ.

ನನಗೆ ಮಾಡಿದ ಸಿನಿಮಾಗಳಿಂತ ಹೊಸತನ್ನು ತೆರೆಯಲ್ಲಿ ಕಟ್ಟಿಕೊಡಬೇಕು ಎಂಬ ಹಂಬಲ ಹಾಗಾಗಿ ಯಾವಾಗಲೂ ಹೊಸತನದ ಕಥೆಯನ್ನು ಹುಡುಕುತ್ತಿರುತ್ತೇನೆ. ಆಗ ನನಗೆ ಕಂಬಳದ ಕಥೆ ಹೊಳೆಯಿತು. ಕಂಬಳದ ಬಗ್ಗೆ ಸಿನಿಮಾ ಮಾಡಲು ನಿರ್ಧರಿಸಿದೆ. ನಿರ್ಮಾಪಕ ವಿಜಯ್ ಕುಮಾರ್ ಕೂಡ ಇದಕ್ಕೆ ಸಾಥ್ ನೀಡಿದರು. ಕಂಬಳದ ಇತಿಹಾಸವನ್ನು ಅರಿತು, ಅದರ ಬಗ್ಗೆ ಸಂಶೋಧನೆ ನಡೆಸಿ, ಸಾಕಷ್ಟು ವಿಚಾರಗಳನ್ನು ಕಲೆ ಹಾಕಿ ಸಿನಿಮಾದ ಕಥೆ ಹೆಣೆದೆ. ಇಲ್ಲಿ ನೈಜವಾದ ಕಥೆಯಿದ್ದು, ಕಂಬಳಕ್ಕೆ ಪ್ರೋತ್ಸಾಹ ನೀಡುತ್ತಿದ್ದ ರಿಯಲ್ ಡಾನ್ ಸ್ಟೋರಿ ಕೂಡ ತೆರೆಯಲ್ಲಿ ಸಾಗಲಿದೆ. ಅದು ಯಾರು ಎಂಬುದನ್ನು ಸಿನಿಮಾದಲ್ಲಿಯೇ ನೋಡಬೇಕು. ಕಂಬಳ ರೇಸ್‌ನಲ್ಲಿ ಓಡುವುದು ಅಷ್ಟು ಸುಲಭವಲ್ಲ, ಅದಕ್ಕಾಗಿ ನುರಿತವರನ್ನೇ ಚಿತ್ರಕ್ಕೆ ಕರೆತಂದೆವು. ಕಂಬಳದಲ್ಲಿ ವೇಗವಾಗಿ ಓಡಿ ದಾಖಲೆ

ಕಂಬಳ ಅನ್ನುವುದು ತುಳುನಾಡಿನ ರೈತರ ಸಂಭ್ರಮವಾಗಿದೆ. ನಾನು ಒಮ್ಮೆ ಕಂಬಳಕ್ಕೆ ಹೋದಾಗ ಅಲ್ಲಿ ನನಗೆ ನಿರ್ದೇಶಕರ ಪರಿಚಯವಾಯಿತು. ಇಬ್ಬರು ಕಂಬಳದ ಬಗ್ಗೆ ಚರ್ಚಿಸಿದೆವು. ಕಂಬಳದ ಬಗ್ಗೆಯೇ ಸಿನಿಮಾ ಮಾಡಲು ನಿರ್ಧರಿಸಿದೆವು, ಅಲ್ಲಿಂದ ವೀರ ಕಂಬಳ ಸಿನಿಮಾ ಸೆಟ್ಟೇರಿತು. ಈಗ ಅಂದುಕೊಂಡಂತೆ ಚಿತ್ರ ತೆರೆಗೆ ಬಂದಿದೆ. ಸಿನಿಮಾ ಬಿಡುಗಡೆಗೂ ಮೊದಲೇ ಚಿತ್ರದ ಬಗ್ಗೆ ಒಳ್ಳೆಯ ಸ್ಪಂದನೆ ವ್ಯಕ್ತವಾಗುತ್ತಿದೆ. ಅದು ನಮಗೆ ಖುಷಿಕೊಟ್ಟಿದೆ.

-ಅರುಣ್ ರೈ ತೊಡಾರು ನಿರ್ಮಾಪಕ

ಬರೆದ ಶ್ರೀನಿವಾಸ್ ಗೌಡ ಈ ಚಿತ್ರದಲ್ಲಿ ನಟಿಸಿದ್ದಾರೆ. ಚಿತ್ರದಲ್ಲಿ ಉತ್ತಮ ಸಂದೇಶವಿದ್ದು ಆ ಸಂದೇಶ ಸಾರುವ ಪಾತ್ರದಲ್ಲಿ ವೀರೇಂದ್ರ ಹೆಗ್ಗಡೆ ಅವರು ಅಭಿನಯಿಸಿದ್ದಾರೆ. ದ್ವೇಷಕ್ಕಿಂತ ಪ್ರೀತಿಯೇ ಮುಖ್ಯ ಎಂಬ ಸಂದೇಶ ಚಿತ್ರದಲ್ಲಿದೆ. ವೀರ ಕಂಬಳ ನಮ್ಮ ಮಣ್ಣಿನ ಕಥೆ ಎಂಬ ಹೆಮ್ಮೆ ನನಗಿದೆ ಎನ್ನುತ್ತಾರೆ ನಿರ್ದೇಶಕ ರಾಜೇಂದ್ರಸಿಂಗ್ ಬಾಬು.

ಈ ಚಿತ್ರದಲ್ಲಿ ನಾನು ದುಬೈನಲ್ಲಿ ನೆಲೆಸಿರುವ ಡಾನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಡಾನ್ ಅಂದಾಕ್ಷಣ ಇಲ್ಲಿ ವಯಲೆನ್ಸ್ ಇಲ್ಲ, ಹೊಡೆದಾಟವೂ ಇಲ್ಲ, ಕಂಬಳಕ್ಕೆ ಪ್ರೋತ್ಸಾಹ ನೀಡುವ ಡಾನ್ ಆಗಿ ನಟಿಸಿದ್ದೇನೆ. ಸಿನಿಮಾ ನೋಡಿದ ಮೇಲೆ ಅಂಡರ್ ವರ್ಲ್ಡ್ ಡಾನ್ ಪಾತ್ರ ಹೀಗೂ ಇರಬಹುದೆ ಎಂದು ಅಚ್ಚರಿಯಾಗುತ್ತದೆ. ಇದು ಹೊಸತನದ ಪಾತ್ರವಾಗಿದೆ ಎನ್ನುತ್ತಾರೆ ನಟ ಆದಿತ್ಯ. ಶ್ರೀನಿವಾಸ್ ಗೌಡ, ದಿವ್ಯಾ, ಶೋಭರಾಜ್ ಸೇರಿದಂತೆ ದೊಡ್ಡ ತಾರಾಬಳಗ ಚಿತ್ರದಲ್ಲಿದೆ. ಕಂಬಳದ ಮಹತ್ವ, ಅದರಲ್ಲಿ ಗೆಲುವು ಸಾಧಿಸಲು ಮಾಡುವ ತಂತ್ರಗಳು, ತಳುನಾಡಿನ ಸಂಸ್ಕೃತಿ ಎಲ್ಲವೂ ಚಿತ್ರದಲ್ಲಿವೆ.